# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 7 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 82 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4





# ಅ.15ರಿಂದ 24ರವರೆಗೆ ಮೈಸೂರು ದಸರಾ

## ಮುಖ್ಯಮಂತ್ರಿ ನೇತೃತ್ವದ ಉನ್ನತ ಮಟ್ಟದ ಸಭೆಗೆ ಸಿದ್ಧತೆ; ಮೈಸೂರಿನಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪೂರ್ವಭಾವಿ ಸಭೆ

● ಸಿಎಂ ನೇತೃತ್ವದ ಸಭೆಯಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಪಟ್ಟಿ ತಯಾರಿ ● ಗಜ ಪಯಣಕ್ಕೆ ಸಿದ್ಧತೆ ಬಗ್ಗೆಯೂ ಚರ್ಚೆ

**ಮೈಸೂರು, ಜು.6(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ದಸರಾ ಉನ್ನತ ಮಟ್ಟದ ಸಮಿತಿ ಸಭೆ ಇನ್ನೇನು ನಡೆಯಲಿದ್ದು, ಅದಕ್ಕೂ ಮುನ್ನ ಮೈಸೂರಿನಲ್ಲಿ ಪೂರ್ವಭಾವಿ ಸಭೆ ನಡೆಯಿತು.**

ಮೈಸೂರು ಅರಮನೆ ಮಂಡಳಿಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಸಲ್ಲಿಸಬೇಕಾದ ಪ್ರಸ್ತಾಪಗಳ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಅಕ್ಟೋಬರ್ 15ರಿಂದ 24ರವರೆಗೆ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವ ನಡೆಯಲಿದೆ. ಚಾಮುಂಡಿ ಬೆಟ್ಟದಲ್ಲಿ ನಡೆಯುವ ದಸರಾ ಉದ್ಘಾಟನಾ ಮುಹೂರ್ತ, ವಿಜಯದಶಮಿಯಂದು ನಂದಿ ಧ್ವಜ ಪೂಜೆಯ ಸಮಯ ನಿಗದಿ ಹಾಗೂ ವಿಶ್ವ ವಿಖ್ಯಾತ ಜಂಬೂಸವಾರಿ ಮೆರವಣಿಗೆ ಉದ್ಘಾಟನೆಯ ಮುಹೂರ್ತದ ಬಗ್ಗೆಯೂ ಚರ್ಚೆ ಮಾಡಲಾಯಿತು. ದಸರಾ ಉನ್ನತ ಮಟ್ಟದ ಸಭೆಗೂ ಮುನ್ನ ಈ ಎಲ್ಲಾ ವಿಚಾರಗಳು ಅಂತಿಮವಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇನ್ನು ದಸರಾ ಆರಂಭಕ್ಕೆ 60 ದಿನ ಮೊದಲು ಗಜಪಯಣ ಆರಂಭವಾಗಬೇಕು. ಗಜಪಯಣದ ದಿನಾಂಕವನ್ನು ಕೂಡ ದಸರಾ ಉನ್ನತಮಟ್ಟದ ಸಮಿತಿ ಸಭೆಗೂ ಮುನ್ನ ನಿರ್ಧರಿಸಿಕೊಳ್ಳಬೇಕು. ಮೈಸೂರು ಅರಮನೆಯಲ್ಲಿ ಗಜಪಡೆಯ ವಾಸ್ತವ್ಯ, ಮಾವುತರು ಹಾಗೂ ಕಾವಾಡಿಗಳ ಕುಟುಂಬದ ವಾಸ್ತವ್ಯಕ್ಕೆ ವ್ಯವಸ್ಥೆ ಸೇರಿದಂತೆ ಹಲವು ಸಿದ್ಧತೆಗಳ ಬಗ್ಗೆಯೂ ದಸರಾ ಉನ್ನತ ಮಟ್ಟದ ಸಮಿತಿ ಸಭೆಗೂ ಮುನ್ನ ತೀರ್ಮಾನವಾಗಬೇಕು ಎಂದು ಡಾ.ರಾಜೇಂದ್ರ ಸೂಚಿಸಿದರು. ವಿಧಾನ ಸಭಾ ಅಧಿವೇಶನದ ಬಳಿಕ ದಸರಾ ಉನ್ನತ



ಮಟ್ಟದ ಸಮಿತಿ ಸಭೆಯ ದಿನಾಂಕವನ್ನು ಮುಖ್ಯಮಂತ್ರಿಗಳ ಕಚೇರಿ ನಿರ್ಧಾರ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಅಂದಿನ ಸಭೆಯಲ್ಲಿ ಯಾವ ಯಾವ ಅಜೆಂಡಾಗಳು ಇರಬೇಕು ಎಂಬ ● 6ನೇ ಪುಟಕ್ಕೆ

# ಇಂದು ಸಿದ್ದರಾಮಯ್ಯರಿಂದ ದಾಖಲೆಯ 14ನೇ ಬಾರಿಗೆ ಬಜೆಟ್ ಮಂಡನೆ

## ಐದು ಗ್ಯಾರಂಟಿಗಳಿಗೆ ಹಣದ ಖಾತರಿ, ಸೇವಾ ಅಭಿವೃದ್ಧಿಗೂ ಹಣ ಮೀಸಲಿಡುವ ಸವಾಲು, ಇಷ್ಟೆಲ್ಲಾ ಭರಪೂರ ಯೋಜನೆಗೆ ಹಣ ಹೊಂದಿಸುವ ಮ್ಯಾಜಿಕ್


(ಸಂಗ್ರಹ ಚಿತ್ರ)

ಬೆಂಗಳೂರು, ಜು.6–ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ವಿಧಾನ ಸಭೆಯಲ್ಲಿ ದಾಖಲೆಯ 14ನೇ ಬಾರಿಗೆ ಬಜೆಟ್ ಮಂಡಿಸಲಿದ್ದಾರೆ.

ಈ ಬಾರಿ ಬಜೆಟ್ ಮಂಡನೆ ಸಿದ್ದರಾಮಯ್ಯ ಅವರಿಗೆ ಸವಾಲಿನದಾಗಿದ್ದು, ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಪರಿಷ್ಕೃತ ಬಜೆಟ್ ಮಂಡಿಸಲಾಗುತ್ತಿದೆ. ಜನತೆಗೆ ಹೊರೆಯಾಗದಂತೆ ಹಾಗೂ ಜನೋಪಯೋಗಿ ಬಜೆಟ್ ಮಂಡಿಸಬೇಕಾಗಿದ್ದು, ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಘೋಷಿಸಿದ್ದ 5 ಗ್ಯಾರಂಟಿ ಯೋಜನೆಗಳಿಗೆ 59 ಸಾವಿರ ಕೋಟಿ ರೂ. ಮೀಸಲಿಡಬೇಕಾಗಿದೆ. ಅಲ್ಲದೇ ರಾಜ್ಯದ ಅಭಿವೃದ್ಧಿ ಕಾಮಗಾರಿಗಳು, ನೀರಾವರಿ, ಶಿಕ್ಷಣ, ಆರೋಗ್ಯ ಇನ್ನಿತರೆ ಬಾಬ್ತುಗಳಿಗೂ ಹಣ ಹೊಂದಿಸಬೇಕಾದ ಅನಿವಾರ್ಯತೆ ಅವರಿಗಿದೆ.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ಫೆಬ್ರವರಿಯಲ್ಲಿ 3.09 ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸಿದ್ದು, ಈ ಬಾರಿ ಸಿದ್ದರಾಮಯ್ಯ ಮಂಡಿಸಲಿರುವ ಬಜೆಟ್ ಗಾತ್ರ 3.35 ಲಕ್ಷ ಕೋಟಿ ಇರಲಿದೆ ಎಂದು ಅಂದಾಜಿಸಲಾಗಿದೆ. ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಮುದ್ರಾಂಕ, ಅಬಕಾರಿ ಹಾಗೂ ಸಾರಿಗೆ ಇಲಾಖೆಗಳನ್ನು ಅವರು ಸಮರ್ಥವಾಗಿ ಬಳಸಿಕೊಳ್ಳಲಿದ್ದಾರೆ ಎಂದು ನಿರೀಕ್ಷಿಸಲಾಗಿದ್ದು, ಮುದ್ರಾಂಕ ಶುಲ್ಕ, ಅಬಕಾರಿ ಸುಂಕ ಹಾಗೂ ಮೋಟಾರು ವಾಹನ ತೆರಿಗೆ ಹೆಚ್ಚಳ ಮಾಡುವ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡಲಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ಪಂಚ ಗ್ಯಾರಂಟಿ ಯೋಜನೆಗಳಿಗೆ ಬರೋಬ್ಬರಿ 59 ಸಾವಿರ ಕೋಟಿ ಹಣ ಮೀಸಲಿಡುವ ಜೊತೆಗೆ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರ ಗೌರವ ಧನ ಹೆಚ್ಚಳ, ಇಂದಿರಾ ಕ್ಯಾಂಟೀನ್‌ಗೆ ಅನುದಾನ, ಶಿಕ್ಷಣ, ● 6ನೇ ಪುಟಕ್ಕೆ



**ವರ್ಗಾವಣೆ ಭ್ರಷ್ಟಾಚಾರ ಆರೋಪ**

# ಸ್ಪೀಕರ್ ಒಪ್ಪಿದರೆ ಪೆನ್‌ಡ್ರೈವ್ ಸದನದಲ್ಲೇ ಎಲ್ಲರಿಗೂ ಕೇಳಿಸುತ್ತೇನೆ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸವಾಲು ● ಗಾಳಿಯಲ್ಲಿ ಮತ್ತೆ ಗುಂಡು ಹೊಡೆಯಬೇಡಿ; ಜಾರ್ಜ್ ಲೇವಡಿ

ಬೆಂಗಳೂರು, ಜು.6(ಕೆಎಂಶಿ)– ವರ್ಗಾವಣೆ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪ ಹಾಗೂ ಪೆನ್‌ಡ್ರೈವ್ ವಿಧಾನಸಭೆಯಲ್ಲಿ ಪ್ರತಿಧ್ವನಿಸಿತು.



ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಾಲಕ ಕಂ ನಿರ್ವಾಹಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಶೂನ್ಯವೇಳೆಯಲ್ಲಿ ಚರ್ಚೆ ನಡೆಯುವಾಗ ಸಚಿವರಾದ ಕೆ.ಜೆ.ಜಾರ್ಜ್ ಹಾಗೂ ಎಂ.ಬಿ. ಪಾಟೀಲ್ ಈ ಪ್ರಕರಣ ಪ್ರಸ್ತಾಪಿಸಿ, ಆರೋಪ ಕುರಿತ ಸಾಕ್ಷ್ಯಾಧಾರ ಬಯಲು ಮಾಡುವಂತೆ ಕುಮಾರಸ್ವಾಮಿಗೆ ಸವಾಲು ಹಾಕಿದರು. ಈ ಸವಾಲು ಸ್ವೀಕರಿಸಿದ ಕುಮಾರಸ್ವಾಮಿ, ಸಭಾಧ್ಯಕ್ಷರು ಒಪ್ಪಿಗೆ ನೀಡಲಿ, ಸದನದ 224 ಸದಸ್ಯರಿಗೂ ಪೆನ್‌ಡ್ರೈವ್ ನೀಡುತ್ತೇನೆ. ಇಲ್ಲಿಯೇ ಎಲ್ಲರಿಗೂ ಕೇಳಿಸುತ್ತೇನೆ. ಆದರೆ ಒಂದು ಷರತ್ತು, ಸಂಬಂಧಪಟ್ಟ ಸಚಿವರ ವಿರುದ್ಧ ಕ್ರಮ ಜರುಗಿಸುವ ಭರವಸೆಯನ್ನು ನನಗೆ ನೀಡಬೇಕು ಎಂದರು. ಇದಕ್ಕೂ ಮುನ್ನ ಜಾರ್ಜ್, ಈ ಹಿಂದೆ ಆರೋಪಗಳಿಗೆ ಸಂಬಂಧಿಸಿದಂತೆ ಎರಡು ಬಾರಿ ರಾಜೀನಾಮೆ ಪಡೆದುಕೊಂಡಿದ್ದಿರಿ, ಆ ನಂತರ ನಡೆದ ತನಿಖೆಯಲ್ಲಿ ನಾನು ಆರೋಪದಿಂದ ಮುಕ್ತನಾದೆ, ಸಿಬಿಐ ವರದಿ ಬಂದ ನಂತರ ತಪ್ಪಾಗಿದೆ ಎಂದು ಒಂದು ಮಾತನ್ನೂ ಹೇಳಲಿಲ್ಲ ಎಂದು ಕುಮಾರಸ್ವಾಮಿಯವರನ್ನು ಛೇಡಿಸಿ, ಇಂಧನ ಇಲಾಖೆಯಲ್ಲಿ ವರ್ಗಾವಣೆಗೆ 10 ಕೋಟಿ ರೂ. ನೀಡಬೇಕೆಂಬ ಆರೋಪ ಮಾಡಿ ● 9ನೇ ಪುಟಕ್ಕೆ

# ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲೇ ವರ್ಗಾವಣೆ ದಂಧೆ ನಡೆಯುತ್ತಿದೆ



ಮೈಸೂರು, ಜು.6(ಬಿಎಲ್‌ಯು) ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲೇ ವರ್ಗಾವಣೆ ದಂಧೆ ನಡೆಯುತ್ತಿದೆ. ಟ್ಯಾಕ್ಸ್ ಕೊಡದಿದ್ದರೆ ಶಾಸಕರ ವರ್ಗಾವಣೆ ಶಿಫಾರಸ್ಸು ಪತ್ರಕ್ಕೂ ಕವಡೆ ಕಾಸಿನ ಕಿಮ್ಮತ್ತು ಇಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದ್ದಾರೆ. ಮೈಸೂರಿನಲ್ಲಿ ಗುರುವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಶಾಸಕರ ಹಣೆಬರಹ ಕೂಡ ಇದೇ ಆಗಿದೆ. ಟ್ಯಾಕ್ಸ್ ಕೊಡದಿದ್ದರೆ ಯಾವ ಶಾಸಕರ ವರ್ಗಾವಣೆ ಶಿಫಾರಸ್ಸು ಪತ್ರಕ್ಕೂ ಗೌರವ ಇರುವುದಿಲ್ಲ. ಎಲ್ಲಾ ಹುದ್ದೆಗಳ ವರ್ಗಾವಣೆ ಹಣ ಕೊಟ್ಟರೆ ಮಾತ್ರ ಆಗುತ್ತಿದೆ. ಹಣ ಕೊಟ್ಟರೆ ಕೇಳಿದ ಜಾಗಕ್ಕೆ ವರ್ಗಾವಣೆ ಮಾಡುತ್ತಾರೆ ಎಂದು ಕುಮಾರಸ್ವಾಮಿ ದೂರಿದರು. ಜನಸೇವೆ ಮಾಡುತ್ತೇವೆ ಅಂತಾರೆ, ಇದೇನಾ ಇವರ ಜನಸೇವೆ ಎಂದು ಖಾರವಾಗಿ ಪ್ರಶ್ನಿಸಿದ ಕುಮಾರಸ್ವಾಮಿ ಅವರು, ಈಗಾಗಲೇ ದ್ವೇಷ ರಾಜಕಾರಣ ಆರಂಭವಾಗಿದೆ. ವಿರೋಧ ಪಕ್ಷದ ಶಾಸಕರನ್ನು ಟಾರ್ಗೆಟ್ ಮಾಡಿ ರಾಜಕೀಯ ಪಿತೂರಿ ನಡೆಸುತ್ತಿದ್ದಾರೆ ಎಂದು ಕಿಡಿಕಾರಿದರು. ಯಾರ ಮನೆ ಹಾಳು ಮಾಡಿಕೊಂಡರೇನು, ನಮಗೆ ಬರಬೇಕಾದ ಹಣ ತಿಜೋರಿ ಸೇರಬೇಕಷ್ಟೇ ಎಂಬ ಧೋರಣೆ ತಳೆದಿರುವ ಮಂತ್ರಿಗಳು, ಲೂಟಿ ಮಾಡಿ ಐಷಾರಾಮಿ ಜೀವನ ಮಾಡುತ್ತಿದ್ದಾರೆ. ಈ ಮೂಲಕ ಜನರ ಬದುಕಿನ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಚುನಾವಣೆಯಲ್ಲಿ ಮಾಡಿರುವ ಖರ್ಚು ವೆಚ್ಚವನ್ನು ವರ್ಗಾವಣೆ ದಂಧೆಯಿಂದ ಭರಿಸುತ್ತಿದ್ದಾರೆ. ಜೊತೆಗೆ ಉತ್ತರ ಭಾರತಕ್ಕೆ ಕಳುಹಿಸಲು ಹಣ ಬಾಚುತ್ತಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದರು.

ನಾನು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದೆ, ಆದರೆ ಇವರಂತೆ ಕೀಳು ಮಟ್ಟದ ರಾಜಕೀಯ ಮಾಡಲಿಲ್ಲ. ನಾನು ಪ್ರತಿನಿಧಿಸುವ ಚನ್ನಪಟ್ಟಣ ವಿಧಾನಸಭಾ ● 9ನೇ ಪುಟಕ್ಕೆ

**ವಿಧಾನಸಭೆಯಲ್ಲಿ ಭಾರೀ ಸದ್ದು ಮಾಡಿದ ಮಂಡ್ಯದಲ್ಲಿ ಸಾರಿಗೆ ಬಸ್ ಚಾಲಕ ಕಂ ನಿರ್ವಾಹಕ ಆತ್ಮಹತ್ಯೆ ಯತ್ನ ಪ್ರಕರಣ**

# ಹಿರಿಯ ಪೊಲೀಸ್ ಅಧಿಕಾರಿಗಳಿಂದ ತನಿಖೆ

● ಮಾಜಿ ಸಿಎಂ ಕುಮಾರಸ್ವಾಮಿ ಪಟ್ಟಿಗೆ ಮಣಿದ ಸರ್ಕಾರ ● ಕುಮಾರಸ್ವಾಮಿ ಹೋರಾಟಕ್ಕೆ ಬಿಜೆಪಿ ಸಾಥ್ ● ವಿಧಾನಸಭೆಯಲ್ಲಿ ಪರಸ್ಪರ ವಾಕ್ಸಮರ; ಏಕವಚನದಲ್ಲೇ ನಿಂದನೆ ● ಕಲಾಪ ಮುಂದೂಡಿ ಸ್ಪೀಕರ್ ಸಂಧಾನ ಯತ್ನವೂ ಫಲ ನೀಡಲಿಲ್ಲ

ಬೆಂಗಳೂರು,ಜು.6(ಕೆಎಂಶಿ)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಾಲಕ ಕಂ ನಿರ್ವಾಹಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣವನ್ನು ಹಿರಿಯ ಪೊಲೀಸ್ ಅಧಿಕಾರಿ ಹಾಗೂ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಂದ ತನಿಖೆ ನಡೆಸುವುದಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧಾನಸಭೆಯಲ್ಲಿ ಪ್ರಕಟಿಸಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಚಲುವರಾಯಸ್ವಾಮಿ ರಾಜೀನಾಮೆ ಕೊಡಿಸಿ ಉನ್ನತ ಮಟ್ಟದ ತನಿಖೆ ನಡೆಸುವಂತೆ ಮಾಜಿ ಮುಖ್ಯಮಂತ್ರಿ ● 9ನೇ ಪುಟಕ್ಕೆ



# ಮೈಷುಗರ್ ಕಾರ್ಯಾರಂಭ

## ಕಬ್ಬು ನುರಿಸುವ ಕಾರ್ಯಕ್ಕೆ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಚಾಲನೆ



ಮಂಡ್ಯ ಜು.6(ಮೋಹನ್‌ರಾಜ್)–ಮಂಡ್ಯದ ಮೈಷುಗರ್ ಕಾರ್ಯಾರಂಭಿಸಿದೆ. ಪ್ರಸಕ್ತ ಸಾಲಿನ ಕಬ್ಬು ನುರಿಸುವ ಕಾರ್ಯಕ್ಕೆ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಗುರುವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪ್ರಸಕ್ತ ಸಾಲಿನ ಹಂಗಾಮಿನಲ್ಲಿ ಪ್ರತಿದಿನ 3 ಸಾವಿರ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ. ಕಾರ್ಖಾನೆಯಲ್ಲಿ ಟರ್ಬೈನ್ ಸಮಸ್ಯೆಯಿಂದ ಕಬ್ಬು ನುರಿಯುವ ಕಾರ್ಯ ತಡವಾಗಿದೆ. ಇಂದು ಮತ್ತು ನಾಳೆ 1500 ರಿಂದ 2000 ಟನ್, ಕ್ರಮೇಣ ಮೂರು ಸಾವಿರ ಟನ್‌ನಿಂದ ಐದು ಸಾವಿರ ಟನ್‌ವರೆಗೂ ಕಬ್ಬು ನುರಿಯುವ ಕೆಲಸ ನಡೆಯಲಿದೆ ಎಂದರು.

ರೈತರಿಗೆ ಎಫ್‌ಆರ್‌ಪಿ ಪ್ರಕಾರ ದರ ನೀಡಿ ಕಬ್ಬು ಖರೀದಿಸಲಾಗುವುದು. ಕಳೆದ ಬಾರಿ ಕಡಿಮೆ ರಿಕವರಿ ಇದ್ದರೂ ರೈತರಿಗೆ 2800 ರೂ. ನೀಡಲಾಗಿದೆ. ಪ್ರಸಕ್ತ ಹಂಗಾಮಿನಲ್ಲಿ 3 ಲಕ್ಷ ಟನ್ ಕಬ್ಬು ನುರಿಸುವ ಗುರಿ ಇದೆ. ರೈತರು ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವಂತೆ ಮನವಿ ಮಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಸರ್ಕಾರದ ಬೆಂಬಲದಿಂದ ಕಾರ್ಖಾನೆ ಪ್ರಾರಂಭವಾಗಿದೆ. ಕಬ್ಬು ಅರೆಯುವ ಕಾರ್ಯ ಹೆಚ್ಚು ನಡೆಯುತ್ತದೆ. ಮುಂದಿನ ದಿನಗಳಲ್ಲಿ ಕಾರ್ಖಾನೆ ಉನ್ನತ ಮಟ್ಟದಲ್ಲಿ ನಡೆಯಲಿದೆ ಎಂದರು. ಸಂಸದೆ ಸುಮಲತಾ ಅಂಬರೀಶ್ ಮಾತನಾಡಿ, ಕಬ್ಬು ಅರೆಯುವಿಕೆ ಪ್ರಾರಂಭವಾಗಿರುವುದಕ್ಕೆ ನನ್ನ ಸ್ವಾಗತವಿದೆ. ಮೈಷುಗರ್‌ನಲ್ಲಿ ಕೆಲವು ಸಮಸ್ಯೆ ಮತ್ತು ಗೊಂದಲಗಳಿವೆ. ಅವುಗಳನ್ನು ಸರಿಪಡಿಸಿಕೊಂಡು ಹೋದರೆ ಮುಂದೆ ಯಾವುದೇ ಸಮಸ್ಯೆ ಬರಲ್ಲ. 40 ಕೋಟಿ ಕರೆಂಟ್ ಬಿಲ್ ಬಾಕಿ ಬಗ್ಗೆ ಕೇಂದ್ರದ ಇಂಧನ ಸಚಿವರಿಗೆ ಪತ್ರ ಬರೆದು ಅದನ್ನು ಮನ್ನಾ ಮಾಡುವಂತೆ ಮನವಿ ಮಾಡುತ್ತೇನೆ ಎಂದು ಹೇಳಿದರು.

ಇದೇ ವೇಳೆ ಶಾಸಕರಾದ ಗಣಿಗ ರವಿಕುಮಾರ್, ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಕಾರ್ಖಾನೆ ತಾಂತ್ರಿಕ ವ್ಯವಸ್ಥಾಪಕ ನಿರ್ದೇಶಕ ಪಾಟೀಲ್ ಅಪ್ಪ ಸಾಹೇಬ್, ರೈತ ಮುಖಂಡರಾದ ಸುನಂದಾ ಜಯರಾಂ, ಕುಮಾರಿ, ಕನ್ನಡಸೇನೆ ಮಂಜು ಸೇರಿದಂತೆ ಹಲವರು ಭಾಗಿಯಾಗಿದ್ದರು.

# ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದರೆ ಚಲುವರಾಯಸ್ವಾಮಿಯನ್ನ ಸಚಿವ ಸ್ಥಾನದಿಂದ ವಜಾ ಮಾಡಲಿ

**• ಮಾಜಿ ಸಿಎಂ ಕುಮಾರಸ್ವಾಮಿ ಆಗ್ರಹ • ಬಸ್ ಚಾಲಕ ಆತ್ಮಹತ್ಯೆ ಪ್ರಯತ್ನದ ಹಿನ್ನೆಲೆ • ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ಭೇಟಿ; ಚಾಲಕನ ಆರೋಗ್ಯ ವಿಚಾರಣೆ**



ಮೈಸೂರು, ಜು.6 (ಬಿಎಲ್‌ಯು)– ಮಂಡ್ಯದಲ್ಲಿ ಕೆಎಸ್ ಆರ್‌ಟಿಸಿ ಬಸ್ ಚಾಲಕನ ಆತ್ಮಹತ್ಯೆ ಯತ್ನಕ್ಕೆ ಪ್ರಮುಖ ಕಾರಣಕರ್ತರಾದ ಕೃಷಿ ಸಚಿವ ಚಲುವರಾಯಸ್ವಾಮಿ ಅವರನ್ನು ಕೂಡಲೇ ಸಚಿವ ಸ್ಥಾನದಿಂದ ವಜಾ ಮಾಡಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ದಾಖಲಾಗಿರುವ ಚಾಲಕ ಜಗದೀಶ್ ಆರೋಗ್ಯ ವಿಚಾರಿಸಿದ ನಂತರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರಕ್ಕೆ ಮಾನ ಮರ್ಯಾದೆ ಇದ್ದರೆ ಚಲುವರಾಯಸ್ವಾಮಿಯನ್ನು ಸಚಿವ ಸ್ಥಾನದಿಂದ ಕಿತ್ತು ಹಾಕಬೇಕು ಎಂದು ಹೇಳಿದರು.

ಆರೋಪ ಹೊತ್ತ ಮಂತ್ರಿ ಬಗ್ಗೆ ತನಿಖೆ ಆಗಬೇಕಾದರೆ, ಆತ ಅಧಿಕಾರದಲ್ಲಿ ಇರಬಾರದು. ಚಲುವರಾಯಸ್ವಾಮಿ ಅವರ ಉದ್ದಟನದ ವರ್ತನೆ ನೋಡಿದ್ರೆ ನ್ಯಾಯಯುತವಾಗಿ ತನಿಖೆ ಸಾಧ್ಯವೇ ಎಂದು ಪ್ರಶ್ನಿಸಿದ ಹೆಚ್.ಡಿ.ಕುಮಾರಸ್ವಾಮಿ, ಇಂತಹ ಮಂತ್ರಿಯನ್ನು ಸಂಪುಟದಲ್ಲಿ ಇಟ್ಟುಕೊಂಡರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತಾ ಎಂದು ಕುಮಾರಸ್ವಾಮಿ ಮರು ಪ್ರಶ್ನಿಸಿದರು.

ವಿಧಾನಸಭಾ ಚುನಾವಣೆ ವೇಳೆ ಜಗದೀಶ್ ಪತ್ನಿ ಜೆಡಿಎಸ್ ಪರ ಪ್ರಚಾರ ಮಾಡಿದ ಕಾರಣಕ್ಕೆ ರಾಜಕೀಯ ಸೇಡಿಗೆ ಆಕೆಯ ಪತಿಯನ್ನು ಚಲುವರಾಯಸ್ವಾಮಿ ವರ್ಗಾವಣೆ ಮಾಡಿಸಿದ್ದಾರೆ. ಜಗದೀಶ್‌ನ ಏಕಾಏಕಿ ವರ್ಗಾವಣೆಗೆ ಕಾರಣವನ್ನು ತಿಳಿಸಿಲ್ಲ. ಚಲುವರಾಯಸ್ವಾಮಿ ನೀಡಿದ ಆದೇಶದಿಂದಲೇ ನನ್ನ ವರ್ಗಾವಣೆ ಮಾಡಿದ್ದಾರೆ ಎಂದು ಜಗದೀಶ್ ಡೆತ್‌ನೋಟ್‌ನಲ್ಲಿ ನೇರ ಆರೋಪ ಮಾಡಿದ್ದಾರೆ ಎಂದು ಕುಮಾರಸ್ವಾಮಿ ದೂರಿದರು.

> “ರಾಜಕೀಯ ಮಾಡಲು ಇತಿ–ಮಿತಿ ಇದೆ. ಆದರೆ ತಮ್ಮ ರಾಜಕೀಯ ತೆವಲಿಗೆ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ಇದಕ್ಕಾಗಿ ರಾಜ್ಯದ ಜನರು ಇವರನ್ನು ಗೆಲ್ಲಿಸಿ ಅಧಿಕಾರಕ್ಕೆ ತಂದಿದ್ದಾರೆಯೇ? –ಕುಮಾರಸ್ವಾಮಿ

ಚಾಲಕ ಜಗದೀಶ್ ಆತ್ಮಹತ್ಯೆ ಯತ್ನ ಪ್ರಕರಣದಲ್ಲಿ ಮಂತ್ರಿಗಳ ಮೇಲೆ ಮಾಡಿರುವ ಆರೋಪದ ಬಗ್ಗೆ ಇನ್ನು ಎಫ್‌ಐಆರ್ ದಾಖಲಿಸಿಲ್ಲವೇಕೆ ಎಂದು ಪ್ರಶ್ನಿಸಿದರೆ, ಆತ ಇನ್ನು ಸತ್ತಿಲ್ಲ, ಆ ಕಾರಣಕ್ಕೆ ಇನ್ನು ಎಫ್‌ಐಆರ್ ಮಾಡಿಲ್ಲ ಎಂದು ಪೊಲೀಸ್ ಅಧಿಕಾರಿಗಳು ಹೇಳುತ್ತಾರೆ. ಇದು ಈ ಸರ್ಕಾರದ ವ್ಯವಸ್ಥೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಕಿಡಿಕಾರಿದರು.

ಊರಿನಲ್ಲಿರುವ ರೌಡಿಗಳಿಂದ ಜಗದೀಶ್ ಕುಟುಂಬಕ್ಕೆ ಧಮ್ಕಿ ಹಾಕಿಸಿದ್ದಾರೆ. ಮತ್ತೊಂದೆಡೆ ಚಾಲಕ ಜಗದೀಶ್‌ಗೆ ಅಧಿಕಾರಿಗಳ ಮೂಲಕ ಕಿರುಕುಳ ನೀಡಿದ್ದಾರೆ. ಈ ಎಲ್ಲಾ ವಿವರವನ್ನು ಚಾಲಕ ಜಗದೀಶ್ ಡೆತ್‌ನೋಟ್‌ನಲ್ಲಿ ಬರೆದಿದ್ದಾನೆ. ಇಂತಹ ವ್ಯವಸ್ಥೆ ತಂದಿರುವ ಇದು ಒಂದು ಸರ್ಕಾರವೇ ಎಂದು ಕಿಡಿಕಾರಿದ ಕುಮಾರಸ್ವಾಮಿ, ಈಗಲಾದರೂ ಇಂತಹ ಮಂತ್ರಿಗಳನ್ನು ಹದ್ದುಬಸ್ತಿನಲ್ಲಿಡಿ ಎಂದು ಕಾಂಗ್ರೆಸ್ ಸರ್ಕಾರಕ್ಕೆ ಚಾಟಿ ಬೀಸಿದರು.

# ಸಿಎಫ್‌ಟಿಆರ್‌ಐನಲ್ಲಿ ಸಿರಿಧಾನ್ಯ ಆಧಾರಿತ 9 ಆಹಾರ ಉತ್ಪನ್ನಗಳ ಬಿಡುಗಡೆ

ಮೈಸೂರು,ಜು.6(ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಒನ್ ವೀಕ್–ಒನ್ ಲ್ಯಾಬ್ ಯೋಜನೆಯಡಿ ಗುರುವಾರ ಆರಂಭವಾದ ಮುಕ್ತ ದಿನ ಕಾರ್ಯಕ್ರಮದಲ್ಲಿ ಸಂಸ್ಥೆಯ ಒಂಭತ್ತು ಆಹಾರ ಉತ್ಪನ್ನಗಳು ಹಾಗೂ ತಂತ್ರಜ್ಞಾನವನ್ನು ಬಿಡುಗಡೆ ಮಾಡಲಾಯಿತು.

ಸಿರಿಧಾನ್ಯ ಆಧಾರಿತ ಸೆಮೋಲಿನ್, ಪುಟ್ಟು ಪೊಡಿ, ಇಡ್ಲಿ ಮಿಕ್ಸ್, ಉಪ್ಮಾಮಿಕ್ಸ್, ಕೇಸರಿ ಹಲ್ವಾ ಮಿಕ್ಸ್, ಕಿಚಡಿ ಮಿಕ್ಸ್, ರಾಗಿ ಮಾಲ್ಟ್, ರಾಗಿ ಆಧಾರಿತ ರೆಡಿ ಟು ಈಟ್ ವೇವಿಂಗ್ ಫುಡ್ ಹಾಗೂ ಮಿಲೆಟ್ ಕೀ ಚೈನ್ ಅನ್ನು ಸಂಸ್ಥೆಯು ಪರಿಚಯಿಸಿದ್ದು, ಮುಂಬೈನ ಐಐಟಿ ಅಧಿಕಾರಿಯಾದ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಂಶೋಧನಾ ಮಂಡಳಿ ಅಧ್ಯಕ್ಷೆ ಪ್ರೊ. ರೇಖಾ ಎಸ್.ಸಿಂಘಾಲ್ ಅವರು ಉತ್ಪನ್ನಗಳನ್ನು ಬಿಡುಗಡೆ ಮಾಡಿದರು.

ಈ ಸಂದರ್ಭ ಮಾತನಾಡಿದ ಅವರು, ಸಿಎಫ್‌ಟಿಆರ್‌ಐನಲ್ಲಿ ಸಂಶೋಧನೆ ಮಾಡಿ ಅಭಿವೃದ್ಧಿಪಡಿಸಿದ ಉತ್ಪನ್ನಗಳು 'ಆಹಾರ ಸಂಸ್ಕರಣಾ ಪ್ರಯೋಗಾಲಯದ ಬಗ್ಗೆ ವರ್ಷಕ್ಕೊಮ್ಮೆ ಸಾರ್ವಜನಿಕರಿಗೆ ಪರಿಚಯಿಸಬೇಕು ಹಾಗೂ ಸಮಾಜಕ್ಕೆ ಅದರ ಉಪಯೋಗವಾಗುವಂತೆ ಮುಕ್ತ ದಿನದಲ್ಲಿ ಮಾಹಿತಿ ನೀಡಬೇಕು ಎಂದರು.




ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಒನ್ ವೀಕ್–ಒನ್ ಲ್ಯಾಬ್ ಅಡಿ ಗುರುವಾರ ಆಯೋಜಿಸಿದ್ದ ಓಪನ್ ಡೇ ಕಾರ್ಯಕ್ರಮದಲ್ಲಿ ಇಂಟರ್‌ನ್ಯಾಷನಲ್ ಕ್ರಾಫ್ಟ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ದ ಸೆಮಿ –ಏರಿಡ್‌ಟ್ರಾಫಿಕ್ಸ್ ಡೈರೆಕ್ಟರ್ ಜನರಲ್ ಡಾ.ಜಾಕ್ವೆಲಿನ್ ಡಿ 'ಆರೋಸ್ ಹೆಗಸ್ ಹಾಗೂ ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಒಡಂಬಡಿಕೆಗೆ ಸಹಿ ಮಾಡಿದರು. ಸಿಎಫ್‌ಟಿಆರ್‌ಐ ಸಂಶೋಧನಾ ಮಂಡಳಿ ಅಧ್ಯಕ್ಷೆ ಪ್ರೊ. ರೇಖಾ ಎಸ್.ಸಿಂಘಾಲ್, ಮಾಜಿ ನಿರ್ದೇಶಕ ಹಾಗೂ ಐಐಟಿ ತಿರುಪತಿ ಪ್ರಾಧ್ಯಾಪಕ ಡಾ.ಕೆಎಸ್‌ಎಂಎಸ್ ರಾಘವ್ ರಾವ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಪೌಷ್ಟಿಕ ಆಹಾರ, ಸಂಸ್ಕರಿಸಿದ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರುಕಟ್ಟೆಗೆ ನೀಡುವುದರಿಂದ ಜನರ ಆರೋಗ್ಯ ಸುರಕ್ಷತೆ ಕಾಪಾಡುವ ಜೊತೆಗೆ ಕಲಬೆರಕೆ ಆಹಾರ ಸೇವಿಸುವುದನ್ನು ತಪ್ಪಿಸಬಹುದು ಎಂದ ಅವರು, ಆಹಾರ ಸಂಸ್ಕರಣೆ ಮೇಲೆ ಸಿಎಫ್‌ಟಿಆರ್‌ಐ ನಡೆಸುತ್ತಿರುವ ಸಂಶೋಧನೆಗಳ ಪ್ರಯೋಜನ ಸಮಾಜಕ್ಕೆ ಲಭ್ಯವಾದರೆ ಮಾತ್ರ ಸಂಸ್ಥೆಯ ಪ್ರಯತ್ನ ಸಾರ್ಥಕವಾಗಲಿದೆ ಎಂದರು.

ಇದೇ ವೇಳೆ ಇಂಟರ್‌ನ್ಯಾಷನಲ್ ಕ್ರಾಪ್ಸ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಫಾರ್ ದ ಸೆಮಿ–ಏರಿಡ್ ಟ್ರಾಪಿಕ್ಸ್‌ನೊಂದಿಗೆ ಸಂಶೋಧನೆ ಕುರಿತು ಸಿಎಫ್‌ಟಿಆರ್‌ಐ ಒಡಂಬಡಿಕೆಗೆ ಸಹಿ ಮಾಡಿತು. ಒಣ ಭೂಮಿ ಬೇಸಾಯ ಬೆಳೆಗಳು (ಮಿಲೆಟ್ಸ್ ಅಂಡ್ ಪಲ್ಸಸ್) ಕುರಿತು ಸಂಶೋಧನೆ ಒಡಂಬಡಿಕೆ ಉದ್ದೇಶವಾಗಿದೆ. ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಮತ್ತು ಐಸಿಆರ್ ಐಎಸ್‌ಎಟಿ ಡೈರೆಕ್ಟರ್ ಜನರಲ್ ಡಾ.ಜಾಕ್ವೆಲಿನ್ ಡಿ ಆರೋಸ್ ಹಗೆಸ್ ಅವರು ಒಡಂಬಡಿಕೆ ದಾಖಲೆಗಳನ್ನು ವಿನಿಮಯ ಮಾಡಿಕೊಂಡರು.

ಸಿಎಫ್‌ಟಿಆರ್‌ಐ ಮಾಜಿ ನಿರ್ದೇಶಕ ಹಾಗೂ ಐಐಟಿ ತಿರುಪತಿ ಪ್ರಾಧ್ಯಾಪಕ ಡಾ.ಕೆ.ಎಸ್.ಎಂ.ಎಸ್. ರಾಘವ ರಾವ್ ಹಾಗೂ ಇತರ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಗುರುವಾರ ಸಿಎಫ್‌ಟಿಆರ್‌ಐನಲ್ಲಿ ಸಿರಿಧಾನ್ಯಗಳ ದಿನವನ್ನೂ ಆಚರಿಸಲಾಯಿತು. ಸಿರಿಧಾನ್ಯಗಳನ್ನು ಬೆಳೆಯುವ ಕ್ರಮ, ಅವುಗಳಿಂದ ತಯಾರಿಸಬಹುದಾದ ಆಹಾರ ಪದಾರ್ಥ, ಅದರಿಂದಾಗುವ ಪ್ರಯೋಜನ ಕುರಿತಂತೆ ವಸ್ತುಪ್ರದರ್ಶನದಲ್ಲಿ ಮಾಹಿತಿ ನೀಡಲಾಯಿತು.

# ಹಾಸ್ಟೆಲ್‌ಗಳಲ್ಲಿ ಸಿಸಿ ಕ್ಯಾಮರಾ ಕಡ್ಡಾಯ

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನೂತನ ಜಿಲ್ಲಾ ಅಧಿಕಾರಿ ರಾಘವೇಂದ್ರ ಸಲಹೆ**



ಮೈಸೂರು, ಜು.6–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ಎಲ್ಲಾ ಹಾಸ್ಟೆಲ್‌ಗಳಲ್ಲಿ ಕಡ್ಡಾಯವಾಗಿ ಸಿಸಿ ಕ್ಯಾಮರಾ ಅಳವಡಿಸುವುದರೊಂದಿಗೆ ಗುಣಮಟ್ಟದ ಆಹಾರವನ್ನು ವಿದ್ಯಾರ್ಥಿಗಳಿಗೆ ನೀಡಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನೂತನ ಜಿಲ್ಲಾ ಅಧಿಕಾರಿ ರಾಘವೇಂದ್ರ ಕರೆ ನೀಡಿದರು.

ಕುವೆಂಪುನಗರದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಬಾಲಕಿಯರ ವಸತಿನಿಲಯದಲ್ಲಿ ನಡೆದ ನಿಲಯಪಾಲಕರುಗಳ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು ಜಿಲ್ಲೆಯಾಗಿದ್ದು, ಎಲ್ಲರೂ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ವಿದ್ಯಾರ್ಥಿನಿಯರು ಹಾಸ್ಟೆಲ್‌ನಿಂದ ಕಾಲೇಜಿಗೆ ಹೋದಾಗ ಮತ್ತು ಬಂದಾಗ ಹಾಜರಾತಿ ಕಡ್ಡಾಯಗೊಳಿಸಬೇಕು. ನಿಗದಿತ ಸಮಯದೊಳಗೆ ಹಾಸ್ಟೆಲ್‌ಗೆ ಬರುವಂತೆ ನೋಡಿಕೊಳ್ಳಬೇಕು. ಕುಡಿಯುವ ನೀರು ಶುದ್ಧವಾಗಿರಬೇಕು. ಅಡುಗೆ ಮನೆ, ಶೌಚಾಲಯಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಸರ್ಕಾರದಿಂದ ಬರುವ ಆದೇಶಗಳನ್ನು ಪಾಲಿಸಬೇಕು ಎಂದ ಅವರು, ನಿಮ್ಮೆಲ್ಲರ ಸಹಕಾರ ಇರಲಿ ಎಂದು ಹೇಳಿದರು.

ಈ ವೇಳೆ ಮೈಸೂರು ತಾಲೂಕು ಕಲ್ಯಾಣಾಧಿಕಾರಿ ವಿಶ್ವನಾಥ್ ಹಾಗೂ ಎಲ್ಲಾ ನಿಲಯಪಾಲಕರು ಹಾಜರಿದ್ದರು.

# ಗೃಹಜ್ಯೋತಿಗೆ ಅರ್ಜಿ ಹಾಕಲು ಶುಲ್ಕ ₹20 ಮಾತ್ರ

ಮೈಸೂರು,ಜು.6– ಮೈಸೂರು ಜಿಲ್ಲೆಯ ಎಲ್ಲಾ ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಸೈಬರ್ ಸೆಂಟರ್‌ಗಳಲ್ಲಿ ಗೃಹಜ್ಯೋತಿಗೆ ಅರ್ಜಿ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದ್ದು, ಸದರಿ ಅರ್ಜಿ ಸಲ್ಲಿಸಲು ಶುಲ್ಕ 20 ರೂ.ಗಳನ್ನು ಸರ್ಕಾರ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸಲು 20 ರೂ. ಹೊರತುಪಡಿಸಿ ಹೆಚ್ಚಿನ ಹಣವನ್ನು ಸಲ್ಲಿಸಬಾರದಾಗಿ ಸಾರ್ವಜನಿಕರಿಗೆ ತಿಳಿಸಲಾಗಿದೆ. ಕೆಲವು ಖಾಸಗಿ ಸೈಬರ್ ಸೆಂಟರ್‌ಗಳಲ್ಲಿ ಹೆಚ್ಚುವರಿ ಹಣವನ್ನು ಪಡೆಯುತ್ತಿರುವ ಬಗ್ಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ಮಾಹಿತಿ ಸ್ವೀಕೃತವಾಗಿದ್ದು, ಈ ರೀತಿ ಹೆಚ್ಚುವರಿ ಹಣ ಪಡೆಯುತ್ತಿರುವ ಬಗ್ಗೆ ದಾಖಲೆ ಸಮೇತ ಜಿಲ್ಲಾಧಿಕಾರಿಗಳ ಕಚೇರಿಗೆ ದೂರು ನೀಡಿದಲ್ಲಿ ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




# ಸಾಂಪ್ರದಾಯಿಕ ಆಹಾರ ಪದ್ಧತಿಯಲ್ಲಿ ಸಿರಿಧಾನ್ಯಗಳಿಗೆ ಮತ್ತೆ ಮಹತ್ವ ಬಂದಿದೆ

**ಸಿಎಫ್‌ಟಿಆರ್‌ಐ ಸಂಶೋಧನಾ ಮಂಡಳಿ ಅಧ್ಯಕ್ಷೆ ಪ್ರೊ.ರೇಖಾ ಎನ್.ಸಿಂಘಾಲ್ ಅಭಿಮತ**

ಮೈಸೂರು, ಜು.6(ಆರ್‌ಕೆ)–ಇತ್ತೀಚಿನ ವರ್ಷಗಳಲ್ಲಿ ಸಾಂಪ್ರದಾಯಿಕ ಆಹಾರ ಪದ್ಧತಿಯ ಸಿರಿಧಾನ್ಯಗಳಿಗೆ ಮತ್ತೆ ಮಹತ್ವ ಬಂದಿದೆ ಎಂದು ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಸಂಶೋಧನಾ ಮಂಡಳಿ ಅಧ್ಯಕ್ಷೆ ಪ್ರೊ. ರೇಖಾ ಎನ್.ಸಿಂಘಾಲ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಏರ್ಪಡಿಸಿದ್ದ 'ಸಿರಿಧಾನ್ಯ ದಿನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಭಾರತದ ಆಹಾರ ಪದ್ಧತಿಯು ಇತರ ದೇಶಗಳಿಗಿಂತ ಭಿನ್ನವಾಗಿದ್ದು, ಆರ್ಯರು, ಗ್ರೀಕರು, ಪರ್ಷಿಯನ್ನರು, ಮೊಘಲರು ಹಾಗೂ ಬ್ರಿಟಿಷರ ಅಡುಗೆ ಪದ್ಧತಿಗಳು ಭಾರತದ ಆಹಾರ ಪದ್ಧತಿ ಮೇಲೆ ಪರಿಣಾಮ ಬೀರಿದೆ ಎಂದರು.

ಇಲ್ಲಿನ ಆಹಾರ ಪದ್ಧತಿ ವೈಜ್ಞಾನಿಕವಾಗಿರುವುದಲ್ಲದೆ, ಔಷಧೀಯ ಗುಣಗಳನ್ನು ಹೊಂದಿದೆ. ಸಿಎಫ್‌ಟಿಆರ್‌ಐ ಸಂಸ್ಥೆಯು ದೇಶದ ಎಲ್ಲಾ ಕಾಲಮಾನಕ್ಕೂ ಅನುಗುಣವಾದ ಆಹಾರಗಳನ್ನು ತಯಾರಿಸಿ ಸಂಸ್ಕರಿಸುವ ಮೂಲಕ ಜನರ ಆರೋಗ್ಯ ಸಂರಕ್ಷಣೆಗೆ ಕೆಲಸ ಮಾಡುತ್ತಿರುವುದಲ್ಲದೆ, ಅತ್ಯಾಧುನಿಕ ತಂತ್ರಜ್ಞಾನ ಬಳಸಿ ಆಹಾರ ಪದಾರ್ಥಗಳ ಸಂಶೋಧನೆಗೆ ಒತ್ತು ನೀಡುತ್ತಿರುವುದು ಶ್ಲಾಘನೀಯ ಎಂದು ಇದೇ ವೇಳೆ ನುಡಿದರು.

# ವಿಧಾನಸಭೆ ಉಪ ಸಭಾಧ್ಯಕ್ಷರಾಗಿ ರುದ್ರಪ್ಪ ಲಮಾಣಿ ಅವಿರೋಧ ಆಯ್ಕೆ

ಬೆಂಗಳೂರು, ಜು.6(ಕೆಎಂಶಿ)– ವಿಧಾನಸಭೆಯ ಉಪ ಸಭಾಧ್ಯಕ್ಷರಾಗಿ ಹಾವೇರಿ ಕ್ಷೇತ್ರದ ರುದ್ರಪ್ಪ ಲಮಾಣಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗುರುವಾರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಪಿ.ಎಂ. ಅಶೋಕ್ ಉಪಸಭಾಧ್ಯಕ್ಷರ ಆಯ್ಕೆಯ ಸೂಚನೆಯನ್ನು ಮಂಡಿಸಿದರು. ಇದಕ್ಕೆ ಅನುಮೋದನೆ ನೀಡಿದ ಬಳಿಕ ಸರ್ವಾನುಮತದ ಆಯ್ಕೆಯಾಗಿದೆ ಎಂದು ಸಭಾಧ್ಯಕ್ಷ ಯು.ಟಿ.ಖಾದರ್ ಘೋಷಿಸಿದರು.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೂತನ ಉಪಸಭಾಧ್ಯಕ್ಷರನ್ನು ಕರೆತಂದು ಕುರ್ಚಿಯಲ್ಲಿ ಕೂರಿಸಿದರು. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಸದಸ್ಯರು ಅಭಿನಂದಿಸಿದರು. ಸರ್ವಾನುಮತದ ಆಯ್ಕೆ ಎಂದು ಸಭಾಧ್ಯಕ್ಷರು ಘೋಷಿಸಿದಾಗ ಅವಿರೋಧ ಆಯ್ಕೆ ಎಂದು ನಮೂದಿಸುವಂತೆ ಬಿಜೆಪಿ ಸದಸ್ಯ ಸುನಿಲ್‌ಕುಮಾರ್ ಸಲಹೆ ನೀಡಿದರು. ಎಲ್ಲರೂ ಒಟ್ಟಾಗಿದ್ದೇವೆ ಎಂಬ ಸಂದೇಶ ಕಳುಹಿಸಬೇಕು. ಸರ್ವಾನುಮತ ಆಯ್ಕೆ ಎಂಬುದಕ್ಕೆ ತಗಾದೆ ಏಕೆ ಎಂದು ಸಭಾಧ್ಯಕ್ಷರು ತಿಳಿ ಹೇಳಿದರು. ವಿಧಾನಸಭೆಯ 25ನೇ ಉಪ ಸಭಾಧ್ಯಕ್ಷರಾಗಿ ಆಯ್ಕೆಯಾದ ರುದ್ರಪ್ಪ ಲಮಾಣಿ ಅವರನ್ನು ಅಭಿನಂದಿಸಿ ಮಾತನಾಡಿದ ಯು.ಟಿ.ಖಾದರ್, ರಾಣೆಬೆನ್ನೂರಿನ ತಾಂಡವೊಂದರ ಹಳ್ಳಿಯಿಂದ ಬಂದಿರುವ ರುದ್ರಪ್ಪ, ಸೌಮ್ಯ ಸ್ವಭಾವದ ವ್ಯಕ್ತಿ. 4 ಬಾರಿ ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರ ಮುಂದಿನ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿದರು.

# ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಜಾಕ್‌ಫ್ರೂಟ್ ಫೆಸ್ಟ್; ಫನ್ ವೀಕೆಂಡ್ ವರ್ಕ್‌ಶಾಪ್

nexus CENTRE CITY



ಮೈಸೂರು, ಜು. 6–ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಜು.14ರಿಂದ 16ರವರೆಗೆ ಹಲಸಿನಹಣ್ಣಿನ ಉತ್ಸವವನ್ನು ಏರ್ಪಡಿಸಲಾಗಿದೆ. ಜಾಕ್‌ಫ್ರೂಟ್ ಫೆಸ್ಟ್ ಜೊತೆಗೆ, ನೆಕ್ಸಸ್ ಸೆಂಟರ್ ಸಿಟಿ ಮಾಲ್ ಮಕ್ಕಳಿಗಾಗಿ ಜುಲೈ 8, 9, 22 ಮತ್ತು 23 ಅತ್ಯಾಕರ್ಷಕ ವಾರಾಂತ್ಯದ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ.

ಜಾಕ್‌ಫ್ರೂಟ್ ಫೆಸ್ಟ್ ಬಹುಮುಖ ಮತ್ತು ರುಚಿಕರವಾದ ಹಲಸಿನಹಣ್ಣಿನ ವಿಶೇಷ ಆಚರಣೆಯಾಗಿದೆ. ಇದು ಉಷ್ಣವಲಯದ ಹಣ್ಣು ತನ್ನ ವಿಶಿಷ್ಟ ಪರಿಮಳ ಮತ್ತು ಹಲವಾರು ಆರೋಗ್ಯ ಪ್ರಯೋಜನಗಳಿಗೆ ಹೆಸರುವಾಸಿಯಾಗಿದೆ. ಸಂದರ್ಶಕರು ಖಾರದ ತಿಂಡಿಗಳು, ಸಿಹಿತಿಂಡಿಗಳು ಮತ್ತು ರಿಫ್ರೆಶ್ ಪಾನೀಯಗಳನ್ನು ಒಳಗೊಂಡಂತೆ ಹಲಸಿನಹಣ್ಣು ಆಧಾರಿತ ಭಕ್ಷ್ಯಗಳ ವ್ಯಾಪಕ ಶ್ರೇಣಿಯನ್ನು ಸವಿಯಲು ಅವಕಾಶವನ್ನು ಹೊಂದಿರುತ್ತಾರೆ.

ಮಕ್ಕಳ ಕಾರ್ಯಾಗಾರಗಳನ್ನು ವಿಶೇಷವಾಗಿ ಪೋಷಕರು ತಮ್ಮ ಮಕ್ಕಳನ್ನು ಕರೆತರಲು ವಿನ್ಯಾಸಗೊಳಿಸಲಾಗಿದೆ. ಅವರಿಗೆ ಕಲಿಯಲು ಮತ್ತು ಒಟ್ಟಿಗೆ ಆನಂದಿಸಲು ಅವಕಾಶವನ್ನು ಒದಗಿಸುತ್ತದೆ. ಕಾರ್ಯಾಗಾರಗಳು ಬುಕ್‌ಮಾರ್ಕ್ ತಯಾರಿಕೆ, ಪೆನ್ಸಿಲ್ ಸ್ಟ್ಯಾಂಡ್ ಕ್ರಾಫ್ಟಿಂಗ್, ಮೆಸೇಜ್ ಸ್ಟಿಕ್ ಅಲಂಕಾರ, ಆಭರಣ ತಯಾರಿಕೆ, ಕಥೆಯನ್ನು ರಚಿಸುವುದು, ಪೆಬ್ಬಲ್ ಪೇಂಟಿಂಗ್ ಮತ್ತು ವ್ಯಾಕ್ಸ್ ಸ್ಟಾಂಪ್ ಕಲೆಯಂತಹ ವಿವಿಧ ಚಟುವಟಿಕೆಗಳನ್ನು ಒಳಗೊಂಡಿದೆ. ಭಾಗವಹಿಸುವವರು ತಮ್ಮ ಸೃಜನಶೀಲತೆಯನ್ನು ಅನ್ವೇಷಿಸಲು, ಹೊಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ತಮ್ಮ ಕೈಯಿಂದ ಮಾಡಿದ ಮೇರುಕೃತಿಗಳನ್ನು ಸ್ಮಾರಕಗಳಾಗಿ ಮನೆಗೆ ಅಲಂಕರಿಸಲು ಅನುವು ಮಾಡಿಕೊಡುತ್ತದೆ.



ಡಾ.ಬಾಬು ಜಗಜೀವನ ರಾಂ ಅವರ 37ನೇ ಪುಣ್ಯಸ್ಮರಣೆ ಅಂಗವಾಗಿ ಅಹಿಂದ ಸಂಘಟನೆ ವತಿಯಿಂದ ಮೈಸೂರು ರೈಲ್ವೆ ನಿಲ್ದಾಣ ವೃತ್ತದಲ್ಲಿರುವ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಅಹಿಂದ ಸಂಘಟನೆಯ ಮುಖಂಡರೂ ಆದ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಲೋಕೇಶ್, ವರುಣ ಮಹದೇವ್, ರಾಜೇಶ್, ರವಿಚಂದ್ರ, ಮಹದೇವ್, ಮಲ್ಲೇಶ್, ಪ್ರವೀಣ್ ಕುಮಾರ್, ಬಸವರಾಜ್ ಬಸಪ್ಪ, ನವೀನ್ ಕೆಂಪಿ, ರಾಜೇಂದ್ರ ಇನ್ನಿತರರಿದ್ದರು.

# ಜು.23, ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಜು.6– ಮೈಸೂರಿನ ಗನ್ ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾ ಭಾರತಿ ಕಲ್ಯಾಣ ಮಂಟಪದಲ್ಲಿ ಜು.23ರಂದು ಮಧ್ಯಾಹ್ನ 12ರಿಂದ ಸಂಜೆ 5ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಜು.22ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

**07.7.2023 ಶುಕ್ರವಾರ, ಮಳೆ ನಕ್ಷತ್ರ: ಪುನರ್ವಸು 06.07.2023 ರಿಂದ 19.07.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ**

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು ತಪಾಸಣಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸಂಧಿವಾತ, ಮಂಡಿನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ವಿಜಯನಗರ ಘಟಕ, ಶ್ರೀ ನಟರಾಜ ಮಹಿಳಾ ಪದವಿ ಕಾಲೇಜು :** ದತ್ತಿ ಕಾರ್ಯಕ್ರಮ, ಆಧುನಿಕ ವಚನ ಕವಿಗೋಷ್ಠಿ, ಸಾನ್ನಿಧ್ಯ : ಶ್ರೀ ಹೊಸಮಠದ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರಶಸ್ತಿ ಪತ್ರ ಪ್ರದಾನ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಕಾಲೇಜು ಪ್ರಾಂಶುಪಾಲ ಡಾ. ಎಂ. ಶಾರದ, ಉಪ ಪ್ರಾಂಶುಪಾಲ ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾಭವನ, ಶ್ರೀ ಹೊಸಮಠ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಯುವ ಕವಿಗೋಷ್ಠಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಯುವ ಕವಿಗೋಷ್ಠಿ ಉದ್ಘಾಟನೆ : ಸಾಹಿತಿ ಡಾ. ಎಸ್.ಪಿ. ಉಮಾದೇವಿ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಉಪಸ್ಥಿತರು : ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮ, ಶೈಕ್ಷಣಿಕ ಡೀನ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಹಿರಿಯ ಪತ್ರಕರ್ತ ಕೆ.ವಿ. ಶ್ರೀನಿವಾಸನ್ (ಬ್ರದರ್) ಸ್ಥಾಪಿಸಿರುವ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ : ಮೈಸೂರು ಆಕಾಶವಾಣಿ ನಿರ್ದೇಶಕ ಎಸ್.ಎಸ್. ಉಮೇಶ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಡಿ. ಮಹದೇವಪ್ಪ, ಆಕಾಶವಾಣಿ ನಿವೃತ್ತ ವರದಿಗಾರ ಕೆ.ವಿ. ಶ್ರೀನಿವಾಸನ್ (ಬ್ರದರ್), ಅಧ್ಯಕ್ಷತೆ : ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಶಸ್ತಿ ಪುರಸ್ಕೃತರು : ಮಹಾತ್ಮ ಗಾಂಧಿ ಪ್ರಶಸ್ತಿ–ಆರ್. ಸುವರ್ಣ (ನಗರ ಬೆಳಕು), ಜಾನಕಮ್ಮ ವೆಂಕಟಪ್ಪಗೌಡ ಪ್ರಶಸ್ತಿ–ಶ್ರೀರಾಮ್ ಎಂ.ಎ. (ದಿ ಹಿಂದೂ), ಕೆ.ವಿ. ಶ್ರೀನಿವಾಸನ್ ಪ್ರಶಸ್ತಿ–ಬೀಚನಹಳ್ಳಿ ಮಂಜುನಾಥ್ (ಮೈಸೂರು ಮಿತ್ರ), ಜೆ.ಪಿ. ಸ್ಮಾರಕ ಮಾಧ್ಯಮ ಪ್ರಶಸ್ತಿ–ಬಾಮಲಿಂಗರಾಜ್ ಅರಸ್ (ಮೈಸೂರು ಮಿತ್ರ), ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶಾರದಾ ವಿಲಾಸ ಕಾಲೇಜು :** ಶಾರದೋತ್ಸವ, ಅಂತರ ಕಾಲೇಜು ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಭ್ರಮ, ಉದ್ಘಾಟನೆ : ಭರತನಾಟ್ಯ ಕಲಾವಿದೆ ಡಾ. ಕೃಪಾ ಫಡ್ಕೆ, ಗೌರವ ಅತಿಥಿಗಳು : ಎಸ್‌ವಿಇಐ ಕಾರ್ಯದರ್ಶಿ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಎನ್. ಚಂದ್ರಶೇಖರ್, ಅಧ್ಯಕ್ಷತೆ : ಶಾರದಾ ವಿಲಾಸ ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ದೇವಿಕಾ, ಸ್ಥಳ: ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಕ್ರೈಸ್ಟ್ ಕಾಲೇಜು :** 'ಸೈಕ್ವೆಸ್ಟ್' ಯುವ ವಯಸ್ಕರಿಗೆ ಆರೋಗ್ಯಕರ ಮನಸ್ಸು ಕುರಿತು ಕಾರ್ಯಾಗಾರ, ಸಂಪನ್ಮೂಲ ವ್ಯಕ್ತಿ : ಡಾ. ಕೆ.ವಿ. ಕಿಶೋರ್ ಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸ್ನಾತಕೋತ್ತರ ವಿಭಾಗ, ವಿಶ್ವವಿದ್ಯಾನಿಲಯ ಸಂಜೆ ಕಾಲೇಜು :** ನಾಡೋಜ ಪ್ರೊ. ದೇಜಗೌ ಅವರ ಜನ್ಮ ದಿನಾಚರಣೆ, ಉದ್ಘಾಟನೆ : ಮಹಾ ಕವಯತ್ರಿ ಡಾ. ಲತಾ ರಾಜಶೇಖರ್, ಬಹುಮಾನ ವಿತರಣೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ. ಎಚ್. ಸೋಮಶೇಖರಪ್ಪ, ವಿಶೇಷ ಆಹ್ವಾನಿತರು : ಜಾನಪದ ಗಾಯಕ ಅಮ್ಮ ರಾಮಚಂದ್ರ, ಸ್ಥಳ: ಕೊಠಡಿ ಸಂಖ್ಯೆ 20, ವಿ.ವಿ. ಸಂಜೆ ಕಾಲೇಜು, ಸಂಜೆ 6ಕ್ಕೆ.

■ **ಗಾನಭಾರತೀ :** ತಿಂಗಳ ಕಾರ್ಯಕ್ರಮ, ವಿದುಷಿ ಸಿ.ವಿ. ಶ್ರುತಿ ಅವರಿಂದ ಪಿಟೀಲು ವಾದನ, ವಿದ್ವಾನ್ ಸಾಯಿ ಶಿವು–ಮೃದಂಗ, ವಿದ್ವಾನ್ ರಘುನಂದನ್ ವಿ. ರಾವ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಆಷಾಢ ಮಾಸದ ಅಲಂಕಾರಗಳು ಮತ್ತು ಪೂಜಾ ಕೈಂಕರ್ಯ, ತೋಮಾಲೆ (ದಿಂಡಿನ) ಅಲಂಕಾರ, ಸ್ಥಳ: ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಮೂರನೇ ಆಷಾಢ ಶುಕ್ರವಾರದ ಅಂಗವಾಗಿ ಬೆಳಗ್ಗೆ 7.30 ರಿಂದ ಪಂಚಾಮೃತಾಭಿಷೇಕ, ಬೆಳಗ್ಗೆ 10 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ಸ್ತೋತ್ರಗಳ ಪಾರಾಯಣ, ಸಂಜೆ 6.30 ರಿಂದ ಶ್ರೀಮತಿ ಪದ್ಮ ಮತ್ತು ವೃಂದ, ಸಾಯಿ ಸೌಧಾಮಿನಿ ಭಜನಾ ತಂಡದಿಂದ ಭಜನೆ ಮತ್ತು ಭಕ್ತಿಗೀತೆಗಳು, ಸಂಜೆ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಜರಾಜೇಶ್ವರಿ ದೇವಸ್ಥಾನ.

## ಯಶೋಧರಪುರದಲ್ಲಿಂದು

### ಹುಣಸೂರು ತಾಲೂಕು

■ **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಶ ಕಾನೂನು ಅಧ್ಯಯನ ಸಂಸ್ಥೆ:** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪ್ಪದಕವತ್ತ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ: ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಡಾ. ವೈ.ಎಸ್. ಸಿದ್ದೇಗೌಡ, ಅಧ್ಯಕ್ಷತೆ : ಶಾಸಕ ಜಿ.ಡಿ. ಹರೀಶ್‌ಗೌಡ, ಪುಸ್ತಕ ಲೋಕಾರ್ಪಣೆ : ಮಾಜಿ ಶಾಸಕ ಡಿ.ಆರ್. ಪಾಟೀಲ್, ಉತ್ತಮ ಶಿಬಿರಾರ್ಥಿಗಳಿಗೆ ಗೌರವ ಸಮರ್ಪಣೆ : ಮಾಜಿ ಶಾಸಕ ವಾಸು, ಉಪಸ್ಥಿತರು : ಜಿಪಂ ಸಿಇಓ ಶ್ರೀಮತಿ ಗಾಯತ್ರಿ, ರಾಮಕೃಷ್ಣ ಸಮಗ್ರ ಶಿಕ್ಷಣ ಕೇಂದ್ರದ ಮುಖ್ಯಸ್ಥ ಎಂ.ಸಿ. ನರೇಂದ್ರ, ಖಾದ್ರಿ ನರಸಿಂಹಯ್ಯ, ಎನ್.ಆರ್. ವಿಶುಕುಮಾರ್, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಶ್ರೀಮತಿ ಸರೋಜಮ್ಮ ತುಳಸಿದಾಸಪ್ಪ, ಸ್ಥಳ: ಯಶೋಧರಪುರ, ಹುಣಸೂರು ತಾಲೂಕು, ಬೆಳಗ್ಗೆ 11ಕ್ಕೆ.


## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದಸಂಸ್ಕೃತಿ–ಡಾ. ಟಿ.ವಿ. ಸತ್ಯನಾರಾಯಣ, 7.15 ಭಾವಗೀತೆಗಳು–ಮೈಸೂರು ಅನಂತಸ್ವಾಮಿ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ವಿ. ಕೃಷ್ಣಮೂರ್ತಿ–ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

**ಮಧ್ಯಾಹ್ನ:** 12.30 ದೇವರನಾಮ–ಅಂಬುಜಾ ಶ್ರೀಧರ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಹಂಸಿನಿ ಎಸ್. ಕುಮಾರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 4.00 ಮಹಿಳಾ ರಂಗ, 4.30 ವೃತ್ತಿ ಮಾರ್ಗದರ್ಶನ, 6.55 ಕೃಷಿರಂಗ–ಕಿಸಾನ್‌ವಾಣಿ, ರೈತರಿಗೆ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ಕೆ. ಮಧುಸೂದನ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 8.00 ವಿಜ್ಞಾನ ಭಾರತಿ–ಅನುವಂಶೀಯತೆಯ ಕಾಯಿಲೆಗಳು ಕುರಿತು ಮಾತನಾಡುತ್ತಾರೆ. ಜಿನೋಮೆಟಿಕ್ಸ್ ವಿಭಾಗದ ಚೇರ್ಮನ್ ಮತ್ತು ಪ್ರೊಫೆಸರ್ ಸುತ್ತೂರು ಎಸ್. ಮಾಲಿನಿ, 9.30 ಗಾನಲಹರಿ, ಪ್ರಸ್ತುತಿ–ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.00 ವಾದ್ಯವೃಂದ, ನಿರ್ದೇಶನ– ಹೆಚ್.ಎನ್. ಭಾಸ್ಕರ್, 10.30 ಸವಿನೆನಪು


ಶ್ರೀ ಆರ್ ಚಲುವರಾಜು ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು :
ಶ್ರೀ ಬಸವರಾಜ್ ತಿರ್ಲಾಪುರ್
ಗದಗ್


ಶ್ರೀ ಆರ್ ಚಲುವರಾಜು ರವರಿಗೆ
ನಿರ್ದೇಶಕರು, ಮೈಸೂರು ಜಿಲ್ಲಾ ಹಾಲುಒಕ್ಕೂಟ ಹಾಗೂ
ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು :
ಶ್ರೀ ದಿನೇಶ್
ಸದಸ್ಯರು, ಗ್ರಾ.ಪಂ.
ಪಾಲಹಳ್ಳಿ


ಶ್ರೀ ಆರ್ ಚಲುವರಾಜು ರವರಿಗೆ
ನಿರ್ದೇಶಕರು, ಮೈಸೂರು ಜಿಲ್ಲಾ ಹಾಲುಒಕ್ಕೂಟ
ಹಾಗೂ ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು
ಹುಟ್ಟುಹಬ್ಬದ ಶುಭಾಶಯಗಳು

ಮೈಸೂರು ಮಿತ್ರ

ಶುಕ್ರವಾರ 7 ಜುಲೈ 2023

## ನಕ್ಕರೆ ಅದೇ ಸ್ವರ್ಗ

ಗಂಡ : ಏನೇ ನಾನು ಎರಡು ನಿಮಿಷಕ್ಕೆ ರೆಡಿಯಾದೆ. ನೀನಿನ್ನು ರೆಡಿಯಾಗಿಲ್ವಾ?

ಹೆಂಡ್ತಿ : ಮ್ಯಾಗಿ ರೆಡಿಯಾಗೋದಕ್ಕೂ ಬಿರಿಯಾನಿ ರೆಡಿಯಾಗೋದಕ್ಕೂ ವ್ಯತ್ಯಾಸ ಇಲ್ವಾ?

ಮೈಸೂರು ಮಿತ್ರ

ಶುಕ್ರವಾರ, 7 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ..........

ಮನುಷ್ಯ ಕಲಿಯಲು ಬಯಸುವುದಾದರೆ ಅವನ ಪ್ರತಿಯೊಂದು ತಪ್ಪು ಅವನಿಗೆ ಏನಾದರೂ ಶಿಕ್ಷಣವನ್ನು ಖಂಡಿತ ಕೊಡುತ್ತದೆ – ಚಾರ್ಲ್ಸ್‌ಡಿಕೆನ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಗೊಂಬೆಗೆ ಕೈ ಮುಗಿದರೂ ಪರಿಶುದ್ಧ ನಂಬಿಕೆಯಿರಬೇಕು

# ಕಟ್ಟಳೆಯ ಧಿಕ್ಕರಿಸಿ ತಲೆ ಎ(ತ್ತು)ತ್ತಿವೆ ಕಟ್ಟಡಗಳು

# ಮರೆಯಾಗುತ್ತಿದೆ ನಮ್ಮ ಚೆಲುವ ಮೈಸೂರು ಅರಮನೆ!



## ನಿಯಮ ಉಲ್ಲಂಘಿಸಿದ್ದರೆ ಕ್ರಮ ನಿಶ್ಚಿತ

"ವಿಶ್ವ ವಿಖ್ಯಾತ ಮೈಸೂರು ಅರಮನೆಯ ಎತ್ತರವನ್ನೂ ಮೀರಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದರೆ ಕ್ರಮ ಕೈಗೊಳ್ಳಲಾಗುವುದು. ಮೈಸೂರು ಅರಮನೆಯ ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡಗಳನ್ನು ನಿರ್ಮಾಣ ಮಾಡಬಾರದು. ಅದರ ಆಚೆಗೂ ಇಂತಿಷ್ಟೇ ಮೀಟರ್ ಎತ್ತರದ ಕಟ್ಟಡ ನಿರ್ಮಿಸಬೇಕೆಂಬ ನಿಯಮ ಇದೆ. ಇದನ್ನು ಎಲ್ಲರೂ ಕಟ್ಟುನಿಟ್ಟಾಗಿ ಪಾಲಿಸಬೇಕು. ಮೈಸೂರು ಅರಮನೆಯನ್ನು ಯಾವುದೇ ಕಾರಣಕ್ಕೂ ಮರೆಯಾಗಿಸಬಾರದು. ಮೈಸೂರು ಅರಮನೆ ಎತ್ತರ ಮೀರಿ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಅಧಿಕಾರಿಗಳಿಂದ ವರದಿ ತರಿಸಿಕೊಳ್ಳುತ್ತೇನೆ. ನಿಯಮ ಮೀರಿ ಕಟ್ಟಡ ನಿರ್ಮಿಸಿದ್ದರೆ ಆ ಕಟ್ಟಡಗಳ ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳುತ್ತೇನೆ.



– ಜಿ.ಲಕ್ಷ್ಮಿಕಾಂತ ರೆಡ್ಡಿ, ಮೈಸೂರು ನಗರಪಾಲಿಕೆ ಆಯುಕ್ತರು

"ಈಗಾಗಲೇ ಅರಮನೆ ಮರೆಯಾಗಿಸುವ ಹತ್ತಾರು ಕಟ್ಟಡಗಳು ನಿರ್ಮಾಣವಾಗಿವೆ. ಅರಮನೆಗಿಂತ ಎತ್ತರವಾಗಿ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟರೆ ಮೈಸೂರು ಅರಮನೆಯ ಶೋಭೆಗೆ ಧಕ್ಕೆಯಾದಂತೆ. ಮೈಸೂರು ಅರಮನೆಗಿಂತ ಎತ್ತರವಾಗಿ ಯಾವುದೇ ಕಟ್ಟಡ ಕಟ್ಟಲು ಹೆರಿಟೇಜ್ ಕಮಿಟಿ ಅನುಮತಿ ನೀಡಿಲ್ಲ. ಒಂದು ವೇಳೆ ಅಂತಹ ಕಟ್ಟಡಗಳಿದ್ದರೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಹೆರಿಟೇಜ್ ಕಮಿಟಿ ಸದಸ್ಯ ಪ್ರೊ.ರಂಗರಾಜು ಕಟ್ಟುನಿಟ್ಟಾಗಿ ಎಚ್ಚರಿಸುತ್ತಾರೆ.

● ಬಾಪು ಲಿಂಗರಾಜ ಅರಸ್

ಮೈಸೂರು, ಜು.6– ವಿಶ್ವವಿಖ್ಯಾತ ಮೈಸೂರು ಅಂಬಾವಿಲಾಸ ಅರಮನೆ ಸಾಂಸ್ಕೃತಿಕ ನಗರಿಗೆ ಮುಕುಟ ವಿದ್ದಂತೆ. ಆದರೆ ಅರಮನೆ ಸುತ್ತಲೂ ತಲೆ ಎತ್ತುತ್ತಿರುವ ಕಾಂಕ್ರಿಟ್ ಕಾಡಿನಲ್ಲಿ ಮೈಸೂರು ಅರಮನೆ ಮರೆಯಾಗುತ್ತಿದೆ ಎಂಬ ಆತಂಕವಿದೆ. ನಾಯಿಕೊಡೆಗಳಂತೆ ನಿರ್ಮಾಣವಾಗುತ್ತಿರುವ ಕಟ್ಟಡಗಳಿಂದ ಮೈಸೂರು ಅರಮನೆ ಸೌಂದರ್ಯ ಮರೆಯಾಗುವ ಪರಿಸ್ಥಿತಿ ಬಂದಿದೆ. ಮೈಸೂರು ಅರಮನೆಯ ಶೋಭೆಗೆ ಧಕ್ಕೆ ತರುವ ರೀತಿ ಎತ್ತರೆತ್ತರದ ಹತ್ತಾರು ಕಟ್ಟಡಗಳು ನಿರ್ಮಾಣವಾಗುತ್ತಿದ್ದರೂ ನಗರಪಾಲಿಕೆ ಹಾಗೂ ಹೆರಿಟೇಜ್ ಕಮಿಟಿ ಕಂಡೂ ಕಾಣದಂತೆ ಜಾಣ ಮೌನ, ಕುರುಡು ಪ್ರದರ್ಶಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ನಗರಕ್ಕೆ ಬರುವ ದೇಶ–ವಿದೇಶದ ಪ್ರವಾಸಿಗರು ಗೂಗಲ್ ಮ್ಯಾಪ್ ಹಾಕಿಕೊಂಡು ಅರಮನೆಯನ್ನು ಹುಡುಕಬೇಕಾದ ಪರಿಸ್ಥಿತಿ ಬಂದಿದೆ.

ವಿಶ್ವವಿಖ್ಯಾತ ಮೈಸೂರು ಅರಮನೆಯ ನಿರ್ಮಾಣ ಕಾರ್ಯವನ್ನು 1897ರಲ್ಲಿ ಆರಂಭಿಸಿ, 1912ರಲ್ಲಿ ಪೂರ್ಣಗೊಳಿಸಲಾಯಿತು. ನಗರದ ಹೃದಯಭಾಗದಲ್ಲಿರುವ ಈ ಅರಮನೆಯನ್ನು ಇಂಡೋ ಸಾರ್ಸನಿಕ್ ಶೈಲಿಯಲ್ಲಿ ಅದ್ಭುತವಾಗಿ ನಿರ್ಮಿಸಲಾಗಿದೆ.

ಈ ಮೊದಲು ನಗರದ ಯಾವುದೇ ಸ್ಥಳದಲ್ಲಿ ನಿಂತು ನೋಡಿದರೂ ಮೈಸೂರು ಅರಮನೆ ಕಾಣಿಸುತ್ತಿತ್ತು. ಪಾರಂಪರಿಕ ಶೈಲಿಯ ಮೈಸೂರು ಅರಮನೆಯ ಸೌಂದರ್ಯ ಕಣ್ಮನ ಸೆಳೆಯುತ್ತಿತ್ತು. ಅದರಲ್ಲೂ ಚಾಮುಂಡಿಬೆಟ್ಟದಿಂದ ಪಕ್ಷಿ ನೋಟದಲ್ಲೂ ಮೈಸೂರು ಅರಮನೆಯ ಗೋಪುರಗಳು ಕಣ್ಣಿಗೆ ಕಟ್ಟುತ್ತಿತ್ತು. ಆದರೆ ಈಗ ಚಾಮುಂಡಿಬೆಟ್ಟದಿಂದ ಮೈಸೂರು ಅರಮನೆಯನ್ನು ಎಲ್ಲಿದೆ ಎಂದು ದುರ್ಬಿನ್ ಹಾಕಿ ಹುಡುಕಬೇಕಾದ ಪರಿಸ್ಥಿತಿ ಬಂದಿದೆ.

ಮೈಸೂರು ಅರಮನೆ ಕಾಂಕ್ರಿಟ್ ಕಾಡಿನಲ್ಲಿ ಮರೆಯಾಗುತ್ತಿದೆ. ಅರಮನೆಯ ಸುತ್ತಲಿನ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ. ಜೊತೆಗೆ 100 ರಿಂದ 200 ಮೀಟರ್ ವ್ಯಾಪ್ತಿಯಲ್ಲಿ 12 ಮೀಟರ್‌ಗಿಂತ ಎತ್ತರದ ಯಾವುದೇ ಕಟ್ಟಡ ನಿರ್ಮಾಣ ಮಾಡುವಂತಿಲ್ಲ. ನೆಲ ಅಂತಸ್ತು ಸೇರಿದಂತೆ ಎರಡು ಮಹಡಿಗಳಿಗೆ ಮಾತ್ರ ಅವಕಾಶವಿದೆ.

145 ಅಡಿ ಎತ್ತರದ, ಐದು ಮಹಡಿಗಳಿರುವ ಮೈಸೂರು ಅರಮನೆಯಲ್ಲಿ ಕೆಂಪು ಅಮೃತಶಿಲೆಯ ಮಧ್ಯೆ ಗೋಪುರ ಆಕರ್ಷಣೆಯ ಕೇಂದ್ರಬಿಂದು. ಈ ಕೇಂದ್ರ ಗೋಪುರ ಮರೆಯಾಗದಂತೆ ಅರಮನೆ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡಗಳು 12 ಮೀಟರ್‌ಗಿಂತ ಹೆಚ್ಚು ಎತ್ತರ ಇರಬಾರದು ಎಂದು ಕಟ್ಟುನಿಟ್ಟಿನ ನಿಯಮ ಇದೆ.

ಮೈಸೂರು ಅರಮನೆ ಸುತ್ತ ಗಡಿರೇಖೆಯನ್ನು ಕೂಡ ಹಾಕಲಾಗಿದೆ. ಇದನ್ನು **ಹೆರಿಟೇಜ್ ಕೋರ್ ಏರಿಯಾ** ಹೆಸರಿನಿಂದ ಕರೆಯಲಾಗುತ್ತದೆ. ಬೆಂಗಳೂರು–ನೀಲಗಿರಿ ರಸ್ತೆ ಹಾರ್ಡಿಂಜ್ ವೃತ್ತ ಗನ್‌ಹೌಸ್, ಚಾಮರಾಜ ಜೋಡಿ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಸ್ಕೃತ ಪಾಠ ಶಾಲೆ, ದಳವಾಯಿ ಶಾಲೆ, ಸಂತೆಪೇಟೆ, ದೇವರಾಜ ಅರಸ್ ರಸ್ತೆ, ಶಿವರಾಂ ಪೇಟೆ, ಗಾಂಧಿಚೌಕ, ಹಳೆ ಮೈಸೂರು ಬ್ಯಾಂಕ್ ರಸ್ತೆ, ಅಶೋಕ ರಸ್ತೆ, ಶ್ರೀ ಹರ್ಷ ರಸ್ತೆಯವರೆಗೆ ಈ ನಿಯಮ ಕಟ್ಟುನಿಟ್ಟಾಗಿ ಪಾಲಿಸಬೇಕು.

ಅರಮನೆ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿರ್ಮಾಣ ಮಾಡುವ ಕಟ್ಟಡಗಳು ಪಾರಂಪರಿಕ ಶೈಲಿಯಲ್ಲಿ ಇರಬೇಕು ಎಂಬ ನಿಯಮವೂ ಇದೆ. ಅಷ್ಟೇ ಅಲ್ಲದೆ ಜಾಹೀರಾತು ಫಲಕಗಳನ್ನು ಅಳವಡಿಸುವಂತಿಲ್ಲ ಎಂಬ ಕಟ್ಟಳೆಯೂ ಇದೆ.

ಮೈಸೂರು ನಗರ ಪಾಲಿಕೆಯ ಬೈಲಾದಲ್ಲಿ ಈ ನಿಯಮ ನಮೂದಿಸಿರುವ ಸರ್ಕಾರ ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ತಾಕೀತು ಮಾಡಿದೆ. ಆದರೆ ಮೈಸೂರು ಅರಮನೆ ಸುತ್ತ ಹತ್ತಾರು ಕಟ್ಟಡಗಳು ಈ ನಿಯಮದ ಮಿತಿ ಮೀರಿ ನಿರ್ಮಾಣವಾಗುತ್ತಲೇ ಇವೆ. ಮೈಸೂರು ಅರಮನೆಯ 200 ಮೀಟರ್ ವ್ಯಾಪ್ತಿಯಲ್ಲಿ ಕಟ್ಟಡವನ್ನು ಹೊಸದಾಗಿ ನಿರ್ಮಿಸಲು, ಹಳೆ ಕಟ್ಟಡವನ್ನು ನೆಲಸಮಗೊಳಿಸಲು, ನವೀಕರಿಸಲು ಕಡ್ಡಾಯವಾಗಿ ನಗರಪಾಲಿಕೆ ಹಾಗೂ ಹೆರಿಟೇಜ್ ಕಮಿಟಿ ಒಪ್ಪಿಗೆ ಪಡೆಯಬೇಕು. ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಈ ಕಮಿಟಿಯಲ್ಲಿ ಪಾರಂಪರಿಕ ತಜ್ಞರು ಇರುತ್ತಾರೆ. ಹೆರಿಟೇಜ್ ಕಮಿಟಿಯ ಅನುಮತಿ ಪಡೆಯದೆ ಒಂದು ಇಟ್ಟಿಗೆಯನ್ನು ಎತ್ತಿಡಲು ಅವಕಾಶವಿಲ್ಲ.

ಮೈಸೂರು ಅರಮನೆಯ ಘನತೆ, ಗಾಂಭೀರ್ಯತೆ, ಪಾರಂಪರಿಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ಹೆರಿಟೇಜ್ ಕಮಿಟಿಯ ನಿಯಮಾವಳಿ ಯಾರೊಬ್ಬರೂ ಪಾಲಿಸಲೇಬೇಕಿದೆ. ಹಳೆ ಕಟ್ಟಡ ನೆಲಸಮಗೊಳಿಸಿ, ನವೀಕರಿಸಲು ಹಾಗೂ ಹೊಸ ಕಟ್ಟಡ ನಿರ್ಮಾಣ ಮಾಡಲು ಹೆರಿಟೇಜ್ ಕಮಿಟಿ ಒಪ್ಪಿಗೆ ನೀಡಿದ ಪಕ್ಷದಲ್ಲಿ ಆ ನಿಯಮ ಪಾಲಿಸಲಾಗುತ್ತಿದೆಯೇ ಎಂದು ಅಧಿಕಾರಿಗಳು ಆಗಾಗ ಸ್ಥಳಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ ನಡೆಸಬೇಕು. ಒಂದು ವೇಳೆ ನಿಯಮ ಉಲ್ಲಂಘನೆಯಾಗುತ್ತಿದ್ದರೆ ತಕ್ಷಣವೇ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕು. ಜೊತೆಗೆ ಈ ವಿಚಾರವನ್ನು ಹೆರಿಟೇಜ್ ಕಮಿಟಿಯ ಗಮನಕ್ಕೂ ತರಬೇಕು. ಆದರೆ ಅಧಿಕಾರಿಗಳು ಈ ವಿಚಾರದಲ್ಲಿ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿ ನಿರ್ವಹಿಸುತ್ತಿಲ್ಲ. ಮೈಸೂರಿನ ಶ್ರೀ ಹರ್ಷ ರಸ್ತೆ ಸೇರಿದಂತೆ ಇತರೆಡೆ ಕಾನೂನು ನಿಯಮ ಉಲ್ಲಂಘಿಸಿ 12 ಮೀಟರ್‌ಗೂ ಮೀರಿ ಎತ್ತರದ ಕಟ್ಟಡ ನಿರ್ಮಾಣ ಮಾಡುತ್ತಿದ್ದರೂ ಮೈಸೂರು ಮಹಾ ನಗರಪಾಲಿಕೆ ಹಾಗೂ ಹೆರಿಟೇಜ್ ಕಮಿಟಿ ಏನು ಮಾಡುತ್ತಿದೆ ಎಂಬ ಪ್ರಶ್ನೆಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ.

ಹೀಗೆ ಮೈಸೂರು ಅರಮನೆಗಿಂತ ಎತ್ತರವಾಗಿ ನಿರ್ಮಾಣವಾಗಿ ಕಟ್ಟಡಗಳ ಮಾಲೀಕರಿಗೆ ನಗರ ಪಾಲಿಕೆ ನೋಟಿಸ್ ಜಾರಿ ಮಾಡಿ ಕೈತೊಳೆದುಕೊಂಡಿದೆ. ಇಂತಹ ಕಟ್ಟಡಗಳ ಮಾಲೀಕರು ನಗರ ಪಾಲಿಕೆಯ ಅಧಿಕಾರಿಗಳಿಗೆ ಸೊಪ್ಪು ಹಾಕದಿರುವುದಕ್ಕೆ ನಾನಾ ಕಾರಣಗಳಿವೆ ಎಂಬ ದೂರುಗಳೂ ಇವೆ.

## ಅವಧಿ ವಿಸ್ತರಣೆ

ಮೈಸೂರು, ಜು.6– ರೈತರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎಲ್ಲಾ ಅಂಚೆ ಕಚೇರಿಗಳ ವ್ಯವಹಾರದ ವೇಳೆಯನ್ನು ಕಚೇರಿಯ ಮುಕ್ತಾಯದ ಅರ್ಧ ಗಂಟೆಗೆ ಮೊದಲಿನವರೆಗೆ ವಿಸ್ತರಿಸಲಾಗಿದೆ. ಉಳಿತಾಯ ಖಾತೆ ಮತ್ತು ನಗದು ವ್ಯವಹಾರವನ್ನು ಹೊರತುಪಡಿಸಿ E-M.O, IPO, E-PAYMENT ಆಧಾರ್ ಮತ್ತು CSC, PLI ಮತ್ತು RPLI ಸ್ಟ್ಯಾಂಪ್ ಮತ್ತು ಸ್ಟೇಷನರಿ ಮಾರಾಟ ನೋಂದಾಯಿತ ಮತ್ತು ಸ್ಪೀಡ್‌ಪೋಸ್ಟ್ ಸೇವೆಗಳು ಈ ಅವಧಿಯಲ್ಲಿ ಲಭ್ಯವಿರುತ್ತದೆ.

## ಬುದ್ಧ, ಬಸವ, ಡಾ.ಅಂಬೇಡ್ಕರ್ ಜಯಂತಿ ಸಮಾರಂಭ



ಮೈಸೂರು,ಜು.6–ಡಾ.ಅಂಬೇಡ್ಕರ್ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಟ್ರಸ್ಟ್, ಸಮಾನತೆ, ಸ್ವಾವಲಂಬನೆ ಪ್ರತಿಷ್ಠಾನ ಮತ್ತು ಸಮಾನತೆ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ 2567ನೇ ಬುದ್ಧ ಜಯಂತಿ, 890ನೇ ಬಸವ ಜಯಂತಿ, 132ನೇ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಗಳ ಸಮಾರಂಭವನ್ನು ಜು.8ರಂದು ಬೆಳಗ್ಗೆ 10.30ಕ್ಕೆ ಏರ್ಪಡಿಸಲಾಗಿದೆ. ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಸಮಾರಂಭವನ್ನು ಉದ್ಘಾಟಿಸಲಿದ್ದು, ಮೈಸೂರು ವಿಶ್ವ ಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಬಂತೇಜಿ ವಿಶ್ವದ ಶ್ರೇಷ್ಠ ಚಿಂತಕ ಬುದ್ಧನನ್ನು ಕುರಿತು ಮಾತನಾಡುವರು. ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಸ್.ಶಿವರಾಜಪ್ಪ ಸಾಮಾಜಿಕ ಕ್ರಾಂತಿಕಾರಿ ಬಸವಣ್ಣನವರ ಕುರಿತು ಮಾತನಾಡುವರು. ಮೈಸೂರು ವಿವಿ ಬಹದ್ದೂರ್ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ಅಧ್ಯಕ್ಷ ಪ್ರೊ.ಡಿ.ಆನಂದ್ ವಿಶ್ವಜ್ಞಾನಿ ಡಾ.ಅಂಬೇಡ್ಕರ್ ಕುರಿತು ಮಾತನಾಡಲಿದ್ದಾರೆ. ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿವಿ ಕುಲಪತಿ ಪ್ರೊ.ಸಿ.ಬಸವರಾಜು ಅಧ್ಯಕ್ಷತೆ ವಹಿಸಲಿದ್ದಾರೆ. ಈ ವೇಳೆ ಡಾ.ನೀಲಗಿರಿ ತಳವಾರ, ಡಾ.ಮುಳ್ಳೂರು ನಂಜುಂಡಸ್ವಾಮಿ, ಪ್ರಕಾಶಕ ಭರತ್ ರಾಮಸ್ವಾಮಿ ಉಪಸ್ಥಿತರಿರುವರು.

## ಇಂದು ಸಂವಾದ

ಮೈಸೂರು,ಜು.6(ಪಿಎಂ)–ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ವತಿಯಿಂದ 'ಚಲನಚಿತ್ರ ಕ್ಷೇತ್ರದಲ್ಲಿ ಚಿತ್ರಕಲಾವಿದರಿಗೆ ಇರುವ ಅವಕಾಶ' ಕುರಿತು ಜು.7ರಂದು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾಲೇಜಿನ ಆವರಣದಲ್ಲಿ ಅಂದು ಬೆಳಗ್ಗೆ 11ಕ್ಕೆ ಚಲನಚಿತ್ರ ನಿರ್ದೇಶಕ ನಾಗಶೇಖರ್ ಅವರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಲಿದೆ. ಆಸಕ್ತ ಕಲಾವಿದರು ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## ನಿಮ್ಮ ಪತ್ರಗಳು

### ಅಪ್ಪು ಹೆಸರಲ್ಲಿ ಸಮಾಜ ಸೇವೆ ಮಾಡಲಿ...



ಮಾನ್ಯರೆ,

ಅಪ್ಪು ಬಾರದ ಲೋಕಕ್ಕೆ ಪ್ರಯಾಣ ಬೆಳೆಸಿ ಎರಡು ವರ್ಷವೇ ಸಮೀಪಿಸುತ್ತಿದೆ. ಈಗಂತೂ ಸಮಾಧಿ ಸಾಕ್ಷಾತ್ ದೇವಸ್ಥಾನವೇ ಆಗಿಬಿಟ್ಟಿದೆ. ಜನತೆಗೆ ಜೀವಿತಾವಧಿಯಲ್ಲೊಮ್ಮೆ ಕಾಶಿಗೋ, ಧರ್ಮಸ್ಥಳಕ್ಕೊ, ಮಂತ್ರಾಲಯಕ್ಕೊ ಹೋಗಬೇಕೆನ್ನುವ ಆಸೆಯಂತೆ ಪರಮಾತ್ಮ ಚಿರ ನಿದ್ರೆಗೆ ಜಾರಿರುವ ಆ ಜಾಗವನ್ನು ಕಣ್ಣಾರೆ ನೋಡಬೇಕೆಂಬ ಹಂಬಲದಿಂದ ನಿತ್ಯವೂ ಕಂಠೀರವ ಸ್ಟುಡಿಯೋಗೆ ಆಗಮಿಸುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅಪ್ಪುವಿನ ಸಮಾಧಿಯ ಮೇಲೆ ಅಭಿಮಾನಿಗಳು ದಿನಕ್ಕೆ 200 ರಿಂದ 300 ಹಾರಗಳನ್ನು ಹಾಕುತ್ತಿದ್ದಾರೆ. ಇದಕ್ಕೆ ಸುಮಾರು 20,000 ಸಾವಿರದಿಂದ 30,000 ಸಾವಿರಗಳು ಖರ್ಚಾಗುತ್ತದೆ. ಹಾರಗಳ ಬದಲಿಗೆ ಅಲ್ಲೇ ಅಪ್ಪುವಿನ ಹೆಸರಲ್ಲಿ ಒಂದು ಹುಂಡಿಯನ್ನು ನಿರ್ಮಿಸಿ ಹಣ ಸಂಗ್ರಹಿಸಿ ಅಪ್ಪು ಮಾಡುತ್ತಿದ್ದ ದಾನ, ಧರ್ಮಗಳಿಗೆ ,ಸಮಾಜ ಸೇವೆಗಳಿಗೆ ಆ ಹಣವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂಬುವುದು ಅಪ್ಪುವಿನ ಅಭಿಮಾನಿಯಾಗಿ ನನ್ನ ವಿನಂತಿ.

–ಅಂಕರಾಜು ಎನ್, ಹೊಸಮಾಲಂಗಿ, ಕೊಳ್ಳೇಗಾಲ

### ಇತಿಮಿತಿಗಳ ನಡುವೆ ಹಿತಕರ ಬದುಕು

ಮಾನ್ಯರೆ,

ಅತಿಯಾದರೆ ಅಮೃತವು ವಿಷ ಎನ್ನುವ ಮಾತು. ಸರ್ವಕಾಲಕ್ಕೂ ಸರ್ವ ಕಾರ್ಯಕ್ಕೂ ಅನ್ವಯಿಸುತ್ತದೆ. ಅತಿಯಾದ ಪೋಷಣೆಯಿಂದ ಗಿಡದ ಬೆಳವಣಿಗೆ ಕುಂಠಿತಗೊಳ್ಳುತ್ತದೆ. ಹಾಗೆ ಅತಿಯಾದ ಪ್ರೀತಿ ಒಂದು ಮಗುವಿನ ಭವಿಷ್ಯವನ್ನೇ ನಾಶಪಡಿಸುತ್ತದೆ. ಇಂದಿನ ಪೀಳಿಗೆ ಸ್ವಾತಂತ್ರ್ಯ, ಆಧುನಿಕತೆ, ಆರ್ಥಿಕ ಸಬಲತೆಯಿಂದ ಸಂಬಂಧಗಳನ್ನು ಕಳಚಿ ಸ್ವಚ್ಛಂದ ಜೀವನವನ್ನು ಅಪ್ಪಿಕೊಳ್ಳುತ್ತಿದೆ. ಬದುಕಿಗೆ ಎಲ್ಲವೂ ಬೇಕು, ಆದರೆ ಅಗತ್ಯವಿದ್ದಷ್ಟು ಮಾತ್ರ. ಮಿತಿಯಲ್ಲಿದ್ದರೆ ಎಲ್ಲವೂ ಸೂಕ್ತ. ಉದಾಹರಣೆಗೆ, ಪಾಲಕರು ಹೀಗೆ ಇರಬೇಕು ಎಂದು ತಮ್ಮ ಮಕ್ಕಳ ಮೇಲೆ ಹೇರುವ ಅತಿಯಾದ ಒತ್ತಡ ಒಂದೆಡೆಯಾದರೆ ಮಕ್ಕಳು ತಮ್ಮದೇ ಆದ ಅನುಭವದ ಆಯ್ಕೆಯಿಂದ ಗುರಿಯನ್ನು ತಲುಪಲು ಎಡವುತ್ತಾರೆ.

ಈ ಎಲ್ಲಾ ಅಸಮತೋಲನಗಳು ಜೀವನದ ಹಾದಿಯನ್ನು ಎತ್ತಲೋ ಕೊಂಡೊಯ್ಯುತ್ತದೆ. ನಾವು ತೆಗೆದುಕೊಳ್ಳುವ ಯಾವುದೇ ನಿರ್ಧಾರಗಳು ಮಾಡುವ ಯಾವುದೇ ಕೆಲಸಗಳು ಧರ್ಮದ ತಳಹದಿಯಲ್ಲಿ ನಿಂತಾಗ ಮಾತ್ರ ಅರ್ಥಪೂರ್ಣವಾಗುತ್ತದೆ. ಇಲ್ಲವಾದರೆ ಅತಿಯಾದ ಬೆಲೆಯನ್ನೇ ತೆರಬೇಕಾಗುತ್ತದೆ. ದಿನದಿಂದ ದಿನಕ್ಕೆ ವೇಗವಾಗಿ ತಾಂತ್ರಿಕತೆಯು ಬೆಳೆಯುತ್ತಿದೆ. ಕೆಲವು ಪೂರಕವಾದರೆ ಹಲವು ಮಾರಕಗಳು. ಇದಕ್ಕೆ ಕಿರಿಯರಲ್ಲದೆ ಹಿರಿಯರು ಸಹ ಮಾರುಹೋಗುತ್ತಿದ್ದಾರೆ. ನೈತಿಕತೆ ಮೌಲ್ಯಗಳ ಆಚಾರ ವಿಚಾರಗಳು ಕಣ್ಮರೆಯಾಗುತ್ತಿವೆ. ಇದೆಲ್ಲವನ್ನು ಅರಿತು ಯಾವುದು ಅತಿಯಾಗದೆ ಇತಿಮಿತಿಯ ಜೀವನ ನಡೆಸಿ ಸಂತೃಪ್ತಿಯ ಬದುಕಿಗೆ ನಾಂದಿ ಹಾಡೋಣ.

–ಹೇಮಲತಾ ಎಸ್.ಆರ್, ಪ್ರಾಂಶುಪಾಲರು, ಸಿದ್ಧಾರ್ಥನಗರ, ಮೈಸೂರು

### ಉಚಿತ ಬಸ್ ಪ್ರಯಾಣದಲ್ಲಿ ವಿದ್ಯಾರ್ಥಿಗಳು ಹೈರಾಣ

ಮಾನ್ಯರೆ,

ಕರ್ನಾಟಕ ಸರ್ಕಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವುದರಿಂದ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ನೂಕುನುಗ್ಗಲು ಉಂಟಾಗಿ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ನಿಗದಿತ ಸಮಯಕ್ಕೆ ತಲುಪಲು ಸಾಧ್ಯವಾಗುತ್ತಿಲ್ಲ. ಮಹಿಳೆಯರ ನೂಕುನುಗ್ಗಲಿನಿಂದ ವಿದ್ಯಾರ್ಥಿಗಳು ಬಸ್‌ಗಳಲ್ಲಿ ಪ್ರಯಾಣಿಸುವುದೇ ದುಸ್ತರವಾಗಿದೆ. ಪ್ರಸ್ತುತ ಎಲ್ಲಾ ಗ್ರಾಮಗಳಲ್ಲಿಯೂ ಸ್ತ್ರೀ ಶಕ್ತಿ ಸಂಘಗಳಿರುವ ಕಾರಣ ಮಹಿಳೆಯರು ಗುಂಪು ಗುಂಪಾಗಿ ದೇವಸ್ಥಾನಗಳು, ಯಾತ್ರಾ ಸ್ಥಳಗಳಿಗೆ ಪ್ರಯಾಣಿಸುವ ಕಾರಣ ಸಹಜವಾಗಿ ಆ ಮಾರ್ಗದ ಬಸ್‌ಗಳಲ್ಲಿ ನೂಕುನುಗ್ಗಲು ಜಾಸ್ತಿಯಾಗುತ್ತಿದೆ. ಇದರಿಂದ ಇಂತಹ ಮಾರ್ಗಗಳಲ್ಲಿ ಪ್ರಯಾಣಿಸುವ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟಾಗುತ್ತಿದೆ. ಅಲ್ಲದೆ ಸಾಕಷ್ಟು ಮಹಿಳಾ ಶಿಕ್ಷಕರು ಬಸ್‌ಗಳಲ್ಲೇ ಪ್ರಯಾಣಿಸಬೇಕಾಗಿರುವ ಕಾರಣ ಮಹಿಳಾ ಶಿಕ್ಷಕರು ಮತ್ತು ಮಹಿಳಾ ಉದ್ಯೋಗಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಶೇ. 90 ರಷ್ಟು ವಿದ್ಯಾರ್ಥಿಗಳು ಬಸ್‌ಗಳಲ್ಲೇ ಓಡಾಡುವುದರಿಂದ ತೀರಾ ನೂಕು ನುಗ್ಗಲು ಇರುವ ಮಾರ್ಗಗಳಿಗೆ ಅಗತ್ಯಕ್ಕೆ ತಕ್ಕಂತೆ ಬಸ್‌ಗಳನ್ನು ಹಾಕುವುದರ ಮೂಲಕ ಸಮಸ್ಯೆ ಪರಿಹರಿಸಬೇಕಾಗಿ ಈ ಮೂಲಕ ಮನವಿ.

–ಬಿ.ಜಿ. ರಂಗೇಗೌಡ, ಮೈಸೂರು.

### ಬಾಬೂಜಿ ಪ್ರತಿಮೆಗೆ ರಾಜಗೋಪುರ ನಿರ್ಮಿಸಿ

ಮಾನ್ಯರೆ,

ಮೈಸೂರು ಸಾಂಸ್ಕೃತಿಕ ರಾಜಧಾನಿ ಎಂದು ಹೆಸರುವಾಸಿಯಾಗಿದ್ದು, ಮೈಸೂರಿನ ರೈಲ್ವೆ ಸ್ಟೇಷನ್ ವೃತ್ತದಲ್ಲಿರುವ ಡಾ. ಬಾಬು ಜಗಜೀವನರಾಂ ಪ್ರತಿಮೆಗೆ ರಾಜಗೋಪುರ ಇಲ್ಲದಿರುವುದು ವಿಷಾದಕರ ಸಂಗತಿ.

ಮೈಸೂರು ರೈಲ್ವೆ ಸ್ಟೇಷನ್‌ಗೆ ದಿನನಿತ್ಯ ಲಕ್ಷಾಂತರ ಜನರು ಪ್ರಯಾಣಿಸಲು ಆಗಮಿಸುತ್ತಾರೆ. ಪ್ರಯಾಣವನ್ನು ಮುಗಿಸಿ ವೃತ್ತದ ಕಡೆ ಬಂದಾಗ ಜಗಜೀವನರಾಂ ಅವರ ಪ್ರತಿಮೆ ದರ್ಶನವಾಗುತ್ತದೆ. ಜನರು ಪ್ರತಿಮೆಯನ್ನು ನೋಡಿ ನಮಸ್ಕರಿಸುತ್ತಾ ಮುಂದೆ ಸಾಗುತ್ತಾರೆ. ಪ್ರತಿಮೆ ಚಿಕ್ಕದಾಗಿರುವುದರಿಂದ ವೃತ್ತದ ಸುತ್ತ ಬಸ್ಸುಗಳು, ಬೈಕ್‌ಗಳು ಸಂಚರಿಸುವುದರಿಂದ ವಾಹನದಿಂದ ಬರುವ ಹೊಗೆಯಿಂದಾಗಿ ಪ್ರತಿಮೆಗೆ ಹಾನಿಯಾಗುತ್ತಿದೆ. ಬಿಸಿಲಿನಲ್ಲಿ ಒಣಗುತ್ತಿದೆ. ಮಳೆಯಲ್ಲಿ ನೆನೆಯುತ್ತಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಈ ಮಹಾನ್ ನಾಯಕನಿಗೆ ರಾಜಗೋಪುರ ಇಲ್ಲದಿರುವುದು ತುಂಬಾ ಬೇಸರವಾಗಿದೆ. ಜಿಲ್ಲಾಡಳಿತ ವರ್ಷಕ್ಕೆ ಎರಡು ಬಾರಿ ಜನ್ಮ ಜಯಂತಿ, ಪುಣ್ಯಸ್ಮರಣೆ ಕಾರ್ಯಕ್ರಮ ಮಾಡುತ್ತದೆ. ಮತ್ತೆ ಇತ್ತ ಯಾರೂ ತಿರುಗಿ ನೋಡುವುದಿಲ್ಲ. ಆದ್ದರಿಂದ ಬಾಬು ಜಗಜೀವನರಾಂ ಪ್ರತಿಮೆಗೆ ರಾಜಗೋಪುರ ನಿರ್ಮಿಸಿ ಗೌರವ ಸಮರ್ಪಣೆ ಮಾಡಬೇಕೆಂದು ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳಲ್ಲಿ ಮನವಿ.

–ಹೆಚ್. ಮಣಿಕಂಠ, ಚೆಟ್ಟಿಹುಂಡಿ, ಮೈಸೂರು ತಾ.

# ರಾಜ್ಯ ಬಜೆಟ್ ಮೇಲೆ ಮೈಸೂರಿಗರ ಭಾರೀ ನಿರೀಕ್ಷೆ

## ತವರು ಜಿಲ್ಲೆಗೆ ಬಂಪರ್ ಕೊಡುಗೆ ನೀಡುವರೇ ಮುಖ್ಯಮಂತ್ರಿ ಸಿದ್ದರಾಮಯ್ಯ

ಮೈಸೂರು, ಜು.6(ಎಂಟಿವೈ)– ಎರಡನೇ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರು ಹಣಕಾಸು ಸಚಿವರೂ ಆಗಿ ಶುಕ್ರವಾರ ಮಂಡಿಸಲಿರುವ ದಾಖಲೆಯ 14ನೇ ಬಜೆಟ್ ಮೇಲೆ ತವರು ಜಿಲ್ಲೆ ಮೈಸೂರಿನ ಜನ ಭಾರೀ ನಿರೀಕ್ಷೆ ಹೊಂದಿದ್ದಾರೆ. ಕಳೆದ ಬಾರಿಯಂತೆ ಜಿಲ್ಲೆಗೆ ಭರ್ಜರಿ ಕೊಡುಗೆ ನೀಡಬಹುದೆಂಬ ಕಾತುರದಿಂದ ಬಜೆಟ್ ಮಂಡನೆಯನ್ನು ಎದುರು ನೋಡುತ್ತಿದ್ದಾರೆ.

ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ, ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಜಯದೇವ ಹೃದ್ರೋಗ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ, ಟ್ರಾಮಾ ಕೇರ್ ಸೆಂಟರ್, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾಸ್ಪತ್ರೆ, ಪೊಲೀಸ್ ಆಯುಕ್ತರ ಕಚೇರಿ ಕಟ್ಟಡ ಸೇರಿದಂತೆ ಹಲವು ಶಾಶ್ವತ ಯೋಜನೆಗಳನ್ನು ನೀಡಿದ್ದು, ಇಂತಹ ಮಹತ್ವದ ಕೊಡುಗೆಗಳನ್ನು ತಮ್ಮ ದಾಖಲೆ ಬಜೆಟ್‌ನಲ್ಲೂ ನೀಡಬಹುದೆಂಬ ವಿಶ್ವಾಸ ಹೊಂದಿದ್ದಾರೆ.

ತಮ್ಮ ಕೊನೆಯ ಚುನಾವಣೆಯಲ್ಲಿ ತವರು ಕ್ಷೇತ್ರ ವರುಣದಿಂದಲೇ ಸ್ಪರ್ಧಿಸಿ, ಎದುರಾದ ಹಲವು ಸವಾಲುಗಳನ್ನು ಜಯಿಸುವ ಮೂಲಕ ಗೆಲುವು ಸಾಧಿಸಿ, 2ನೇ ಬಾರಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯನವರು ಏನೆಲ್ಲಾ ಕೊಡುಗೆ ನೀಡುವರೆಂಬುದು ಬಜೆಟ್ ಮಂಡಿಸಿದ ಬಳಿಕ ತಿಳಿಯಲಿದೆ. ಆದರೆ ಜನರಲ್ಲಿ ನಿರೀಕ್ಷೆಗಳಂತೂ ಬಹಳಷ್ಟಿವೆ.



### ದಸರಾ ಪ್ರಾಧಿಕಾರ ಸ್ಥಾಪನೆ

ನಾಡಹಬ್ಬ ದಸರಾ ಮಹೋತ್ಸವವನ್ನು ವ್ಯವಸ್ಥಿತವಾಗಿ ಆಚರಿಸಲು ಪ್ರತ್ಯೇಕ ಪ್ರಾಧಿಕಾರ ರಚನೆ ಮಾಡಬೇಕೆಂಬ ಕೂಗು ಹಲವು ವರ್ಷಗಳದ್ದಾಗಿದೆ. ಈ ಬಗ್ಗೆ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ವಹಿಸುವುದಾಗಿ ಸಿದ್ದರಾಮಯ್ಯನವರೇ ಈ ಹಿಂದೆ ಭರವಸೆ ನೀಡಿದ್ದರು. ಹಾಗಾಗಿ ಈ ಬಾರಿ ಈ ಬೇಡಿಕೆ ಈಡೇರಬಹುದೆಂಬ ನಿರೀಕ್ಷೆ ಇದೆ. ದಸರಾ ಪ್ರಾಧಿಕಾರ ರಚನೆಯಾದರೆ ನಾಡಹಬ್ಬ ದಸರಾವನ್ನು ಅಂತಿಮ ಕ್ಷಣದಲ್ಲಿ ತಯಾರಿ ಗಡಿಬಿಡಿ, ಗೊಂದಲವಿಲ್ಲದೆ ವ್ಯವಸ್ಥಿತವಾಗಿ ಅದ್ದೂರಿಯಾಗಿ ಆಚರಿಸಲು ಅನುವಾಗುತ್ತದೆ. ದೇಶ–ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮ ರೂಪಿಸಲು ಸಾಧ್ಯವಾಗುತ್ತದೆ. ಇದರಿಂದ ಮೈಸೂರಿನ ಪ್ರವಾಸೋದ್ಯಮಕ್ಕೆ ಹೊಸ ಚೈತನ್ಯ ಸಿಗಲಿದೆ.

### ಪಾರಂಪರಿಕ ಕಟ್ಟಡಗಳ ಸಂರಕ್ಷಣೆ

ಮೈಸೂರಿಗೆ ಪಾರಂಪರಿಕ ನಗರಿ ಎಂಬ ಬಿರುದಿನ ಗರಿಯೂ ಇದೆ. ಅಂಬಾವಿಲಾಸ ಅರಮನೆ, ಜಯಲಕ್ಷ್ಮೀ ವಿಲಾಸ ಅರಮನೆ, ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡ, ಹಳೆಯ ಡಿಸಿ ಕಚೇರಿ ಕಟ್ಟಡ, ದೊಡ್ಡಗಡಿಯಾರ, ಮಹಾರಾಣಿ ಮಹಿಳಾ ಕಾಲೇಜು, ಮಹಾರಾಜ ಕಾಲೇಜು ಕಟ್ಟಡ ಸೇರಿದಂತೆ 200ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳಿವೆ. ಆದರೆ ಸೂಕ್ತ ನಿರ್ವಹಣೆ ಮತ್ತು ಅನುದಾನದ ಕೊರತೆಯಿಂದ ಒಂದೊಂದೇ ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆ ತಲುಪುತ್ತಿವೆ. ಸಿದ್ದರಾಮಯ್ಯನವರು ಮೊದಲ ಬಾರಿ ಸಿಎಂ ಆಗಿದ್ದಾಗ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡಗಳ ನವೀಕರಣಕ್ಕೆ ಗುದ್ದಲಿಪೂಜೆ ನೆರವೇರಿಸಿದ್ದರು. ಆದರೆ ಕಾಮಗಾರಿ ಶುರುವಾಗಲೇ ಇಲ್ಲ. ಮೈಸೂರಿನ ಅಸ್ಮಿತೆಯ ಸಂಕೇತವೂ ಆಗಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಈ ಬಾರಿ ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಟ್ಟು, ಸಮಗ್ರ ಯೋಜನೆ ರೂಪಿಸಬಹುದೆಂಬ ಆಶಯ ಎಲ್ಲರಲ್ಲೂ ಇದೆ.





### ವರುಣ ಕ್ಷೇತ್ರದಲ್ಲೇ ಚಿತ್ರನಗರಿ ಸ್ಥಾಪನೆ

ರಾಜ್ಯಕ್ಕೆ 2 ಬಾರಿ ಮುಖ್ಯಮಂತ್ರಿ ಹಾಗೂ ಒಂದು ಬಾರಿ ವಿರೋಧ ಪಕ್ಷದ ನಾಯಕನನ್ನ ಕೊಡುಗೆ ನೀಡಿರುವ ಮೈಸೂರು ತಾಲೂಕಿನ ವರುಣ ಕ್ಷೇತ್ರಕ್ಕೂ ಬಂಪರ್ ಯೋಜನೆ ಸಿಗಬಹುದು. ಇನ್ನು ವರುಣ ವ್ಯಾಪ್ತಿಯ ಇಮ್ಮಾವು ಬಳಿ ಫಿಲ್ಮ್‌ಸಿಟಿ (ಚಿತ್ರನಗರಿ) ನಿರ್ಮಾಣ ಈಗಾಗಲೇ ಸ್ಥಳ ಗುರುತಿಸಲಾಗಿದೆ. ಕಳೆದ ಆರು ವರ್ಷದಿಂದಲೂ ಚಿತ್ರನಗರಿ ನಿರ್ಮಾಣ ಸಂಬಂಧ ಹಗ್ಗಜಗ್ಗಾಟ ನಡೆದಿದೆಯಾದರೂ ಚಿತ್ರೋದ್ಯಮದ ಹಲವು ಮಂದಿ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಉದ್ದೇಶಿತ ಇಮ್ಮಾವು ಗ್ರಾಮದಲ್ಲೇ ಚಿತ್ರನಗರಿ ನಿರ್ಮಾಣ ಮಾಡುವಂತೆ ಒತ್ತಾಯಿಸಿದ್ದಾರೆ. ಹಾಗಾಗಿ ಚಿತ್ರ ನಗರಿಗೆ ಅನುದಾನ ಘೋಷಣೆ ಮಾಡಿ, ಅಡಿಗಲ್ಲು ಹಾಕಬಹುದೆಂಬ ವಿಶ್ವಾಸವಿದೆ. ಚಿತ್ರನಗರಿಯಿಂದ ಮೈಸೂರು ಸೇರಿದಂತೆ ಅಕ್ಕಪಕ್ಕದ ಜಿಲ್ಲೆಗಳ ಪ್ರವಾಸೋದ್ಯಮ ಅಭಿವೃದ್ಧಿ ಜೊತೆಗೆ ಸಾವಿರಾರು ಉದ್ಯೋಗ ಸೃಷ್ಟಿಯಾಗಲಿದೆ.






### ಪೆರಿಫೆರಲ್ ರಿಂಗ್ ರಸ್ತೆ



ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ಮುಂದಿನ ನಾಲ್ಕೈದು ದಶಕಗಳಲ್ಲಿನ ಬೆಳವಣಿಗೆ, ಸಂಚಾರ ದಟ್ಟಣೆ ನಿರೀಕ್ಷೆಯೊಂದಿಗೆ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾವವಿದೆ. ಈ ಬಾರಿ ಬಜೆಟ್‌ನಲ್ಲಿ ಅದಕ್ಕಾಗಿ ಈ ಅನುದಾನ ಘೋಷಿಸಬಹುದೆಂಬ ನಿರೀಕ್ಷೆ ಇದೆ.



### ಕೈಗಾರಿಕಾ ಕಾರಿಡಾರ್ ಬೇಡಿಕೆ

ಮೈಸೂರಿನಲ್ಲಿ ಕೈಗಾರಿಕೋದ್ಯಮ ವಿಸ್ತಾರವಾಗುತ್ತಿದ್ದು, ಸಹಸ್ರಾರು ಉದ್ಯೋಗ ಸೃಷ್ಟಿಯಾಗುತ್ತಿದೆ. ಆದರೆ ಕೈಗಾರಿಕೋದ್ಯಮಿಗಳ ಹಲವು ಬೇಡಿಕೆಗಳು ದಶಕಗಳಿಂದ ಈಡೇರಿಲ್ಲ. ಈ ಬಾರಿ ಬಜೆಟ್‌ನಲ್ಲಿಯಾದರೂ ಕೈಗಾರಿಕೆಗಳ ಬೇಡಿಕೆಗೆ ಸ್ಪಂದಿಸುವಂತೆ ಕೈಗಾರಿಕಾ ಸಂಘ ಈಗಾಗಲೇ ಮನವಿ ಸಲ್ಲಿಸಿದೆ. ಮಲ್ಟಿಲೆವೆಲ್ ಪಾರ್ಕಿಂಗ್ ವ್ಯವಸ್ಥೆ ಮೈಸೂರು–ಮಂಗಳೂರು ನಡುವೆ ಇಂಡಸ್ಟ್ರಿಯಲ್ ಕಾರಿಡಾರ್ ನಿರ್ಮಾಣ ಇನ್ನಿತರ ಯೋಜನೆಗಳು ಈ ಬಾರಿ ಈಡೇರಬಹುದು ಎಂದು ವಿಶ್ವಾಸವಿಟ್ಟಿದ್ದಾರೆ. ಇನ್ನು ಬೃಂದಾವನ ಗಾರ್ಡನ್ ಮಾದರಿಯಲ್ಲಿ ಕಬಿನಿ ಜಲಾಶಯದ ಬಳಿ ಉದ್ಯಾನ ನಿರ್ಮಾಣ, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆ, ವಿದ್ಯಾರಣ್ಯಪುರಂನಲ್ಲಿರುವ ಸೀವೇಜ್ ಫಾರಂನಲ್ಲಿ ಸಂಗ್ರಹವಾಗಿರುವ ಭಾರೀ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಸೇರಿದಂತೆ ಹಲವು ಕಾರ್ಯಗಳಿಗೆ ಅನುದಾನ ಘೋಷಿಸಬಹುದು ಎನ್ನಲಾಗಿದೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

ಮೈಸೂರು ಮಿತ್ರ ಶುಕ್ರವಾರ 7 ಜುಲೈ 2023

# ಡಾ.ಬಾಬು ಜಗಜೀವನ್‌ರಾಮ್ ಅವರ 37ನೇ ವರ್ಷದ ಪುಣ್ಯಸ್ಮರಣೆ



ಮೈಸೂರು,ಜು.6– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಮೈಸೂರು ಸಂಯುಕ್ತಾಶ್ರಯದಲ್ಲಿ ಹಸಿರು ಕ್ರಾಂತಿಯ ಹರಿಕಾರ, ರಾಷ್ಟ್ರ ನಾಯಕ ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಮ್ ಅವರ 37ನೇ ವರ್ಷದ ಪುಣ್ಯಸ್ಮರಣೆ ಪ್ರಯುಕ್ತ ಮೈಸೂರಿನ ರೈಲ್ವೆ ನಿಲ್ದಾಣದ ಬಾಬು ಜಗಜೀವನ್ ರಾಮ್ ವೃತ್ತದಲ್ಲಿನ ಅವರ ಪ್ರತಿಮೆಗೆ ಮಾಲಾರ್ಪಣೆ ಮತ್ತು ಪುಷ್ಪಾರ್ಚನೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ ರಾಜೇಂದ್ರ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ ರೂಪ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಎಲ್ಲರೂ ಸಮಾನತೆಯ ಬದುಕು ಸಾಗಿಸಬೇಕೆಂಬುದು ಬಾಬೂಜಿ ಕನಸು

### ಮುಕ್ತ ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಡಾ.ಪವಿತ್ರ ವಿಶೇಷ ಉಪನ್ಯಾಸ



ಮುಕ್ತ ವಿವಿಯ ಡಾ.ಬಾಬು ಜಗಜೀವನ ರಾಮ್ ಅಧ್ಯಯನ ಕೇಂದ್ರದಲ್ಲಿ ಬಾಬೂಜಿ ಭಾವಚಿತ್ರಕ್ಕೆ ಪ್ರಾಧ್ಯಾಪಕರು ಪುಷ್ಪಾರ್ಚನೆ ಮಾಡಿದರು.

ಮೈಸೂರು, ಜು.6(ಎಸ್‌ಬಿಡಿ)– ದೇಶಕ್ಕೆ ಡಾ.ಬಾಬು ಜಗಜೀವನ್ ರಾಮ್ ಅವರ ಕೊಡುಗೆ ಅವಿಸ್ಮರಣೀಯ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕಿ ಡಾ.ಆರ್.ಹೆಚ್.ಪವಿತ್ರ ಹೇಳಿದರು.

ಮುಕ್ತ ವಿಶ್ವವಿದ್ಯಾನಿಲಯದ ಡಾ.ಬಾಬು ಜಗಜೀವನ ರಾಮ್ ಅಧ್ಯಯನ ಕೇಂದ್ರದ ವತಿಯಿಂದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನ್ ರಾಮ್ ಅವರ 37ನೇ ಪುಣ್ಯಸ್ಮರಣೆಯ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಬಾಬು ಜಗಜೀವನ್ ರಾಮ್ ಅವರು ಬಾಲ್ಯದಿಂದಲೇ ದೀನ ದಲಿತರ ಶೋಷಣೆ ಕಂಡು ನೊಂದಿದ್ದರು. ಶಾಲೆಯಲ್ಲಿ ಎರಡು ಧರ್ಮಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಮಡಿಕೆ ಇಟ್ಟಿದ್ದನ್ನು ಖಂಡಿಸಿದ್ದರು. ತಾರತಮ್ಯ ವಿರೋಧಿಸಿ ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದರು. ಕಾರ್ಮಿಕ ಸಚಿವರಾಗಿದ್ದಾಗ ದುಡಿಯುವ ವರ್ಗಕ್ಕೆ ಶಕ್ತಿ ತುಂಬಿದರು. ಕನಿಷ್ಟ ವೇತನ, ಇಎಸ್‌ಐ, ಪಿಎಫ್ ಇನ್ನಿತರ ಸೌಲಭ್ಯಗಳ ಮೂಲಕ ಕಾರ್ಮಿಕರಿಗೆ ಜೀವನ ಭದ್ರತೆ ಸಿಗುವಲ್ಲಿ ಕಾರಣಕರ್ತರಾದರು. ಕೃಷಿ ಸಚಿವರಾಗಿದ್ದಾಗ ಹಸಿರು ಕ್ರಾಂತಿಯ ಹರಿಕಾರರಾದರು ಎಂದು ಸ್ಮರಿಸಿಕೊಂಡರು.

ಅಸ್ಪೃಶ್ಯತೆ ವಿರುದ್ಧ ಹೋರಾಟ ನಡೆಸಿದ್ದ ಅವರು ಎಲ್ಲರೂ ಸಮಾನತೆಯಿಂದ ಬದುಕಬೇಕೆಂಬುದು ಡಾ.ಬಾಬು ಜಗಜೀವನ್ ರಾಮ್ ಅವರ ಕನಸಾಗಿತ್ತು. ಆ ನಿಟ್ಟಿನಲ್ಲಿ ಸಾಕಷ್ಟು ಹೋರಾಟ ನಡೆಸಿದರು. ಹಾಗಾಗಿ ಅವರ ಸಮಾಧಿ ಸ್ಥಳವನ್ನು 'ತನ್ಮಯಿ' ಎಂದು ಕರೆಯಲಾಗುತ್ತದೆ. ತನ್ಮಯಿ ಎಂದರೆ ಸಮಾನತೆ ಎಂದರ್ಥ. ಈ ಹಿನ್ನೆಲೆಯಲ್ಲಿ ಅವರ ಪುಣ್ಯಸ್ಮರಣೆ ದಿನ(ಜು.6)ವನ್ನು 'ತನ್ಮಯಿ ದಿನ' ಅಥವಾ 'ಸಮಾನತೆ ದಿನ'ವಾಗಿ ಆಚರಿಸಲಾಗುವುದು ಎಂದು ತಿಳಿಸಿದರು. ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ, ಶೈಕ್ಷಣಿಕ ಡೀನ್ ಡಾ.ಎನ್.ಲಕ್ಷ್ಮಿ, ಅಧ್ಯಯನ ವಿಭಾಗದ ಡೀನ್ ಡಾ.ರಮಾನಾಥಂ ನಾಯ್ಡು, ಪರಿಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಹಣಕಾಸು ಅಧಿಕಾರಿ ಡಾ.ಎ.ಖಾದರ್ ಪಾಷ, ಡಾ.ಬಾಬು ಜಗಜೀವನ್ ರಾಮ್ ಪೀಠದ ನಿರ್ದೇಶಕರಾದ ಡಾ.ಆರ್. ಶರಣಮ್ಮ ಮತ್ತಿತರರು ಭಾಗವಹಿಸಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಗುರುವಾರ ಬಾಬು ಜಗಜೀವನ್ ರಾಮ್ ಅವರ ಪುಣ್ಯತಿಥಿ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ಬಾಬೂಜಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಮೇಕೆದಾಟು ಯೋಜನೆಗೆ ಅವಕಾಶ ನೀಡುವುದಿಲ್ಲ



ಚೆನ್ನೈ,ಜು.6–ಕಾವೇರಿ ನದಿ ನೀರಿನ ವಿಷಯ ಸಾಮಾನ್ಯವಾದುದಲ್ಲ, ಅದು ಜೀವನದ ಪ್ರಶ್ನೆ. ಹಾಗಾಗಿ, ಮೇಕೆದಾಟು ಬಳಿ ಜಲಾಶಯ ನಿರ್ಮಾಣಕ್ಕೆ ಕರ್ನಾಟಕಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಮಿಳುನಾಡಿನ ಜಲಸಂಪನ್ಮೂಲ ಸಚಿವ ದುರೈ ಮುರುಗನ್ ಹೇಳಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಶೇಖಾವತ್ ಅವರನ್ನು ಭೇಟಿ ಮಾಡಿ ರಾಜ್ಯಕ್ಕೆ ಹಿಂದಿರುಗಿದ ಅವರು, ಭೇಟಿ ಕುರಿತಂತೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು. ಜು.3ರವರೆಗೆ ನಮ್ಮ ರಾಜ್ಯವು ಕಾವೇರಿ ನದಿಯಿಂದ ಕಡಿಮೆ ಪ್ರಮಾಣದ ನೀರನ್ನು ಪಡೆಯುತ್ತಿರುವುದರ ಬಗ್ಗೆ ಕೇಂದ್ರದ ಗಮನ ಸೆಳೆಯಲಾಗಿದೆ. ಇದೇ ಪರಿಸ್ಥಿತಿ ಮುಂದುವರಿದರೆ ನದಿ ನೀರನ್ನೇ ನಂಬಿ ಕೊಂಡಿರುವ ಜಿಲ್ಲೆಗಳಲ್ಲಿ ಅಲ್ಪಾವಧಿ ಬೆಳೆಗಳ ಮೇಲೆ ಪರಿಣಾಮ ಬೀರಲಿದೆ ಎಂದು ತಿಳಿಸಿರುವುದಾಗಿ ಹೇಳಿದ್ದಾರೆ. ರಾಜ್ಯದ ಕಾವೇರಿ ನದಿ ಪಾತ್ರದ ಭೂಮಿಯ ಜಿಲ್ಲೆಗಳಲ್ಲಿನ ಬೆಳೆಗಳನ್ನು ರಕ್ಷಿಸಲು ಕರ್ನಾಟಕವು ಕೂಡಲೇ ನದಿಯಿಂದ ನೀರು ಬಿಡಬೇಕು. ಈ ಸಂಬಂಧ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಕರ್ನಾಟಕದೊಂದಿಗೆ ಮಾತುಕತೆ ನಡೆಸಬೇಕು ಅಥವಾ ನೀರು ಬಿಡುಗಡೆ ಮಾಡಲು ಆದೇಶಿಸಬೇಕು ಎಂಬುದಾಗಿ ಶೇಖಾವತ್ ಅವರಿಗೆ ಮನವಿ ಸಲ್ಲಿಸಲಾಯಿತು ಎಂದರು. ತಕ್ಷಣವೇ ಪ್ರಾಧಿಕಾರದ ಸಭೆ ಕರೆಯಲು ಕ್ರಮಕೈಗೊಳ್ಳುವಂತೆ ಕೇಂದ್ರ ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ದುರೈಮುರುಗನ್ ಹೇಳಿದರು. ಅಲ್ಲದೆ, ನೀರಿನ ಹಂಚಿಕೆ ಕುರಿತಂತೆ ಸುಪ್ರೀಂ ಕೋರ್ಟ್‌ನ ತೀರ್ಪನ್ನು ಪಾಲಿಸಬೇಕಾದ ಹೊಣೆ ಕರ್ನಾಟಕ ಸರ್ಕಾರದ ಮೇಲಿದೆ ಎಂದರು. ಕಾವೇರಿ ನದಿಗೆ ಅಡ್ಡಲಾಗಿ ಕರ್ನಾಟಕ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಜಲಾಶಯ ಯೋಜನೆ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಕರ್ನಾಟಕ ನಮ್ಮ ಜೊತೆ ಸಭೆ ನಡೆಸಿದರೂ, ಪತ್ರ ಬರೆದರೂ ಯೋಜನೆಗೆ ಸಮ್ಮತಿ ನೀಡುವುದಿಲ್ಲ ಎಂದರು.

## ಕೃಷಿ ಪಂಪ್‌ಸೆಟ್‌ಗೆ ಸೌರ ವಿದ್ಯುತ್ ಸಂಪರ್ಕ: ಶೀಘ್ರ ಒಂದು ನೀತಿ

### ಇಂಧನ ಸಚಿವ ಜಾರ್ಜ್ ಮಾಹಿತಿ



ಬೆಂಗಳೂರು, ಜು.6(ಕೆಎಂಶಿ)– ರೈತರ ಪಂಪ್ ಸೆಟ್‌ಗಳಿಗೆ ಸೌರ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ ಶೀಘ್ರದಲ್ಲೇ ನೀತಿಯೊಂದನ್ನು ರೂಪಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ವಿಧಾನಸಭೆಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಟಿ.ಬಿ.ಜಯಚಂದ್ರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರೈತರು ಪಂಪ್‌ಸೆಟ್‌ಗಳಿಗೆ ಸೌರವಿದ್ಯುತ್ ಸಂಪರ್ಕ ಅಳವಡಿಸಿಕೊಳ್ಳಲು ಸುಮಾರು 4.5 ಲಕ್ಷ ರೂ. ಖರ್ಚಾಗಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸುಮಾರು 3.5 ಲಕ್ಷ ರೂ. ಸಹಾಯಧನದ ರೂಪದಲ್ಲಿ ದೊರೆಯಲಿದೆ. ಇನ್ನೊಂದು ಲಕ್ಷ ರೂ.ವನ್ನು ರೈತರು ಭರಿಸುವುದು ಕಷ್ಟವಾಗಲಿದೆ ಎಂಬುದನ್ನು ಮನಗಂಡಿರುವ ಸರ್ಕಾರ, ಯಾವುದಾದರೂ ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಕಲ್ಪಿಸಲು ಚಿಂತನೆ ನಡೆದಿದೆ ಎಂದರು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಮಗ್ರ ನೀತಿಯೊಂದನ್ನು ಜಾರಿಗೊಳಿಸಲು ಗಂಭೀರ ಚಿಂತನೆ ನಡೆದಿದೆ ಎಂದರು.

ರೈತರ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿದೆ. ಅವರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಕೆಗೆ ಏನೆಲ್ಲಾ ಮಾಡಬಹುದು ಎಂಬ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗುವುದು. ಅಕ್ರಮ–ಸಕ್ರಮ ಯೋಜನೆ ಒಂದು ಬಾರಿಗೆ ಮಾತ್ರ ಸೂಕ್ತವಾಗಿದ್ದು, ಎಲ್ಲಾ ಕಾಲಕ್ಕೂ ಈ ಯೋಜನೆ ಅನ್ವಯ ಮಾಡುವುದು ಕಷ್ಟವಾಗುತ್ತದೆ ಎಂದರು. ಅಕ್ರಮ–ಸಕ್ರಮ ಯೋಜನೆಯಡಿ ಸಾವಿರಾರು ಅರ್ಜಿಗಳು ಇತ್ಯರ್ಥಕ್ಕಾಗಿ ಬಾಕಿ ಇದ್ದು, ಅವುಗಳನ್ನು ಆದ್ಯತೆ ಮೇಲೆ ಬಗೆಹರಿಸಲು ಪ್ರಯತ್ನಿಸಲಾಗುವುದು. ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಸಹಾಯ ಧನದ ರೂಪದಲ್ಲಿ 16 ಸಾವಿರ ಕೋಟಿ ರೂ. ನೀಡಲಾಗುತ್ತಿದೆ ಎಂದು ಹೇಳಿದರು.

## ಚಾ.ಬೆಟ್ಟ ಪ್ಲಾಸ್ಟಿಕ್ ಮುಕ್ತ ಅಭಿಯಾನಕ್ಕೆ ಸ್ಥಳೀಯ ವ್ಯಾಪಾರಿಗಳೇ ಅಡೆತಡೆ

### ಗ್ರಾಮ ಪಂಚಾಯಿತಿ ಅಧಿಕಾರಿಗಳಿಂದ 12 ಕೆಜಿ ನಿಷೇಧಿತ ಪ್ಲಾಸ್ಟಿಕ್ ವಶಕ್ಕೆ



ಮೈಸೂರು, ಜು.6(ಎಂಕೆ)– ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ಬಳಕೆ ಮಾಡುತ್ತಿದ್ದ ವ್ಯಾಪಾರಿಗಳ ಮಳಿಗೆಗಳಿಗೆ ದಿಢೀರ್ ದಾಳಿ ನಡೆಸಿದ ಗ್ರಾಪಂ ಅಧಿಕಾರಿ, ಸಿಬ್ಬಂದಿ 12 ಕೆ.ಜಿ ಪ್ಲಾಸ್ಟಿಕ್ ವಶಕ್ಕೆ ಪಡೆದಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ನಿಷೇಧಿಸಲಾಗಿದೆ ಎಂದು ಎಚ್ಚರಿಕೆ ನೀಡಿದ್ದರೂ, ಅಲ್ಲಿನ ಕೆಲವು ವ್ಯಾಪಾರಿಗಳು ಪ್ಲಾಸ್ಟಿಕ್ ಬಳಸುತ್ತಿದ್ದನ್ನು ಗಮನಿಸಿದ ಗ್ರಾಪಂ ಪಿಡಿಓ ರೂಪೇಶ್ ಹಾಗೂ ಇತರೆ ಸಿಬ್ಬಂದಿ, ಬುಧವಾರ ಕೆಲ ಮಳಿಗೆಗಳಿಗೆ ಭೇಟಿ ನೀಡಿ, ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡಿದ್ದಾರೆ. ಸಹಸ್ರಾರು ಭಕ್ತರು ಹಾಗೂ ಪ್ರವಾಸಿಗರು ಚಾಮುಂಡಿಬೆಟ್ಟಕ್ಕೆ ಆಗಮಿಸುತ್ತಾರೆ. ಆಷಾಢ ಮಾಸದ ದಿನಗಳಲ್ಲಂತೂ ಹೆಚ್ಚಾಗಿ ಬರುವ ಭಕ್ತರಿಗೆ ಪ್ಲಾಸ್ಟಿಕ್ ಮೂಲಕ ಯಾವುದೇ ವಸ್ತುಗಳನ್ನು ನೀಡಬಾರದು ಎಂದು ಈ ಹಿಂದೆಯೇ ಸೂಚನೆ ನೀಡಲಾಗಿತ್ತು. ಅದಾಗ್ಯೂ ಪ್ಲಾಸ್ಟಿಕ್ ಬಳಸುತ್ತಿದ್ದ ಕೆಲವು ವ್ಯಾಪಾರಿಗಳ ಮಳಿಗೆಗಳನ್ನು ಪರಿಶೀಲಿಸಿ ಪ್ಲಾಸ್ಟಿಕ್ ವಶಕ್ಕೆ ಪಡೆಯಲಾಗಿದ್ದು, ಮತ್ತೆ ಬಳಕೆ ಮಾಡಿದರೆ ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಲಾಗಿದೆ.

**ಪ್ಲಾಸ್ಟಿಕ್ ಮುಕ್ತ ಬೆಟ್ಟ:** ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟಕ್ಕಾಗಿ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದೇ ರೀತಿ ಪ್ಲಾಸ್ಟಿಕ್ ಬಳಕೆ ಪುನಾರವರ್ತನೆಗೊಂಡರೆ ಮಳಿಗೆ ಮಾಲೀಕರಿಗೆ ದಂಡ ವಿಧಿಸಲಾಗುವುದು ಹಾಗೂ ಮಳಿಗೆಯ ಪರವಾನಗಿ ರದ್ದುಪಡಿಸುವಂತಹ ಕ್ರಮ ಕೈಗೊಳ್ಳಲಾಗುವುದು ಎಂದು ಪಿಡಿಓ ರೂಪೇಶ್ ತಿಳಿಸಿದ್ದಾರೆ.

## ಸೈಬರ್ ಅಪರಾಧದ ಬಗ್ಗೆ ಜಾಗೃತಿ ಅನಿವಾರ್ಯ

### ವಿದ್ಯಾರ್ಥಿಗಳಿಗೆ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್ ಕಿವಿಮಾತು



ಮೈಸೂರು, ಜು.6(ಎಸ್‌ಬಿಡಿ)– ಸೈಬರ್ ಅಪರಾಧ (ಕ್ರೈಂ) ಹೆಚ್ಚಾಗುತ್ತಿದ್ದು, ಈ ಬಗ್ಗೆ ಮಕ್ಕಳಾದಿಯಾಗಿ ಎಲ್ಲರೂ ಜಾಗೃತೆ ವಹಿಸುವುದು ಅನಿವಾರ್ಯವಾಗಿದೆ.

ಈ ನಿಟ್ಟಿನಲ್ಲಿ ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆಯಲ್ಲಿ ಏರ್ಪಡಿಸಿದ್ದ 'ಸೈಬರ್ ಕಾನೂನು ಮತ್ತು ಸೈಬರ್ ಭದ್ರತೆ' ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ್‌ಕುಮಾರ್, 9 ಹಾಗೂ 10ನೇ ತರಗತಿ ವಿದ್ಯಾರ್ಥಿಗಳಿಗೆ ಮಹತ್ವದ ವಿಚಾರಗಳನ್ನು ತಿಳಿಸಿಕೊಟ್ಟರು.

ಹೊಸ ತಂತ್ರಜ್ಞಾನ, ಆವಿಷ್ಕಾರಗಳು ಆಕರ್ಷಿಸುತ್ತವೆ. ಆದರೆ ಅವುಗಳ ಬಳಕೆ ಸೂಕ್ತವಾಗಿರಬೇಕು. ಅದರಲ್ಲೂ ಎಲ್ಲರೂ ಬಳಸುವ ಮೊಬೈಲ್ ವಿಚಾರದಲ್ಲಿ ಎಚ್ಚರಿಕೆಯಿಂದಿರಬೇಕು. ಪ್ರಸ್ತುತ ಮಕ್ಕಳು ಮೊಬೈಲ್‌ಗೆ ಹೆಚ್ಚು ಆಕರ್ಷಿತರಾಗಿದ್ದಾರೆ. ಕೆಲವರು ಒಂದು ಕ್ಷಣವೂ ಮೊಬೈಲ್ ಬಿಟ್ಟಿರುವುದಿಲ್ಲ. ಆದರೆ ಸಾಮಾಜಿಕ ಮಾಧ್ಯಮಗಳ ಬಗ್ಗೆ ಹೆಚ್ಚು ನಿಗಾ ವಹಿಸಬೇಕು. ಇನ್ನು ಗೇಮ್ ನೆಪದಲ್ಲಿ ವಂಚಿಸುವ ಸಾಧ್ಯತೆ ಬಗ್ಗೆ ಎಚ್ಚರಿಕೆ ಇರಬೇಕು ಎಂದು ಸಲಹೆ ನೀಡಿದರು.

ಆಧುನಿಕ ತಂತ್ರಜ್ಞಾನದ ಅವಲಂಬನೆ ಹೆಚ್ಚಾದಂತೆಲ್ಲಾ, ಆ ಮೂಲಕ ವಂಚಿಸುವ ಪ್ರಕರಣಗಳೂ ಹೆಚ್ಚಾಗಿ ನಡೆಯುತ್ತಿವೆ. ಬ್ಯಾಂಕ್ ಅಧಿಕಾರಿಗಳೆಂದು ಸುಳ್ಳು ಹೇಳಿ ಎಟಿಎಂ ಕಾರ್ಡ್ ಮಾಹಿತಿ ತಿಳಿದುಕೊಂಡು ಬ್ಯಾಂಕ್ ಖಾತೆಯಲ್ಲಿರುವ ಹಣ ದೋಚುತ್ತಾರೆ. ಗೇಮ್ ಮೂಲಕ ಆಕರ್ಷಿಸಿ, ಅದನ್ನು ಮುಂದುವರೆಸಲು ಹಣ ಪಾವತಿಸಿಕೊಳ್ಳುತ್ತಾರೆ. ಮಕ್ಕಳನ್ನು ಅಪಾಯಕ್ಕೆ ದೂಡಿರುವಂತಹ ಪ್ರಕರಣಗಳೂ ನಡೆದಿವೆ. ಆನ್‌ಲೈನ್ ಮಾರುಕಟ್ಟೆ ನೆಪದಲ್ಲಿ ಹಣ ಪಡೆದು ವಂಚಿಸುವವರಿದ್ದಾರೆ. ನಿಮ್ಮ ಮೊಬೈಲ್ ಸಂಖ್ಯೆ ಬಹುಮಾನಕ್ಕೆ ಆಯ್ಕೆಯಾಗಿದೆ, ಇಷ್ಟು ಹಣ ಪಾವತಿಸಿದರೆ ಅಧಿಕ ಮೌಲ್ಯದ ಕೊಡುಗೆ ನಿಮ್ಮದಾಗುತ್ತದೆ ಎಂದು ನಂಬಿಸಿ, ವಂಚಿಸುತ್ತಾರೆ. ಹೀಗೆ ಹಲವು ರೀತಿಯ ಸೈಬರ್ ಕ್ರೈಂ ವರದಿಯಾಗುತ್ತವೆ ಎಂದು ತಿಳಿಸಿದರು.

ಮಕ್ಕಳು ಮೊಬೈಲ್‌ನಿಂದ ದೂರವಿರಬೇಕು. ಅನಿವಾರ್ಯವಿದ್ದರೆ ಮಾತ್ರ ಇತಿಮಿತಿಯಲ್ಲಿ ಬಳಸಬೇಕು. ಆನ್‌ಲೈನ್ ಗೇಮ್‌ಗಳಿಗೆ ಆಕರ್ಷಿತರಾಗಬಾರದು. ಇದರಿಂದ ಹಣ ಕಳೆದುಕೊಳ್ಳುವುದು ಒಂದೆಡೆಯಾದರೆ ಮಕ್ಕಳನ್ನು ಅಪಾಯಕ್ಕೆ ದೂಡುವ ಸಾಧ್ಯತೆ ಹೆಚ್ಚಾಗಿದೆ. ಸೈಬರ್ ಕ್ರೈಂ ಪ್ರಕರಣಗಳ ತನಿಖೆಗಾಗಿಯೇ ಪ್ರತ್ಯೇಕ ವಿಭಾಗವಿದ್ದು, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಏನಾದರೂ ವಂಚನೆಯಾದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕೆಂದು ಸಲಹೆ ನೀಡಿದರು. ಕಾರ್ಯ ಕ್ರಮದಲ್ಲಿ ವಿಜಯ ವಿಠಲ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ವಿದ್ಯಾಶಾಲೆಯ ಪ್ರಾಚಾರ್ಯರಾದ ಎಸ್.ಎ.ವೀಣಾ, ವಿವಿಧ ವಿಭಾಗದ ಮುಖ್ಯಸ್ಥರು, ಬೋಧಕ ವರ್ಗ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

### ಎರಡು ತಿಂಗಳಲ್ಲಿ ಜಿಲ್ಲಾದ್ಯಂತ ಕಳವಾಗಿದ್ದ 100 ಮೊಬೈಲ್ ಪತ್ತೆ



ಮೈಸೂರು, ಜು.6(ಆರ್‌ಕೆ)–ಮೈಸೂರು ಜಿಲ್ಲೆಯಾದ್ಯಂತ ವಿವಿಧ ಠಾಣಾ ವ್ಯಾಪ್ತಿಯಲ್ಲಿ ಕಳವಾಗಿದ್ದ 18 ಲಕ್ಷ ರೂ. ಮೌಲ್ಯದ 100 ಮೊಬೈಲ್ ಫೋನ್‌ಗಳನ್ನು ಜಿಲ್ಲಾ ಸೆನ್ ಠಾಣೆ ಪೊಲೀಸರು ಪತ್ತೆ ಮಾಡಿದ್ದಾರೆ.

ಪೊಲೀಸ್ ಇಲಾಖೆಯಲ್ಲಿ ಹೊಸದಾಗಿ ಜಾರಿಗೆ ತಂದಿರುವ ಸಿಇಐಆರ್ ಪೋರ್ಟಲ್ ಮೂಲಕ ಮೊಬೈಲ್‌ಗಳನ್ನು ಪತ್ತೆ ಮಾಡಲಾಗಿದ್ದು, ಆಯಾ ಠಾಣೆಗಳಲ್ಲಿ ವಾರಸುದಾರರಿಗೆ ಮೊಬೈಲ್‌ಗಳನ್ನು ಹಿಂದಿರುಗಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ತಿಳಿಸಿದ್ದಾರೆ. ಕಳೆದ 2 ತಿಂಗಳಿಂದೀಚೆಗೆ ಮಾತನಾಡುತ್ತಿದ್ದಾಗ ಕಿತ್ತುಕೊಂಡು ಹೋಗಿದ್ದ, ಮರೆತು ಬಿಟ್ಟು ಹೋಗಿದ್ದ ಹಾಗೂ ಕಳವು ಮಾಡಿದ್ದ 100 ಆಂಡ್ರಾಯ್ಡ್ ಮೊಬೈಲ್ ಫೋನ್‌ಗಳನ್ನು ಜಿಲ್ಲಾ ಸೆನ್ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್ ನೇತೃತ್ವದ ತನಿಖಾ ತಂಡವು ತಂತ್ರಜ್ಞಾನ ಬಳಸಿ ಪತ್ತೆ ಮಾಡಿ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಅಗತ್ಯ ದಾಖಲೆ ಪರಿಶೀಲಿಸಿ ವಾರಸುದಾರರಿಗೆ ಆಯಾ ಪೊಲೀಸ್ ಠಾಣೆಗಳಲ್ಲಿ ವಾಪಸ್ ನೀಡಿದ್ದಾರೆ ಎಂದರು.

# ಕೆಆರ್‌ಎಸ್‌ನಿಂದ ಸದ್ಯಕ್ಕೆ ಕೃಷಿಗೆ ನೀರಿಲ್ಲ

## ಸಂಸದೆ ಸುಮಲತಾಗೆ ಅಧಿಕಾರಿಗಳ ವಿವರಣೆ



ಶ್ರೀರಂಗಪಟ್ಟಣ, ಜು.6– ಕೆಆರ್‌ಎಸ್ ಜಲಾಶಯದಲ್ಲಿ ಸದ್ಯ 10 ಟಿಎಂಸಿ ಅಡಿಗಳಷ್ಟು (78 ಅಡಿ) ಮಾತ್ರ ನೀರಿನ ಸಂಗ್ರಹ ಇದ್ದು, ಈ ಪರಿಸ್ಥಿತಿಯಲ್ಲಿ ಕೃಷಿ ಚಟುವಟಿಕೆಗೆ ನೀರು ಕೊಡಲು ಸಾಧ್ಯವಿಲ್ಲ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹೇಳಿದರು.

ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆಗೆ ಗುರುವಾರ ಭೇಟಿ ನೀಡಿದ ಸಂಸದೆ ಸುಮಲತಾ ಅಂಬರೀಶ್ ಅವರಿಗೆ ಅಧಿಕಾರಿಗಳು ವಿವರಣೆ ನೀಡಿದರು. ಮಳೆ ಬಾರದಿದ್ದರೆ ಕುಡಿಯುವ ಉದ್ದೇಶಕ್ಕೆ ನೀರನ್ನು ಕಾಯ್ದಿರಿಸಬೇಕಾಗುತ್ತದೆ. ಈಗ ಲಭ್ಯ ಇರುವ ನೀರನ್ನು ಆ.15ರವರೆಗೆ ಬೆಂಗಳೂರು, ಮೈಸೂರು, ಮಂಡ್ಯ ನಗರಗಳಿಗೆ ಕುಡಿಯಲು ಪೂರೈಸಬಹುದು. ಕಾವೇರಿ ಕಣಿವೆಯಲ್ಲಿ ಮಳೆ ಆರಂಭವಾಗಿದ್ದು, ಜಲಾಶಯಕ್ಕೆ ನೀರು ಹರಿದು ಬರುವ ಸಾಧ್ಯತೆ ಇದೆ. ಜಲಾಶಯಕ್ಕೆ ಎರಡು ದಿನಗಳಿಂದ ತುಸು ನೀರು ಹರಿದು ಬರುತ್ತಿದೆ ಎಂದರು.

ಗುರುವಾರ ಒಳ ಹರಿವು 1,400 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಕಳೆದ ವರ್ಷ ಇದೇ ದಿನ ಜಲಾಶಯಕ್ಕೆ 29,468 ಕ್ಯೂಸೆಕ್ ನೀರು ಹರಿದು ಬರುತ್ತಿತ್ತು ಎಂದು ನಿಗಮದ ಕಾರ್ಯಪಾಲಕ ಎಂಜಿನಿಯರ್ ರಾಮಮೂರ್ತಿ ತಿಳಿಸಿದರು.

ತಮಿಳುನಾಡಿಗೆ ಜುಲೈ ತಿಂಗಳಲ್ಲಿ 33 ಟಿಎಂಸಿ ನೀರು ಕೊಡಬೇಕು. ಆದರೆ ಜಲಾಶಯದಲ್ಲಿ ನೀರಿನ ಕೊರತೆ ಇರುವುದರಿಂದ ಸದ್ಯಕ್ಕೆ ನೀರು ಕೊಡುವುದು ಕಷ್ಟಸಾಧ್ಯ. ಜೂನ್ ತಿಂಗಳ ಬಾಕಿ 9.91 ಟಿಎಂಸಿ ನೀರು ಕೊಡಲು ಆಗಿಲ್ಲ. ನೀರು ಬಿಡಬೇಕು ಎಂಬ ತಮಿಳುನಾಡಿನ ಬೇಡಿಕೆಗೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಉತ್ತರ ಹುಡುಕಬೇಕು ಎಂದು ಸುಮಲತಾ ಅವರ ಪ್ರಶ್ನೆಗೆ ಅಧಿಕಾರಿಗಳು ಪ್ರತಿಕ್ರಿಯಿಸಿದರು.

ಜಲಾಶಯದ ತಗ್ಗಿನಲ್ಲಿರುವ ಕಾವೇರಿ ನದಿ ಸೇತುವೆ ಮೇಲೆ ಸಂಚರಿಸುವ ವಾಹನಗಳಿಂದ ಇನ್ನೂ ಏಕೆ ಶುಲ್ಕ ವಸೂಲಿ ಮಾಡಲಾಗುತ್ತಿದೆ ಎಂದು ಸುಮಲತಾ ಕೇಳಿದರು. ಸೇತುವೆ ಮೇಲೆ ಸಂಚರಿಸುವ ವಾಹನಗಳಿಂದ ಒಟ್ಟು 18 ಕೋಟಿ ಶುಲ್ಕ ಸಂಗ್ರಹಿಸಬೇಕು. ಸದ್ಯ 16 ಕೋಟಿ ಶುಲ್ಕ ಸಂಗ್ರಹವಾಗಿದೆ ಎಂದು ರಾಮಮೂರ್ತಿ ತಿಳಿಸಿದರು.

ವಿಶ್ವೇಶ್ವರಯ್ಯ ನಾಲೆ ಆಧುನೀಕರಣ ಕಾಮಗಾರಿಯ ಕಾರಣಕ್ಕೆ ಮುಂಗಾರು ಹಂಗಾಮಿನಲ್ಲಿ ಈ ನಾಲೆಗೆ ನೀರು ಹರಿಸುವುದಿಲ್ಲ ಎಂಬ ಸುದ್ದಿಯ ಬಗ್ಗೆ ಕೇಳಿದ ಪ್ರಶ್ನೆಗೆ, ಅದು ಐಸಿಸಿ ಸಭೆಯಲ್ಲಿ ತೀರ್ಮಾನ ಆಗಲಿದೆ ಎಂದು ಅಧಿಕಾರಿಗಳು ಹೇಳಿದರು.

ನಂತರ ಸುದ್ದಿಗಾರರ ಜೊತೆ ಮಾತನಾಡಿದ ಸುಮಲತಾ, ಈ ಬಾರಿ ನೀರಿನ ಅಭಾವ ಆಗಬಹುದು. ಅದಕ್ಕೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಅಧಿಕಾರಿಗಳ ಜೊತೆ ಚರ್ಚಿಸಿದ್ದೇನೆ. ಕಳೆದ ನಾಲ್ಕು ವರ್ಷ ಉತ್ತಮ ಮಳೆಯಾಗಿದ್ದರಿಂದ ನೀರಿನ ಅಭಾವ ಇರಲಿಲ್ಲ ಎಂದರು.

ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಿಶೋರ್, ಸಹಾಯಕ ಎಂಜಿನಿಯರ್ ಸುರೇಶ್‌ಬಾಬು, ಮುಖಂಡರಾದ ದರ್ಶನ್ ಲಿಂಗರಾಜು, ಶಶಿಕುಮಾರ್ ಇತರರು ಇದ್ದರು.

# ಮನ್‌ಮುಲ್ ಅಧ್ಯಕ್ಷ ಸ್ಥಾನದ ಚುನಾವಣೆ ಮುಂದೂಡಿಕೆ

- ಜೆಡಿಎಸ್‌ನಿಂದ ಮೂವರು, ಕಾಂಗ್ರೆಸ್‌ನಿಂದ ಓರ್ವ ನಾಮಪತ್ರ ಸಲ್ಲಿಕೆ
- ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸಿದ ಸಹಕಾರಿ ನಿಬಂಧಕರು




ಮಂಡ್ಯ, ಜು.6– ಭಾರೀ ಕುತೂಹಲ ಮೂಡಿಸಿದ್ದ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನದ ಚುನಾವಣೆ ಭಾರೀ ಹೈಡ್ರಾಮದೊಂದಿಗೆ ಕೋರಂ ಅಭಾವದಿಂದ ಮುಂದೂಡಿಕೆಯಾಗಿದ್ದು, ಇನ್ನೊಂದು ವಾರದಲ್ಲಿ ಒಕ್ಕೂಟದ ಅಧ್ಯಕ್ಷಗಾದಿಗೆ ಚುನಾವಣೆ ನಡೆಯಲಿದೆ ಎಂದು ಚುನಾವಣಾಧಿಕಾರಿ ಸ್ಪಷ್ಟಪಡಿಸಿದ್ದಾರೆ.

ಜಿಲ್ಲೆಯ ಉಪಚುನಾವಣಾಧಿಕಾರಿಯಾದ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಅಧ್ಯಕ್ಷತೆಯಲ್ಲಿ ಗುರುವಾರ ಚುನಾವಣೆ ನಿಗದಿಯಾಗಿತ್ತು. ಈ ನಿಟ್ಟಿನಲ್ಲಿ ಕಳೆದ ಕೆಲ ದಿನಗಳ ಹಿಂದೆಯೇ 12 ಚುನಾಯಿತ ನಿರ್ದೇಶಕರು ಸೇರಿದಂತೆ ಓರ್ವ ನಾಮ ನಿರ್ದೇಶಿತ ನಿರ್ದೇಶಕ ಹಾಗೂ ಮತದಾನದ ಹಕ್ಕು ಹೊಂದಿದ್ದ ನಾಲ್ವರು ಸರ್ಕಾರಿ ಅಧಿಕಾರಿಗಳು ಸೇರಿ ಒಟ್ಟು 17 ಮಂದಿಗೆ ಚುನಾವಣಾಧಿಕಾರಿಗಳು ಜು.6ರಂದು ನಡೆಯುವ ಮತದಾನದಲ್ಲಿ ಪಾಲ್ಗೊಳ್ಳುವಂತೆ ಅಂಚೆ ಮೂಲಕ ನೋಟಿಸ್ ಜಾರಿ ಮಾಡಿದ್ದರು.

ಅದರಂತೆ ಬೆಳಗ್ಗೆ 9ರಿಂದ 11 ಗಂಟೆವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ಮಾಡಿಕೊಡಲಾಗಿತ್ತು. ಜೆಡಿಎಸ್ ಬೆಂಬಲಿತ ನಿರ್ದೇಶಕರಾದ ಹಾಲಿ ಉಪಾಧ್ಯಕ್ಷ ರಘುನಂದನ್, ಕೆ.ಆರ್.ಪೇಟೆ ಶಾಸಕ ಹೆಚ್.ಟಿ.ಮಂಜು ಹಾಗೂ ನೆಲ್ಲಿಗೆರೆ ಬಾಲು ನಾಮಪತ್ರ ಸಲ್ಲಿಕೆ ಮಾಡಿದರೆ, ಇತ್ತ ಕಾಂಗ್ರೆಸ್‌ನಿಂದ ಬೋರೇಗೌಡ ಉಮೇದುವಾರಿಕೆ ಸಲ್ಲಿಸಿದ್ದರು.

ನಾಮಪತ್ರ ಸಲ್ಲಿಕೆ ಬಳಿಕ ಮಧ್ಯಾಹ್ನ 1 ಗಂಟೆಗೆ ಮತದಾನ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಆದರೆ ಕೆ.ಆರ್. ಪೇಟೆಯ ಡಾಲು ರವಿ ಹೊರತುಪಡಿಸಿ ಉಳಿದ ನಿರ್ದೇಶಕರು ಮತದಾನ ಮಾಡಲು ಬಾರದ ಕಾರಣ ಜೊತೆಗೆ ಕರ್ನಾಟಕ ಸಹಕಾರ ನಿಯಮಾವಳಿ ಪ್ರಕಾರ ಒಂದು ಗಂಟೆವರೆಗೂ ಮತದಾನ ಪ್ರಕ್ರಿಯೆಗೆ ಅವಕಾಶ ನೀಡಲಾಗಿತ್ತು. ಆದರೂ ಯಾವ ನಿರ್ದೇಶಕರು ಬಾರದ ಹಿನ್ನೆಲೆಯಲ್ಲಿ ಚುನಾವಣೆ ಮುಂದೂಡಲಾಯಿತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಚುನಾವಣಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಮತದಾನ ಪ್ರಕ್ರಿಯೆ ವೇಳೆ ಕೇವಲ ಒಬ್ಬ ನಿರ್ದೇಶಕ (ಡಾಲು ರವಿ) ಭಾಗವಹಿಸಿದ್ದರಿಂದ ಅವರಿಂದ ಹಾಜರಾತಿ ಪ್ರತಿಗೆ ಸಹಿ ಹಾಕಿಸಿಕೊಂಡು ಚುನಾವಣೆ ಮುಂದೂಡಲಾಗಿದೆ ಎಂದು ತಿಳಿಸಿದರು. ಮತದಾನ ಪ್ರಾರಂಭಕ್ಕೂ ಅರ್ಧ ಗಂಟೆಗೂ ಮುನ್ನ ಮಂಡ್ಯ ತಾಲೂಕಿನ ಸಹಕಾರ ಇಲಾಖೆ ಉಪನೋಂದಣಾಧಿಕಾರಿ ಕಚೇರಿ ಸಿಬ್ಬಂದಿ ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸಿರುವ ಬಗ್ಗೆ ಲಿಖಿತ ದಾಖಲಾತಿಯನ್ನು ಚುನಾವಣಾಧಿಕಾರಿಗೆ ತಂದು ತಲುಪಿಸಿದರು. ಅದರಂತೆ ಇಬ್ಬರು ನಿರ್ದೇಶಕರನ್ನು ಅನರ್ಹಗೊಳಿಸಿದ್ದು, ಈ ಇಬ್ಬರು ನಿರ್ದೇಶಕರು ಸಹಕಾರ ಹಾಗೂ ಹಾಲು ಒಕ್ಕೂಟದ ಯಾವುದೇ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸದಂತೆ ನಿಷೇಧಗೊಳಿಸಿ, ಆದೇಶಿದ್ದಾರೆ. ಆ ನಿಟ್ಟಿನಲ್ಲಿ ಇಬ್ಬರು ನಿರ್ದೇಶಕರಾದ ಬಿ.ಆರ್.ರಾಮಚಂದ್ರ ಹಾಗೂ ವಿಶ್ವನಾಥ್‌ರನ್ನು ಅನರ್ಹಗೊಳಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಇಬ್ಬರು ಅನರ್ಹರಾದ ಬಳಿಕ ನಮಗೆ ಕೋರಂ 8 ಮಂದಿ ನಿರ್ದೇಶಕರ ಅವಶ್ಯಕತೆ ಇತ್ತು. ಆದರೆ ಕೇವಲ ಒಬ್ಬರು ಮಾತ್ರ ಹಾಜರಾಗಿದ್ದರಿಂದ ಅನಿವಾರ್ಯವಾಗಿ ಚುನಾವಣೆ ಮುಂದೂಡಬೇಕಾಯಿತು. ನಿಯಮದಂತೆ ಒಂದು ವಾರದಲ್ಲಿ ಚುನಾವಣಾ ಸಭೆ ನಡೆಸುತ್ತೇವೆ. ನಾಮಪತ್ರ ಸಲ್ಲಿಕೆಯಾಗಿದ್ದು, ಅಲ್ಲಿಂದ ಚುನಾವಣೆಯನ್ನು ನಾವು ನಿಯಮದ ಪ್ರಕಾರ ಮುಂದುವರೆಸುತ್ತೇವೆ ಎಂದು ಹೇಳಿದರು.

ಈಗಾಗಲೇ ಬಿ.ಆರ್.ರಾಮಚಂದ್ರ ಮತ್ತು ವಿಶ್ವನಾಥ್‌ರನ್ನು ಅನರ್ಹಗೊಳಿಸಿದ್ದು, ಸಹಕಾರ ನಿಯಮವನ್ನು ಪಾಲಿಸದೇ ಸಹಕಾರ ಸಂಘಕ್ಕೆ ನಿವೇಶನವೊಂದನ್ನು ಅನುಮತಿ ಇಲ್ಲದೇ ಖರೀದಿ ಮಾಡಿದ್ದಾರೆ. ಮತ್ತೊರ್ವರು ಸಹಕಾರ ಇಲಾಖೆಯ ಅನುಮತಿ ಇಲ್ಲದೇ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂಬ ಆರೋಪದಡಿ ರಾಮಚಂದ್ರ ಹಾಗೂ ವಿಶ್ವನಾಥ್‌ರನ್ನು ಅನರ್ಹಗೊಳಿಸಿದ್ದಾರೆ ಎಂದು ತಿಳಿಸಿದರು.

ಮತದಾನ ಮಾಡಲು ಆಗಮಿಸಿದ್ದ ಮನ್‌ಮುಲ್ ನಿರ್ದೇಶಕ ಡಾಲುರವಿ ಮಾತನಾಡಿ, ನಾಮಪತ್ರ ಸಲ್ಲಿಕೆ ಬಳಿಕ ಯಾರೂ ಸಹ ಚುನಾವಣೆಯಲ್ಲಿ ಪಾಲ್ಗೊಳ್ಳಲಿಲ್ಲ. ಚುನಾವಣೆ ಸಮಯ ಮುಗಿದ ಹಿನ್ನೆಲೆಯಲ್ಲಿ ನಾನು ವಾಪಸ್ಸಾಗುತ್ತಿದ್ದು, ನಾನು ಸ್ವತಂತ್ರ್ಯವಾಗಿ ಮನ್‌ಮುಲ್ ಚುನಾವಣೆಯಲ್ಲಿ ಗೆದ್ದಿದ್ದೇನೆ. ಮನ್‌ಮುಲ್ ವಿಚಾರದಲ್ಲಿ ನಾನು ಸ್ವತಂತ್ರ್ಯವಿದ್ದು, ಹೊರಗೆ ಮಾತ್ರ ನಾನು ಜೆಡಿಎಸ್ ಮುಖಂಡನಾಗಿದ್ದೇನೆ. ಜೆಡಿಎಸ್‌ನಲ್ಲಿದ್ದರೂ ಕಾಂಗ್ರೆಸ್ ಅಭ್ಯರ್ಥಿ ಪರ ಮತದಾನ ಮಾಡಲು ಬಂದಿದ್ದೆ. ಚುನಾವಣೆ ನಡೆಯದ ಹಿನ್ನೆಲೆಯಲ್ಲಿ ವಾಪಸ್ಸಾಗುತ್ತಿರುವುದಾಗಿ ಸ್ಪಷ್ಟಪಡಿಸಿದರು.

# ಹೆಚ್.ಡಿ.ಕುಮಾರಸ್ವಾಮಿ ಆರೋಪಕ್ಕೆ ತಲೆಕೆಡಿಸಿಕೊಳ್ಳಲ್ಲ



ಮಂಡ್ಯ, ಜು.6– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ನನ್ನ ಬಗ್ಗೆ ಏನೇ ಆರೋಪ ಮಾಡಿದರೂ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಅವರಿಗೆ ದೊಡ್ಡ ನಮಸ್ಕಾರ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕೈ ಮುಗಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್‌ನವರು ಸಾರಿಗೆ ಬಸ್ ಚಾಲಕನ ಆತ್ಮಹತ್ಯೆ ಯತ್ನ ವಿಚಾರದಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಅವರಿಗೆ ಆ ಚಾಲಕ ಗುಣಮುಖ ಆಗುವುದು ಬೇಕಿಲ್ಲ. ಆ ವಿಚಾರದಲ್ಲಿ ರಾಜಕೀಯ ಮಾಡಿ ಗೊಂದಲ ಮಾಡುವುದು ಇವರ ಉದ್ದೇಶವಾಗಿದೆ ಎಂದರು. ರಾತ್ರಿ ಏನಾಗಿದೆ ಎಂದು ಗೊತ್ತಿದೆ. ವಿಷ ಸೇವಿಸಿದ್ದ ಚಾಲಕನನ್ನು ಮೈಸೂರು ಆಸ್ಪತ್ರೆಗೆ ಕರೆದೊಯ್ಯುವುದನ್ನು ತಡೆಯಲು ಪ್ರಯತ್ನಿಸಿದ್ದಾರೆ. ಕುಮಾರಸ್ವಾಮಿ ಅವರಿಗೆ ಇನ್ನೊಬ್ಬರ ಬಗ್ಗೆ ಟೀಕೆ ಮಾಡುವುದೇ ಕೆಲಸ. ಆ ಚಾಲಕ ಗುಣಮುಖವಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಅವರ ಕುಟುಂಬದ ಜೊತೆ ಈಗಾಗಲೇ ಮಾತನಾಡಿದ್ದೇನೆ. ಹೆಚ್ಚಿನ ಚಿಕಿತ್ಸೆ ಕೊಡಿಸಲು ಸೂಚನೆ ನೀಡಿದ್ದೇನೆ ಎಂದರು.

ಚಾಲಕನ ವರ್ಗಾವಣೆ ರದ್ದು ಮಾಡುವಂತೆ ಈಗಾಗಲೇ ಸೂಚನೆ ನೀಡಲಾಗಿದೆ. ಅವರ ಕುಟುಂಬದ ಬೇಡಿಕೆ ಈಡೇರಿಸುತ್ತೇವೆ. ಕುಮಾರಸ್ವಾಮಿಗೆ ರಾಜಕಾರಣಬೇಕು. ಅದಕ್ಕೋಸ್ಕರ ಆಸ್ಪತ್ರೆಗೆ ಹೋಗಿ ಚಾಲಕನ ಪತ್ನಿ ಜೊತೆ ಕಂಪ್ಲೇಂಟ್ ಕೊಡು, ಅವರ ಹೆಸರು ಸೇರಿಸು ಅಂತೆಲ್ಲ ಹೇಳಿದ್ದಾರೆ. ಇದರಲ್ಲಿ ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ವರ್ಗಾವಣೆ ಸಹಜ ಪ್ರಕ್ರಿಯೆಯಾಗಿದ್ದು, ಸರ್ಕಾರ ಬದಲಾದಾಗ ಎಲ್ಲರ ಕಾಲದಲ್ಲೂ ವರ್ಗಾವಣೆ ಆಗಿರುತ್ತೆ. ನಾನು ಆ ಚಾಲಕನ ವರ್ಗಾವಣೆಗೆ ಲೆಟರ್ ಕೊಟ್ಟಿಲ್ಲ. ವರ್ಗಾವಣೆ ಮಾಡಿ ಎಂದು ಹೇಳಲೂ ಇಲ್ಲ. ಆದರೆ ವರ್ಗಾವಣೆ ಆಗಿದೆ. ಆ ಚಾಲಕನ ಭಾವ ನನಗೆ ಫೋನ್ ಮಾಡಿದ್ದರು. ಹಾಗಾಗಿ ವರ್ಗಾವಣೆ ತಡೆ ಹಿಡಿಯುವಂತೆ ನಾನೇ ಹೇಳಿದ್ದೆ. ಆದರೆ ವರ್ಗಾವಣೆ ರದ್ದುಪಡಿಸಬೇಕೆಂದು ಚಾಲಕ ಈ ರೀತಿ ಮಾಡಿಕೊಂಡಿದ್ದಾರೆ. ಇದಕ್ಕೂ ಸರ್ಕಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರು.

ಮಂತ್ರಿ ಮಂಡಲದಿಂದ ಚಲುವರಾಯಸ್ವಾಮಿ ವಜಾ ಮಾಡುವಂತೆ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಪಾಪ ಕುಮಾರಸ್ವಾಮಿ ಅವರಿಗೆ ಮಂಡ್ಯ ನಿದ್ದೆಗೆಡಿಸಿದೆ. ಅವರು ನನ್ನ ಮೇಲಾದರೂ ಟಾರ್ಗೆಟ್ ಮಾಡಲಿ ಅಥವಾ ಮಂಡ್ಯವನ್ನೇ ಟಾರ್ಗೆಟ್ ಮಾಡಲಿ. ಒಟ್ಟಿನಲ್ಲಿ ಕುಮಾರಸ್ವಾಮಿ ಅವರಿಗೆ ಒಳ್ಳೆಯದಾಗಲಿ ಎಂದರು.



ಕೆ.ಆರ್.ಪೇಟೆ ತಾಲೂಕು ಆಡಳಿತದಿಂದ ಬಾಬು ಜಗಜೀವನ್‌ರಾಂ ಅವರ 37ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು. ಈ ವೇಳೆ ತಾಲೂಕು ಬಾಬು ಜಗಜೀವನರಾಂ ಸಂಘಗಳ ಒಕ್ಕೂಟದ ಅಧ್ಯಕ್ಷ ಪುಟ್ಟರಾಜು, ತಹಸೀಲ್ದಾರ್ ನಿಸರ್ಗಪ್ರಿಯ, ಉಪ ತಹಸೀಲ್ದಾರ್ ಲಕ್ಷ್ಮೀಕಾಂತ್, ಶಿರಸ್ತೇದಾರ್ ರವಿ, ರಾಜಸ್ವ ನಿರೀಕ್ಷಕ ಹರೀಶ್, ಚಂದ್ರಕಲಾ ಸೇರಿದಂತೆ ಇತರರಿದ್ದರು.

## ಚಾಲಕ ಜಗದೀಶ್ ಆತ್ಮಹತ್ಯೆಗೆ ಯತ್ನ ಪ್ರಕರಣ

# ತನಿಖೆಗೆ ಆಗ್ರಹಿಸಿ ಜೆಡಿಎಸ್ ಪ್ರತಿಭಟನೆ



ನಾಗಮಂಗಲ, ಜು.6– ಕೆಎಸ್‌ಆರ್‌ಟಿಸಿ ನೌಕರ ಜಗದೀಶ್ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಈಗ ರಾಜಕೀಯ ತಿರುವು ಪಡೆದುಕೊಂಡಿದೆ. ನೌಕರನ ವರ್ಗಾವಣೆ ಹಿಂದೆ ಪ್ರಭಾವಿಗಳ ಕೈವಾಡವಿದ್ದು, ತಪ್ಪಿತಸ್ಥರ ವಿರುದ್ಧ ತನಿಖೆ ನಡೆಸಿ, ಕ್ರಮಕ್ಕೆ ಕೈಗೊಳ್ಳುವಂತೆ ಆಗ್ರಹಿಸಿ ಜೆಡಿಎಸ್ ಕಾರ್ಯಕರ್ತರು ಪಟ್ಟಣದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಕೆಎಸ್‌ಆರ್‌ಟಿಸಿ ನಾಗಮಂಗಲ ಘಟಕ ಆವರಣದಲ್ಲಿ ಬಸ್‌ಗಳನ್ನು ತಡೆದು ಪ್ರತಿಭಟಿಸಿದರಲ್ಲದೇ ನಿಲ್ದಾಣದ ಆವರಣದಲ್ಲಿ ಟೈರ್‌ಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಚಾಲಕ ಹಾಗೂ ನಿರ್ವಾಹಕನ ವರ್ಗಾವಣೆಗೆ ಸಚಿವ ಚಲುವರಾಯಸ್ವಾಮಿ ಅವರು ಅಧಿಕಾರಿಗಳ ಮೇಲೆ ಒತ್ತಡ ಹಾಕಿದ್ದಾರೆ. ರಾಜಕೀಯ ದುರುದ್ದೇಶದಿಂದ, ಆತನ ವರ್ಗಾವಣೆ ಮಾಡಲಾಗಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೌಕರ ಜಗದೀಶ್ ಮಹಿಳೆಯೊಬ್ಬರ ಜೊತೆ ಅಸಭ್ಯ ವರ್ತನೆ ನಡೆಸಿದ್ದರು ಎನ್ನಲಾಗುತ್ತಿದೆ. ಆದರೆ ಇಂತಹ ಪ್ರಕರಣ ನಡೆದಿಲ್ಲ ಎಂದು ಪ್ರತಿಭಟನಕಾರರು ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ ಹಾಗೂ ಕೆಎಸ್‌ಆರ್‌ಟಿಸಿ ಜಿಲ್ಲಾ ಅಧಿಕಾರಿ ನಾಗರಾಜು ಮಾತುಕತೆ ನಡೆಸಿದರು.

ಕೆಎಸ್‌ಆರ್‌ಟಿಸಿ ಅಧಿಕಾರಿ ನಾಗರಾಜ್ ಮಾತನಾಡಿ, ಆತ್ಮಹತ್ಯೆ ಯತ್ನಿಸಿದ ಜಗದೀಶ್ ವರ್ಗಾವಣೆ ಹಿಂಪಡೆಯಲಾಗಿದೆ. ಅವರ ವೈದ್ಯಕೀಯ ವೆಚ್ಚವನ್ನು ಇಲಾಖೆಯೇ ಭರಿಸಲಿದೆ. ಅವರ ಮೇಲೆ ಯಾವುದೇ ರೀತಿಯ ಮಹಿಳೆ ದೂರಿನ ಆಪಾದನೆಗಳಿಲ್ಲ ಎಂದು ಸ್ಪಷ್ಟಪಡಿಸಿದರು. ಜಗದೀಶ್ ಆತ್ಮಹತ್ಯೆ ಯತ್ನ ವಿಚಾರವಾಗಿ ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಇಲಾಖೆಯ ಅಧಿಕಾರಿ ಮಂಜುನಾಥ್ ಕುರಿತು ತನಿಖೆ ಮಾಡಲಾಗುವುದು ಎಂದರು.

# ಕೋರ್ಟ್ ಆದೇಶ ಬಂದ ಕೂಡಲೇ ಪ್ರಾಥಮಿಕ ಶಾಲೆಗೆ 13 ಸಾವಿರ ಪದವೀಧರ ಶಿಕ್ಷಕರ ನೇಮಕಾತಿ

- ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧುಬಂಗಾರಪ್ಪ ಭರವಸೆ
- ಸಣ್ಣ ಕಾನೂನಿನ ತೊಡಕಿನಿಂದ ನೇಮಕಾತಿ ವಿಳಂಬ



ಬೆಂಗಳೂರು, ಜು.6(ಕೆಎಂಶಿ)– ಪ್ರಾಥಮಿಕ ಶಾಲೆಗಳಿಗೆ 13 ಸಾವಿರ ಪದವೀಧರ ಶಿಕ್ಷಕರ ನೇಮಕಾತಿಗೆ ಪ್ರಕ್ರಿಯೆಗಳು ಚುರುಕಾಗಿ ನಡೆಯುತ್ತಿದ್ದು, ನ್ಯಾಯಾಲಯದ ಆದೇಶ ಬರುತ್ತಿದ್ದಂತೆ ನೇಮಕಾತಿ ಪತ್ರಗಳನ್ನು ನೀಡುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧುಬಂಗಾರಪ್ಪ ವಿಧಾನಸಭೆಗೆ ತಿಳಿಸಿದರು.

ಶೂನ್ಯವೇಳೆಯಲ್ಲಿ ವಿಜಯೇಂದ್ರ ಹಾಗೂ ಟೆಂಗಿನಕಾಯಿ ಅವರು ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಪ್ರತಿಭಟನೆ ನಡೆಸುತ್ತಿರುವವರ ಜೊತೆ ತಾವು ಸಮಾಲೋಚನೆ ನಡೆಸಿದ್ದು, ಈ ವಿಚಾರವಾಗಿ ರಾಜ್ಯದ ಅಡ್ವೋಕೇಟ್ ಜನರಲ್ ಜೊತೆ 4 ಸಭೆಗಳನ್ನು ನಡೆಸಲಾಗಿದೆ. ಇಲ್ಲಿ ಸಣ್ಣ ಕಾನೂನಿನ ತೊಡಕಿದೆ. ಅಭ್ಯರ್ಥಿಗಳು ಭಯಪಡುವ ಅಗತ್ಯವಿಲ್ಲ. ಇದೇ ತಿಂಗಳ 17ರಂದು ನ್ಯಾಯಾಲಯದಲ್ಲಿ ವಿಚಾರಣೆಗೆ ಬರಲಿದೆ. ಆ ವೇಳೆ ಸರಿಯಾದ ವಾದ ಮಂಡಿಸಿ ನೇಮಕಾತಿ ಆದೇಶ ನೀಡಲು ಅನುಮತಿ ಪಡೆದುಕೊಳ್ಳುವ ಪ್ರಯತ್ನ ಮಾಡಲಾಗುವುದು ಎಂದರು.

ಕೇವಲ ಒಂದೇ ಒಂದು ಪ್ರಕರಣ ಬಾಕಿ ಇದ್ದು, ಅಭ್ಯರ್ಥಿಯ ಆದಾಯವನ್ನು ತಂದೆಯ ಅಥವಾ ಪತಿಯ ಆದಾಯ ಮೂಲದಿಂದ ಪರಿಗಣಿಸಬೇಕೇ ಎಂಬ ಚರ್ಚೆ ನಡೆಯುತ್ತಿದೆ. ಸರ್ಕಾರ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ. ಈ ನೇಮಕಾತಿ ಪ್ರಕ್ರಿಯೆ ಶೀಘ್ರವಾಗಿ ಪೂರ್ಣಗೊಳ್ಳುವ ಅವಶ್ಯಕತೆ ತಮ್ಮ ಇಲಾಖೆಗೂ ಇದೆ. ಶಿಕ್ಷಕರ ಕೊರತೆ ವ್ಯಾಪಕವಾಗಿದೆ. ನ್ಯಾಯಾಲಯ ನೇಮಕಾತಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸದೆ ಮುಂದುವರೆಸಬೇಕು ಎಂದು ಸೂಚಿಸಿದೆ. ಆದರೆ ನೇಮಕಾತಿ ಆದೇಶ ನೀಡದಂತೆ ಸ್ಪಷ್ಟಪಡಿಸಿದೆ ಎಂದರು.

ರಾಜ್ಯದ 667 ಸರ್ಕಾರಿ ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸಲಾಗುವುದು ಎಂದು ಸುಬ್ಬಾರೆಡ್ಡಿ ಅವರ ಮತ್ತೊಂದು ಪ್ರಸ್ತಾವಕ್ಕೆ ತಿಳಿಸಿದರು. ಕೋವಿಡ್ ಸಂದರ್ಭದಲ್ಲಿ ಪ್ರೌಢಶಾಲೆಯನ್ನು ಪದವಿಪೂರ್ವ ಕಾಲೇಜನ್ನಾಗಿ ಮೇಲ್ದರ್ಜೆಗೇರಿಸಲು ಸಾಧ್ಯವಾಗಿರಲಿಲ್ಲ. ಆದಷ್ಟು ಬೇಗ ಆದ್ಯತೆ ಮೇಲೆ ಪ್ರೌಢಶಾಲೆಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದರು. 361 ಸರ್ಕಾರಿ ಪ್ರೌಢಶಾಲೆಗಳನ್ನು ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯು ನಿರ್ದೇಶನಾಲಯದಿಂದ ಸ್ವೀಕೃತವಾಗಿದೆ. ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 4 ಪ್ರೌಢಶಾಲೆಗಳು ಪದವಿಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಪ್ರಸ್ತಾವನೆಯಲ್ಲಿ ಸೇರಿವೆ ಎಂದರು.


# ಹೇ ಹೋಗ್ರಿ, ನಾನು ಕೇರ್ ಮಾಡಲ್ಲ; ಎಚ್.ಡಿ.ಕುಮಾರಸ್ವಾಮಿ ಮಾತಿಗೆ ಸಿದ್ದರಾಮಯ್ಯ ರೋಷಾವೇಶ!



ಬೆಂಗಳೂರು, ಜು.6– ಹಾಲಿ ಸಿಎಂ ಸಿದ್ದರಾಮಯ್ಯ ಹಾಗೂ ಮಾಜಿ ಸಿಎಂ ಎಚ್‌ಡಿ ಕುಮಾರಸ್ವಾಮಿ ನಡುವಿನ ರೋಷಾವೇಶದ ವಾಕ್ಸಮರಕ್ಕೆ ಗುರುವಾರ ವಿಧಾನಸಭೆ ಸಾಕ್ಷಿಯಾಯಿತು. ನಾಗಮಂಗಲದ ಬಸ್ ಚಾಲಕ ಆತ್ಮಹತ್ಯೆ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವು ಯಾರಿಗೂ ಕೇರ್ ಮಾಡಿಲ್ಲ ಅಂದ್ರೆ ನಾನು ಯಾರಿಗೂ ಕೇರ್ ಮಾಡಲ್ಲ ಅಂತಾ ಉಭಯ ನಾಯಕರು ಪರಸ್ಪರ ವಾಗ್ದಾಳಿ ನಡೆಸಿದರು.

ನಾಗಮಂಗಲದ ಬಸ್ ಚಾಲಕ ಆತ್ಮಹತ್ಯೆ ಯತ್ನ ಪ್ರಕರಣದಲ್ಲಿ ಸಚಿವ ಚಲುವರಾಯಸ್ವಾಮಿ ಅವರ ವಜಾಕ್ಕೆ ಎಚ್.ಡಿ.ಕುಮಾರಸ್ವಾಮಿ ಸದನದಲ್ಲಿ ಪಟ್ಟು ಹಿಡಿದರು. ಈ ವೇಳೆ ಸದನದಲ್ಲಿ ಉತ್ತರ ಕೊಟ್ಟ ಸಚಿವ ಚಲುವರಾಯಸ್ವಾಮಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶೇಕ್ ಹ್ಯಾಂಡ್ ಮಾಡಿದ್ದಕ್ಕೆ ಎಚ್.ಡಿ.ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿದರು. ಬಹಳ ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ ಎಂದು ಶೇಕ್ ಹ್ಯಾಂಡ್ ಬೇರೆ ಎಂದು ವ್ಯಂಗ್ಯವಾಡಿದ ಎಚ್‌ಡಿಕೆ, ಇದಕ್ಕೆಲ್ಲಾ ನಾನು ಕೇರ್ ಮಾಡಲ್ಲ. ಇಂತವನ್ನು ನಾವು ಬಹಳ ನೋಡಿದ್ದೇವೆ. ಈ ರೀತಿಯ ರಾಜಕಾರಣ ಶಾಶ್ವತ ಅಲ್ಲ ಎಂದು ಸಿದ್ದರಾಮಯ್ಯ ಅವರನ್ನು ಕೆಣಕಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ರೀ ಕುಮಾರಸ್ವಾಮಿ ಅವರೇ ನಿಮಗೆ ಹೆದರಿಕೊಳ್ಳುತ್ತೇವಾ ನಾವು, ನೀವು ಕೇರ್ ಮಾಡಲ್ಲ ಅಂದರೆ ನಾವು ಮಾಡಲ್ಲ. ನೀವು ಕೇರ್ ಮಾಡಿದರೆ ನಾವು ಕೇರ್ ಮಾಡ್ತೀವಿ. ಯಾರೂ ಹೆದರಿಕೊಳ್ಳುವವರಿಲ್ಲ ಎಂದು ಕಿಡಿಕಾರಿದರು. ನಾನು ಸುಮ್ಮನೆ ಕುಳಿತುಕೊಂಡಿದ್ದೆ, ಅವರು ಬಂದು ಕೈಕೊಟ್ಟರು. ಅದಕ್ಕೆ ಚೆನ್ನಾಗಿ ಉತ್ತರ ಕೊಟ್ಟೆ ಎಂದು ಕೈಕುಲುಕಿದೆ ಎಂದರೆ ಹೇಗೆ. ನನಗೂ ಇದಕ್ಕೂ ಸಂಬಂಧವೇ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೆಲಸಕ್ಕೆ ಬಾರದನ್ನು ಮಾತನಾಡುತ್ತೀರಲ್ವಾ, ನೀವು ಯಾರನ್ನು ಕಂಡರೆ ಯಾರು ಕೇರ್ ಮಾಡಲ್ಲ ಅಂದಾದರೆ ನಾನು ಅದರ ಅಪ್ಪನಷ್ಟು ಕೇರ್ ಮಾಡಲ್ಲ. ಯಾರಿಗೆ ಹೇಳುತ್ತಿದ್ದೀರಿ ನೀವು ಎಂದು ಸಿದ್ದರಾಮಯ್ಯ ಗರಂ ಆದರು. ಇದಕ್ಕೆ ನಾನೂ ಕೇರ್ ಮಾಡಲ್ಲ ಎಂದು ಎಚ್‌ಡಿಕೆ ಹೇಳಿದರು. ಈ ವೇಳೆ ಹೇ ಹೋಗ್ರಿ ಕೇರ್ ಮಾಡದಿದ್ರೆ ನೀವು ಎಂದು ಏರು ಧ್ವನಿಯಲ್ಲಿಯೇ ಸಿದ್ದರಾಮಯ್ಯ ಗರಂ ಆದರು.

## ತನಿಖೆ ಆಗಬೇಕು ಅಷ್ಟೇ ಎಂದು ಎಚ್‌ಡಿಕೆ ಪಟ್ಟು!



ಇವರು ಕೇರ್ ಮಾಡದಿದ್ದರೆ ಹೆದರಿಕೊಂಡುಬಿಡ್ತೀನಾ ನಾನು, ಇಂತವರನ್ನು ಬಹಳ ಜನ ನೋಡಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದರು. ಇದಕ್ಕೆ ಮತ್ತಷ್ಟು ಗರಂ ಆದ ಎಚ್‌ಡಿ ಕುಮಾರಸ್ವಾಮಿ, ಸೆಕ್ಯುಲರ್ ಎಂದು ಹೇಳಿ 60 ಸ್ಥಾನ ಇದ್ದಾಗ ದೇವೇಗೌಡರ ಕುತ್ತಿಗೆ ಕೊಯ್ದರಲ್ಲ ನೀವು. ಜೆಡಿಎಸ್ ಅನ್ನು ಬಿಜೆಪಿ ಬಿ ಟೀಂ ಅಂದ್ರಲ್ಲ, ಈಶ್ವರಪ್ಪ ಸಣ್ಣ ವಿಷಯಕ್ಕೆ ರಾಜೀನಾಮೆ ತಗೊಂಡ್ರಲ್ಲ. ಈಗ ಯಾಕೆ ರಾಜೀನಾಮೆ ಕೊಡ್ತಿಲ್ಲ. ತನಿಖೆ ಆಗಬೇಕು ಅಷ್ಟೇ ಎಂದು ಸಿದ್ದರಾಮಯ್ಯಗೆ ಎಚ್‌ಡಿಕೆ ತಿರುಗೇಟು ನೀಡಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕೊಟ್ಟ ಉತ್ತರಕ್ಕೆ ತೃಪ್ತಿಯಾಗದ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ಸದನದ ಬಾವಿಗೆ ಇಳಿದು ಧರಣಿ ನಡೆಸಿದರು.

# ಡಿಸ್ನಿಲ್ಯಾಂಡ್ ಮಾದರಿ ಉದ್ಯಾನ ಯೋಜನೆಯಿಂದ ಕೆಆರ್‌ಎಸ್ ಅಣೆಕಟ್ಟೆಗೆ ಅಪಾಯವಿಲ್ಲ



ಬೆಂಗಳೂರು, ಜು.6(ಕೆಎಂಶಿ)– ಡಿಸ್ನಿಲ್ಯಾಂಡ್ ಮಾದರಿ ಉದ್ಯಾನವನ ಯೋಜನೆಯಿಂದ ಕೆಆರ್‌ಎಸ್ ಅಣೆಕಟ್ಟೆಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿಕೆಶಿವಕುಮಾರ್ ವಿಧಾನಪರಿಷತ್ತಿಗೆ ತಿಳಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯರಾದ ಮಧು ಮಾದೇಗೌಡ ಅವರು ಕೆಆರ್‌ಎಸ್ ಅಣೆಕಟ್ಟೆಗೆ ಯಾವುದೇ ರೀತಿ ಹಾನಿ ಆಗದಂತೆ ಡಿಸ್ನಿಲ್ಯಾಂಡ್ ಮಾದರಿ ಉದ್ಯಾನವನ ಮಾಡುವಂತೆ ಕೋರಿದರು. ಇದಕ್ಕೆ ಉತ್ತರಿಸಿದ ಉಪ ಮುಖ್ಯಮಂತ್ರಿ, ಕೆಆರ್‌ಎಸ್‌ನಿಂದ ಸ್ವಲ್ಪ ದೂರದಲ್ಲೇ ಉದ್ಯಾನವನ ನಿರ್ಮಾಣ ಮಾಡಲಾಗುವುದು ಎಂದರು. ಹಿಂದಿನ ಕಾಂಗ್ರೆಸ್ ಸರ್ಕಾರದ ವೇಳೆಯಲ್ಲೇ ಡಿಸ್ನಿಲ್ಯಾಂಡ್ ಮಾದರಿ ಉದ್ಯಾನವನ ಯೋಜನೆ ಬಜೆಟ್‌ನಲ್ಲಿಯೂ ಪ್ರಸ್ತಾಪವಾಗಿತ್ತು. ಆದರೆ ಕಾರಣಾಂತರಗಳಿಂದ ನಿಂತು ಹೋಗಿತ್ತು.

ಬೆಂಗಳೂರು ಮತ್ತು ಮೈಸೂರು ಭಾಗದಲ್ಲಿ ಯಾವುದೇ ಮನರಂಜನಾತ್ಮಕ ಪಾರ್ಕ್‌ಗಳಿಲ್ಲ, ಗುಂಡೂರಾವ್ ಅವರ ಕಾಲದಲ್ಲಿ ಒಳ್ಳೆ ಉದ್ಯಾನವನ ಆಯಿತು. ಸರ್ಕಾರದ 198 ಎಕರೆ ಜಮೀನು ಕೆಆರ್‌ಎಸ್ ಏರಿಯ ಕೆಳಗೆ ಇದೆ. ಪಿಪಿಪಿ ಮಾದರಿಯಲ್ಲಿ ಉದ್ಯಾನವನ ಮಾಡಬಹುದೇ ಎಂಬುದರ ಕುರಿತು ಆಲೋಚನೆ ಮಾಡಲಾಗುವುದು. ಇದು ಮಧು ಮಾದೇಗೌಡ ಅವರ ಕ್ಷೇತ್ರದ ವ್ಯಾಪ್ತಿಯಲ್ಲೇ ಬರುತ್ತದೆ. ಈ ಯೋಜನೆಯಿಂದ ಸ್ಥಳೀಯರಿಗೆ ಉದ್ಯೋಗ ಸೃಷ್ಟಿಯಾಗಬೇಕು ಹಾಗೂ ಜನರಿಗೆ ಒಳ್ಳೆಯದಾಗಬೇಕು ಎಂದು ಹೇಳಿದರು. ಸದಸ್ಯ ಯು.ಬಿ.ವೆಂಕಟೇಶ್ ಅವರು ಬಸವನಗುಡಿಯಲ್ಲಿ ಇರುವ ಸ್ಕೇಟಿಂಗ್ ಟ್ರಾಕ್‌ನಲ್ಲಿ ಖಾಸಗಿಯವರು ಹಣ ಪಡೆದು ವ್ಯವಹಾರ ಮಾಡುತ್ತಿದ್ದಾರೆ. ಬಡ ಮಕ್ಕಳಿಗೆ ಉಪಯೋಗವಾಗುತ್ತಿಲ್ಲ. ಇದನ್ನು ಬಿಬಿಎಂಪಿಯಿಂದ ತೆಗೆದು ಕ್ರೀಡಾ ಇಲಾಖೆಗೆ ನೀಡಬೇಕೆಂದು ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಡಿಸಿಎಂ, ಸುಮಾರು 5.5 ಕೋಟಿ ಖರ್ಚು ಮಾಡಿ ಸ್ಕೇಟಿಂಗ್ ರಿಗ್ ನಿರ್ಮಾಣ ಮಾಡಲಾಗಿದೆ. 1,510 ಚದರ ಮೀ. ಇದೆ. ಯಾವುದೇ ಕಾರಣಕ್ಕೂ ಈ ಟ್ರಾಕ್ ಅನ್ನ ಯಾರಿಗೂ ಗುತ್ತಿಗೆ ನೀಡಿಲ್ಲ. ಬಿಬಿಎಂಪಿಯಿಂದ ಕ್ರೀಡಾ ಇಲಾಖೆಗೆ ಹಸ್ತಾಂತರ ಮಾಡುವ ಕುರಿತು ಯೋಚಿಸಲಾಗುವುದು ಎಂದರು.

ಒಂದನೇ ಪುಟದಿಂದ

# ಅ.15ರಿಂದ 24ರವರೆಗೆ ಮೈಸೂರು ದಸರಾ

ಬಗ್ಗೆ ಚರ್ಚೆ ನಡೆಸಲಾಯಿತು. ಈ ವೇಳೆ ದಸರಾ ಆಚರಣೆ ಕುರಿತಂತೆ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಅಭಿಪ್ರಾಯಗಳನ್ನು ಮಂಡಿಸಿದರು. ಸುಮಾರು ಒಂದು ಗಂಟೆ ಕಾಲ ನಡೆದ ಸಭೆಯಲ್ಲಿ ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಏನೇನು ವಿಚಾರಗಳನ್ನು ಮಂಡಿಸಬೇಕು ಎಂಬ ಬಗ್ಗೆ ಸಮಗ್ರವಾಗಿ ಚರ್ಚಿಸಿದರು.


ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಕೆ.ಎಂ.ಗಾಯತ್ರಿ ಹಾಗೂ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಉಪಸ್ಥಿತರಿದ್ದರು. ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ನವರಾತ್ರಿ ಆರಂಭ ಅಕ್ಟೋಬರ್ 15ರ ಭಾನುವಾರ ಆರಂಭವಾಗಲಿದ್ದು, ಅಕ್ಟೋಬರ್ 23ರ ಸೋಮವಾರ ಆಯುಧ ಪೂಜೆ ಹಾಗೂ ಅಕ್ಟೋಬರ್ 24ರ ಮಂಗಳವಾರದಂದು ವಿಜಯದಶಮಿ ಜಂಬೂ ಸವಾರಿ ಮೆರವಣಿಗೆ ನಡೆಯಲಿದೆ.

# ಬಜೆಟ್ ಮಂಡನೆ

ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚಿನ ಒತ್ತು ನೀಡಬೇಕಾಗುತ್ತದೆ. ನೀರಾವರಿ ಯೋಜನೆಗಳಿಗೂ ಪ್ರಾಮುಖ್ಯತೆ ಕೊಡಲಾಗುತ್ತದೆ ಎಂದು ನಿರೀಕ್ಷಿಸಲಾಗಿದೆ. ಈ ಬಜೆಟ್‌ನಲ್ಲಿ ತವರು ಜಿಲ್ಲೆ ಮೈಸೂರಿಗೆ ಭರಪೂರ ಕೊಡುಗೆ ನೀಡಲಿದ್ದಾರೆಂದು ನಿರೀಕ್ಷಿಸಲಾಗಿದ್ದು, ಪಾರಂಪರಿಕ ಕಟ್ಟಡಗಳ ಪುನಃಶ್ಚೇತನಕ್ಕೆ ಅನುದಾನ, ಕಿದ್ವಾಯಿ ಘಟಕ ನಿರ್ಮಾಣ, ಚಿತ್ರನಗರಿ ಸ್ಥಾಪನೆ, ಪೆರಿಫೆರಲ್ ರಿಂಗ್ ರಸ್ತೆ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಬಜೆಟ್‌ನಲ್ಲಿ ಸಿದ್ದರಾಮಯ್ಯ ಅನುದಾನ ನೀಡುವರು ಎಂದು ಹೇಳಲಾಗಿದೆ.

ಈ ಬಾರಿ ಮಳೆ ಕೈಕೊಟ್ಟಿರುವುದರಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ನೆರವಾಗುವಂತಹ ಯೋಜನೆಗಳನ್ನು ನೀಡಲಿದ್ದಾರೆ. ಕಲ್ಯಾಣ ಕರ್ನಾಟಕ ಪ್ರದೇಶಕ್ಕೂ ಕೂಡ ಹೆಚ್ಚಿನ ಅನುದಾನವನ್ನು ಮುಖ್ಯಮಂತ್ರಿಗಳು ಮೀಸಲಿಡುವರು. ರಾಜಧಾನಿ ಬೆಂಗಳೂರಿಗೆ ವಿಶೇಷ ಆದ್ಯತೆ ನೀಡಲಿರುವ ಸಿದ್ದರಾಮಯ್ಯ, ಬೆಂಗಳೂರಿನ ಸಂಚಾರ ದಟ್ಟಣೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸುರಂಗ ಮಾರ್ಗಗಳ ನಿರ್ಮಾಣಕ್ಕೆ ಒತ್ತು ನೀಡಬಹುದು. ಮಳೆಯಿಂದಾಗಿ ಸಂಕಷ್ಟಕ್ಕೀಡಾಗಲಿರುವ ಪ್ರದೇಶಗಳಲ್ಲಿ ಈ ಸಮಸ್ಯೆ ನಿವಾರಣೆಗಾಗಿ ಹೆಚ್ಚಿನ ಅನುದಾನವನ್ನು ಒದಗಿಸಬಹುದು ಎಂದು ಅಂದಾಜಿಸಲಾಗಿದೆ. ಈ ಮಧ್ಯೆ 7ನೇ ವೇತನ ಆಯೋಗದ ಶಿಫಾರಸ್ಸನ್ನು ಅನುಷ್ಠಾನಗೊಳಿಸಬೇಕೆಂದು ಸರ್ಕಾರಿ ನೌಕರರು ಮುಂದಿಟ್ಟಿರುವ ಬೇಡಿಕೆಗೆ ಈ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಸ್ಪಂದಿಸುವ ನಿರೀಕ್ಷೆಯೂ ಇದೆ.


# ಮಳೆ ಕೊರತೆ ಹೀಗೆ ಮುಂದುವರೆದರೆ ಜು.15ರ ನಂತರ ಸಂಪುಟ ಉಪ ಸಮಿತಿ ಸಭೆ; ಬರಪೀಡಿತ ಪ್ರದೇಶಗಳ ಘೋಷಣೆ



ಬೆಂಗಳೂರು, ಜು.6(ಕೆಎಂಶಿ)– ಮುಂದಿನ ದಿನಗಳಲ್ಲಿ ಮಳೆ ಕೊರತೆ ಮುಂದುವರೆದರೆ ಇದೇ 15ರ ಬಳಿಕ ಸಚಿವ ಸಂಪುಟ ಉಪಸಮಿತಿ ಸಭೆ ನಡೆಸಿ, ಬರಪೀಡಿತ ಪ್ರದೇಶಗಳ ಘೋಷಣೆ ಬಗ್ಗೆ ಪರಿಶೀಲಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ವಿಧಾಸಭೆಯಲ್ಲಿ ಪ್ರಕಟಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಅಲ್ಲಮಪ್ರಭು ಪಾಟೀಲ್, ಬಿ.ಆರ್.ಪಾಟೀಲ್ ಸೇರಿದಂತೆ ಅನೇಕ ಸದಸ್ಯರು, ಮಳೆ ಕೊರತೆ ಬಗ್ಗೆ ಸರ್ಕಾರದ ಗಮನ ಸೆಳೆದಾಗ ಉತ್ತರ ನೀಡಿದ ಕಂದಾಯ ಸಚಿವರು, ಜೂನ್ ತಿಂಗಳಿನಲ್ಲಿ ಮಳೆಯ ಕೊರತೆ ಇತ್ತು. ಕಳೆದ 10 ದಿನಗಳಿಂದ ಮಳೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಉತ್ತರ ಕರ್ನಾಟಕದ ಒಳನಾಡಿನಲ್ಲಿ ಉತ್ತಮ ಮಳೆಯಾಗುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ ಎಂದು ವಿವರಿಸಿದರು.

ಪ್ರಕೃತಿ ವಿಕೋಪ ಪರಿಸ್ಥಿತಿ ಬಗ್ಗೆ ಚರ್ಚಿಸಲು ಕಳೆದ ಮಂಗಳವಾರ ಸಚಿವ ಸಂಪುಟ ಉಪಸಮಿತಿ ಸಭೆ ನಡೆಸಿದೆ. ಎಲ್ಲೆಲ್ಲಿ ಮಳೆ ಕೊರತೆ ಇದೆ ಎಂಬ ಮಾಹಿತಿಯನ್ನು ಪಡೆದುಕೊಂಡಿದ್ದೇವೆ. ಹೋಬಳಿ ಮಟ್ಟದಲ್ಲೂ ಮಳೆಯ ವ್ಯತ್ಯಾಸವಾಗುತ್ತಿದೆ. ಆದರೆ ಸರಾಸರಿ ಮಳೆಯ ಪ್ರಮಾಣ ಸುಧಾರಣೆಯಾಗುತ್ತಿದೆ. ಈ ತಿಂಗಳ 15ರವರೆಗೂ ಪರಿಸ್ಥಿತಿಯನ್ನು ಅವಲೋಕಿಸಿ ನಂತರ ಬರಪೀಡಿತ ಪ್ರದೇಶಗಳ ಘೋಷಣೆ ಬಗ್ಗೆ ನಿರ್ಧರಿಸಲಾಗುವುದು ಎಂದರು. ರಾಜ್ಯದಲ್ಲಿ 193 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಇದೆ. 399 ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆದು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದರು.



ಮೈಮುಲ್ ಸದಸ್ಯರಾಗಿ ನಾಮನಿರ್ದೇಶನಗೊಂಡ ಜಯಪುರ ಹೋಬಳಿ ಗೋಪಾಲಪುರ ಗ್ರಾಮದ ಗುರುಸ್ವಾಮಿ ಮತ್ತು ಕೆಪಿಸಿಸಿ ಸದಸ್ಯ ಕೆ.ಮರೀಗೌಡ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು. ಈ ವೇಳೆ ವಕೀಲ ಗಂಗಾಧರ್, ಸಾಹಿತಿ ಸಿದ್ದನಹುಂಡಿ ಡಾ.ಹರೀಶ್‌ಕುಮಾರ್, ಚಂದನ್, ಬೆಳವಾಡಿ ಸ್ವಾಮಿ, ರವಿ, ಲೋಕೇಶ, ಅವಿನಾಶ್, ಮಂಜು ಇತರರಿದ್ದರು.

# ನಾಳೆ ಚಂಪಕ ರಾಷ್ಟ್ರೀಯ ಕಲಾ ಉತ್ಸವ

ಮೈಸೂರು, ಜು.6(ಎಂಕೆ)– ಮೈಸೂರಿನ ರಾಮಕೃಷ್ಣನಗರದಲ್ಲಿರುವ ಚಂಪಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ವತಿಯಿಂದ ಜು.8ರಂದು 'ಚಂಪಕ ರಾಷ್ಟ್ರೀಯ ಕಲಾ ಉತ್ಸವ' ಹಮ್ಮಿಕೊಳ್ಳಲಾಗಿದೆ. ಅಂದು ಸಂಜೆ 5ರಿಂದ ವಿದುಷಿ ನಾಗಲಕ್ಷ್ಮಿ ನಾಗರಾಜನ್, ಮೈಸೂರು ವಿವಿ ಲಲಿತಾ ಕಲಾ ಕಾಲೇಜಿನ ನಾಟ್ಯ ವಿಭಾಗದ ಮುಖ್ಯಸ್ಥ ಪ್ರೊ.ಕೆ.ಕುಮಾರ್ ಮತ್ತು ಅವರ ಶಿಷ್ಯರು ಹಾಗೂ ಬೆಂಗಳೂರಿನ ಶ್ರೀ ಮಾತೃಕ ಕಲ್ಚರಲ್ ಟ್ರಸ್ಟ್ ಸಂಸ್ಥಾಪಕಿ ವಿದ್ಯಾ ರವಿಶಂಕರ್ ಮತ್ತು ಅವರ ಶಿಷ್ಯವೃಂದದಿಂದ ಭರತ ನಾಟ್ಯ ಪ್ರದರ್ಶನ ವಿರಲಿದೆ. ಮುಖ್ಯ ಅತಿಥಿಗಳಾಗಿ ಸಂಗೀತ ಮತ್ತು ನೃತ್ಯ ವಿಮರ್ಶಕಿ ಡಾ.ರಮಾ ವಿ.ಬೆಣ್ಣೂರ್ ಭಾಗವಹಿಸಲಿದ್ದಾರೆ.

## ಸಾಮಾಜಿಕ ಜಾಲತಾಣದ ಸ್ನೇಹಕ್ಕೆ 11.73 ಲಕ್ಷ ಬೆಲೆ ತೆತ್ತ ಗೃಹಿಣಿ!

ಮೈಸೂರು, ಜು.6–ಸಾಮಾಜಿಕ ಜಾಲ ತಾಣಗಳಾದ ಇನ್‌ಸ್ಟಾಗ್ರಾಂ ಮತ್ತು ಟೆಲಿಗ್ರಾಂ ಆ್ಯಪ್‌ಗಳ ಮೂಲಕ ಸ್ನೇಹ ಬೆಳೆಸಿದ ನಂತರ ಲಾಭದ ಆಮಿಷವೊಡ್ಡಿ ವಂಚಿಸುವ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿದ್ದು, ಗೃಹಿಣಿಯೊಬ್ಬರಿಗೆ 11.73 ಲಕ್ಷ ರೂ. ವಂಚಿಸಲಾಗಿದೆ.

ಲಕ್ಷ್ಮೀಪುರಂ ನಿವಾಸಿ ಎಸ್.ಎಸ್. ಗೀತಾ(35) ಎಂಬುವರಿಗೆ ಟೆಲಿಗ್ರಾಂ ಆ್ಯಪ್ ಮೂಲಕ ಪರಿಚಯವಾದ ವ್ಯಕ್ತಿ ಹಣ ಹೂಡಿಕೆ ಮಾಡಿ ಕೆಲವು ಟಾಸ್ಕ್‌ಗಳನ್ನು ಪೂರೈಸಿದರೆ ಹೆಚ್ಚಿನ ಲಾಭ ಬರುತ್ತದೆ ಎಂದು ನಂಬಿಸಿ 11.73 ಲಕ್ಷ ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

ಮತ್ತೊಂದು ಪ್ರಕರಣದಲ್ಲಿ ವಿಜಯನಗರ 2ನೇ ಹಂತದ ಎಂ.ಡಿ.ದೀಪಕ್(35) ಎಂಬುವರಿಗೆ ಟೆಲಿಗ್ರಾಂ ಆ್ಯಪ್‌ನಲ್ಲಿ ಯುವರಾಜ್ ಸಿಂಗ್ ಎಂಬ ಹೆಸರಿನಲ್ಲಿ ಪರಿಚಯವಾದ ವಂಚಕ ಟಾಸ್ಕ್ ಪೂರೈಸಿದರೆ ಲಾಭ ಬರುತ್ತದೆ ಎಂದು ನಂಬಿಸಿ 2,21,261 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಇವೆರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

## ಪಾಲುದಾರರಿಂದಲೇ 3 ಕೋಟಿ ವಂಚನೆ; ಪ್ರಕರಣ ದಾಖಲು

ಮೈಸೂರು, ಜು.6–ಕಂಪನಿಯ ಪಾಲುದಾರರಾಗಿದ್ದವರೇ ಸಾಫ್ಟ್‌ವೇರ್ ಇಂಜಿನಿಯರ್‌ಗೆ ಸುಮಾರು 3 ಕೋಟಿ ರೂ. ನಷ್ಟ ಉಂಟು ಮಾಡಿರುವ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮೈಸೂರಿನ ವಿವೇಕಾನಂದನಗರ ನಿವಾಸಿ ಪಿ.ಎಸ್.ರಮೇಶ(38) ನಷ್ಟಕ್ಕೊಳಗಾದವರಾಗಿದ್ದು, ವಿಜಯನಗರ 4ನೇ ಹಂತದ ನಿವಾಸಿ ಎಸ್.ಕೆ.ಚಂದ್ರಹಾಸ(40) ಮತ್ತು ನ್ಯೂ ಕಾಂತರಾಜ ಅರಸ್ ರಸ್ತೆ ನಿವಾಸಿ ಎಸ್.ಸುಂದರ್(42) ಆರೋಪಕ್ಕೆ ಗುರಿಯಾಗಿರುವವರು.

**ವಿವರ:** ರಮೇಶ ಅವರು ಆರೋಪಿ ಚಂದ್ರಹಾಸ ಮತ್ತು ಸ್ನೇಹಿತರಾದ ಸೋಮಶೇಖರ್ ಜೊತೆಗೂಡಿ ಡಾಲರ್ ಬರ್ಡ್ ಇನ್ಫರ್ಮೇಷನ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಮಾಹಿತಿ ತಂತ್ರಜ್ಞಾನ ಸೇವೆಗಳನ್ನು ಒದಗಿಸುವ ಕಂಪನಿಯೊಂದನ್ನು 2010ರಲ್ಲಿ ನೋಂದಾಯಿಸಿದ್ದು, ಈ ಕಂಪನಿ 2011ರಿಂದ ಚಾಲನೆಗೊಂಡಿದೆ. 2014ರ ವೇಳೆಗೆ 18 ಉದ್ಯೋಗಿಗಳನ್ನು ಹೊಂದಿದ್ದ ಕಂಪನಿಯನ್ನು ಆರೋಪಿ ಚಂದ್ರಹಾಸ ಅವರು ಖಾಸಗಿ ಲಿಮಿಟೆಡ್ ಕಂಪನಿಯಾಗಿ ಪರಿವರ್ತಿಸಲು ನಿರ್ಧರಿಸಿದಾಗ ರಮೇಶ ಅವರ ಸ್ನೇಹಿತ ಸೋಮಶೇಖರ್ ಈ ಕಂಪನಿಯಿಂದ ನಿರ್ಗಮಿಸಿದ್ದು, ಆ ವೇಳೆ ಮತ್ತೋರ್ವ ಆರೋಪಿ ಸುಂದರ್ ಪಾಲುದಾರರಾಗಿ ಸೇರ್ಪಡೆಯಾದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ರಮೇಶ ಅವರು ನಿರ್ದೇಶಕರಾಗಿದ್ದಾಗ 2018ರವರೆಗೆ ಕಂಪನಿ ಲಾಭದಾಯಕವಾಗಿ ನಡೆಯುತ್ತಿತ್ತು. ಅವರು ರಾಜೀನಾಮೆ ನೀಡಿದ ನಂತರ ವಹಿವಾಟು ತೀವ್ರವಾಗಿ ಕಡಿಮೆಯಾಗಿದೆ. ಆರೋಪಿಗಳಿಬ್ಬರೂ ಡಾಲರ್ ಬರ್ಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಹೊಸ ಕಂಪನಿಯನ್ನು ಸ್ಥಾಪಿಸಿ, ತಮ್ಮ ಕಂಪನಿಯ ವಹಿವಾಟನ್ನು ಹೊಸ ಕಂಪನಿಗೆ ವರ್ಗಾಯಿಸುವ ಮೂಲಕ ತಮ್ಮ ಕಂಪನಿಗೆ ಸುಮಾರು 3 ಕೋಟಿ ರೂ. ನಷ್ಟವನ್ನುಂಟು ಮಾಡಿದ್ದಾರೆ. ಅಲ್ಲದೇ ಚಂದ್ರಹಾಸ ಅವರು 1.28 ಕೋಟಿ ರೂ. ಹಾಗೂ ಸುಂದರ್ ಅವರು 71.50 ಲಕ್ಷ ರೂ.ಗಳನ್ನು ತಮ್ಮ ಕಂಪನಿ ಖಾತೆಯಿಂದ ಅಕ್ರಮವಾಗಿ ತೆಗೆದುಕೊಂಡಿದ್ದಾರೆ ಎಂದು ರಮೇಶ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ಬ್ಯಾಂಕ್ ಖಾತೆ ದಾಖಲಾತಿ ಸಲ್ಲಿಕೆ ನೆಪದಲ್ಲಿ ರೈತನಿಗೆ 1.19 ಲಕ್ಷ ವಂಚನೆ

ವಿರಾಜಪೇಟೆ, ಜು.6–ಕೆವೈಸಿ ಅಪ್‌ಡೇಟ್ ಮಾಡದಿದ್ದರೆ ಬ್ಯಾಂಕ್ ಖಾತೆ ಬ್ಲಾಕ್ ಆಗುತ್ತದೆ ಎಂದು ಹೆದರಿಸಿ, ಖಾತೆಯ ವಿವರಗಳನ್ನು ಪಡೆದು ರೈತರೊಬ್ಬರ ಬ್ಯಾಂಕ್ ಖಾತೆಯಿಂದ 1.19 ಲಕ್ಷ ರೂ.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ.

ವಿರಾಜಪೇಟೆ ತಾಲೂಕು ಕಡಂಗ ಮರೂರು ಗ್ರಾಮದ ರೈತ ಬಿ.ಎಲ್. ರಾಮಚಂದ್ರ(64) ವಂಚನೆಗೊಳಗಾದವರಾಗಿದ್ದು, ಇವರ ಮೊಬೈಲ್‌ಗೆ 7477396141 ಸಂಖ್ಯೆಯಿಂದ ಪ್ರತಾಪ್ ಗೌಡ ಎಂಬ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ, ತಾನು ಕೆನರಾ ಬ್ಯಾಂಕ್‌ನಿಂದ ಕರೆ ಮಾಡುತ್ತಿರುವುದಾಗಿಯೂ, ಕೆವೈಸಿ ಅಪ್‌ಡೇಟ್ ಮಾಡದಿದ್ದಲ್ಲಿ ಬ್ಯಾಂಕ್ ಖಾತೆ ಬ್ಲಾಕ್ ಆಗುತ್ತದೆ ಎಂದು ಹೆದರಿಸಿದ್ದಾನೆ. ನಂತರ ರಾಮಚಂದ್ರ ಅವರಿಂದ ಎಟಿಎಂ ಕಾರ್ಡ್ ನಂಬರ್ ಹಾಗೂ ಆಧಾರ್ ನಂಬರ್ ಅನ್ನು ಮತ್ತು ಓಟಿಪಿ ಸಂಖ್ಯೆಯನ್ನು ಪಡೆದಿದ್ದಾನೆ. ನಂತರ ಇವರ ಖಾತೆಯಿಂದ ಮೂರು ಹಂತಗಳಲ್ಲಿ ಒಟ್ಟು 1,19,448 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಾಗಿಲು ಮುರಿದು ನಗದು, ಚಿನ್ನಾಭರಣ ಕಳವು

ಕೊಳ್ಳೇಗಾಲ, ಜು.6–ಮನೆ ಬಾಗಿಲು ಮುರಿದು 4 ಲಕ್ಷ ರೂ. ನಗದು ಹಾಗೂ ಚಿನ್ನಾಭರಣ ಕಳವು ಮಾಡಿರುವ ಘಟನೆ ಕೊಳ್ಳೇಗಾಲ ಟೌನ್ ಶಿವಕುಮಾರಸ್ವಾಮಿ ಲೇಔಟ್‌ನಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಪಿ.ರವಿಕುಮಾರ್(35) ನಗದು ಹಾಗೂ ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರ ಪತ್ನಿ ಗಾಯಿತ್ರಿ ಜು.2ರಂದು ತವರು ಮನೆಗೆ ಹೋಗಿದ್ದಾರೆ. ಜು.3ರಂದು ರವಿ ಕುಮಾರ್ ಚಾಮರಾಜನಗರದಲ್ಲಿ ನಡೆದ ಜಾತ್ರೆಗೆ ತೆರಳಿದ್ದು, ಮರುದಿನ ಬೆಳಗ್ಗೆ ವಾಪಸ್ಸಾದಾಗ ಮನೆ ಬಾಗಿಲು ಮುರಿದು 4 ಲಕ್ಷ ರೂ. ನಗದು, 38 ಗ್ರಾಂ ತೂಕದ ಚಿನ್ನಾಭರಣ ಹಾಗೂ 33,500 ರೂ. ಮೌಲ್ಯದ ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮದುವೆಯಾಗುವುದಾಗಿ ಮರುಳು ಮಾಡಿ ಮಹಿಳೆಯಿಂದ 3.21 ಲಕ್ಷ ಪೀಕಿದ ವಂಚಕ

ಚಾಮರಾಜನಗರ, ಜು.6–ಮದುವೆಯಾಗುವ ಆಸೆ ತೋರಿಸಿ, ವಿದೇಶದಿಂದ ಹಣ ಕಳುಹಿಸಿರುವುದಾಗಿ ನಂಬಿಸಿ ಮಹಿಳೆಯೋರ್ವರಿಗೆ ಆನ್‌ಲೈನ್ ಮೂಲಕ 3.21 ಲಕ್ಷ ರೂ. ವಂಚಿಸಲಾಗಿದೆ.

ಚಾಮರಾಜನಗರದ ಗಾಳಿಪುರ ನಿವಾಸಿ ರುಮಾನ(36) ವಂಚನೆಗೊಳಗಾದವರಾಗಿದ್ದು, ಇವರಿಗೆ ಇನ್‌ಸ್ಟಾಗ್ರಾಂ ಮೂಲಕ ಕಳೆದ ಮೇ ತಿಂಗಳಿನಲ್ಲಿ ಮಹಮದ್ ಅಲಿ ಎಂಬ ಹೆಸರಿನಲ್ಲಿ ಪರಿಚಯವಾದ ವ್ಯಕ್ತಿ ಸ್ನೇಹದಿಂದಲೇ ಮಾತನಾಡುತ್ತಾ, ಅವರ ಮೊಬೈಲ್ ನಂಬರ್ ಪಡೆದು ಮೆಸೇಜ್ ಮಾಡುತ್ತಿದ್ದ.

ಒಂದು ಹಂತದಲ್ಲಿ ತಾನು ವಿಚ್ಛೇದಿತನಾಗಿದ್ದು, ನಿಮ್ಮನ್ನು (ರುಮಾನ) ಮದುವೆಯಾಗಲು ಇಚ್ಛಿಸಿದ್ದೇನೆ. ನಿಮ್ಮ ಅಭಿಪ್ರಾಯವೇನು ಎಂದು ಕೇಳಿದ್ದಾನೆ. ಆಗ ರುಮಾನ ಅವರು ಭಾರತಕ್ಕೆ ಬಂದು ನಮ್ಮ ಮನೆಯವರೊಂದಿಗೆ ಮಾತನಾಡಿ ಎಂದು ಆತನಿಗೆ ತಿಳಿಸಿದ್ದಾರೆ. ನಂತರವೂ ಮೊಬೈಲ್‌ನಲ್ಲಿ ಸಂಪರ್ಕ ಹೊಂದಿದ್ದ ಆತ ಜೂ.8ರಂದು ನಿಮಗೆ ಉಡುಗೊರೆ ಕಳುಹಿಸಬೇಕು, ವಿಳಾಸ ಕೊಡಿ ಎಂದು ಅವರ ಅಂಚೆ ವಿಳಾಸವನ್ನು ಪಡೆದಿದ್ದಾನೆ.

ನಿಮಗೆ ಗಿಫ್ಟ್ ಬಂದಿದೆ. ಅಲ್ಲಿಗೆ ಸರ್ವೀಸ್ ಚಾರ್ಜ್ 29 ಸಾವಿರ ರೂ. ಕಟ್ಟಿದರೆ ನಿಮ್ಮ ವಿಳಾಸಕ್ಕೆ ಗಿಫ್ಟ್ ಕಳುಹಿಸಿಕೊಡಲಾಗುವುದು ಎಂದು ಜೂ.12ರಂದು ರುಮಾನ ಅವರಿಗೆ ವಾಟ್ಸಾಪ್ ಮೆಸೇಜ್ ಬಂದಿದೆ. ಅದರಂತೆ ಅವರು ಆನ್‌ಲೈನ್ ಮೂಲಕ ಹಣ ಪಾವತಿಸಿದ ನಂತರ ಕೆಲವೇ ನಿಮಿಷಗಳಲ್ಲಿ ರಂಜಿತ್ ಎಂಬ ಹೆಸರಿನಲ್ಲಿ ಕರೆ ಮಾಡಿದ ವ್ಯಕ್ತಿ ಗಿಫ್ಟ್ ಬಾಕ್ಸ್‌ನಲ್ಲಿ 20 ಸಾವಿರ ಪೌಂಡ್ ಇದೆ. ಅದಕ್ಕೆ 86 ಸಾವಿರ ರೂ. ಕಟ್ಟಬೇಕು. ಇಲ್ಲದಿದ್ದರೆ ಈ ಹಣ ಸೀಜ್ ಆಗುವುದರ ಜೊತೆಗೆ ನೀವು ಪೊಲೀಸರ ವಿಚಾರಣೆಯನ್ನು ಎದುರಿಸಬೇಕಾಗುತ್ತದೆ ಎಂದು ಮೆಸೇಜ್ ಮಾಡಿದ್ದಾನೆ.

ಈ ವಿಚಾರವನ್ನು ಮಹಮದ್ ಅಲಿಗೆ ಹೇಳಿದಾಗ ಆತ ತಮ್ಮ ಮದುವೆಗಾಗಿ ಹಣವನ್ನು ಗಿಫ್ಟ್ ಬಾಕ್ಸ್‌ನಲ್ಲಿ ಕಳುಹಿಸಿದ್ದೇನೆ. ಆದ್ದರಿಂದ ಅವರು ಹೇಳಿದ ಹಣ ಕಟ್ಟಿ ಗಿಫ್ಟ್ ಪಡೆದುಕೊಳ್ಳುವಂತೆ ತಿಳಿಸಿದ್ದಾನೆ. ರುಮಾನ 86 ಸಾವಿರ ರೂ. ವರ್ಗಾವಣೆ ಮಾಡಿದ ಮರುದಿನವೇ ಮತ್ತೆ 1.60 ಲಕ್ಷ ರೂ. ಕಟ್ಟಬೇಕಾಗುತ್ತದೆ ಎಂದು ಮೆಸೇಜ್ ಬಂದಿದೆ. ಆಗ ಅವರು ಮತ್ತೆ ಮಹಮದ್ ಅಲಿಯನ್ನು ಸಂಪರ್ಕಿಸಿ ತಮ್ಮ ಬಳಿ ಅಷ್ಟು ಹಣವಿಲ್ಲ ಎಂದು ಹೇಳಲಾಗಿ ಆತ ಎಲ್ಲಾದರೂ ಸಾಲ ಮಾಡಿ ಹಣ ಪಾವತಿಸುವಂತೆಯೂ ಗಿಫ್ಟ್ ಬಾಕ್ಸ್ ತಂದಾಗ ಅದರಲ್ಲಿರುವ ಹಣದಲ್ಲಿ ಸಾಲ ತೀರಿಸಬಹುದು ಎಂದು ಸಲಹೆ ನೀಡಿದರು. ಅದರಂತೆ ರುಮಾನ ಹಣ ವರ್ಗಾವಣೆ ಮಾಡಿದ ಮರು ದಿನ (ಜೂ.14) ಇಂಡಿಯನ್ ರೂಲ್ಸ್ ಪ್ರಕಾರ 3 ಲಕ್ಷ ರೂ. ಟ್ಯಾಕ್ಸ್ ಕಟ್ಟಿದರೆ ಮಾತ್ರ ನಿಮಗೆ ಹಣ ದೊರೆಯುತ್ತದೆ ಎಂದು ಮೆಸೇಜ್ ಬಂದಿದೆ. ಈ ವಿಷಯವನ್ನು ರುಮಾನ ಅವರು ಸಹೋದರನಿಗೆ ತಿಳಿಸಿದಾಗ ಅವರು ಮೋಸ ಹೋಗಿರುವುದು ಮನವರಿಕೆ ಆಗಿದೆ.

ರುಮಾನ ಅವರಿಂದ ಒಟ್ಟು 3.21 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡ ವಂಚಕ ತನ್ನ ಬಂಡವಾಳ ರುಮಾನ ಅವರಿಗೆ ಗೊತ್ತಾಗಿದೆ ಎಂದು ತಿಳಿದ ತಕ್ಷಣ ಅವರ ನಂಬರ್ ಬ್ಲಾಕ್ ಮಾಡಿದ್ದಾನೆ. ಈ ಸಂಬಂಧ ಚಾಮರಾಜನಗರ ಜಿಲ್ಲೆ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೊಡಗಲ್ಲಿ ಮುಂದುವರೆದ ಮಳೆ ಅಬ್ಬರ; ಮರ, ವಿದ್ಯುತ್ ಕಂಬಗಳು ಉರುಳಿ ಮನೆಗಳು ಜಖಂ

### ನದಿಗಳಲ್ಲಿ ಪ್ರವಾಹ, ಸಂಚಾರ ಬಂದ್, ಜನ ಜೀವನ ಅಸ್ತವ್ಯಸ್ತ







ಮಡಿಕೇರಿ, ಜು.6– ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ಜೋರಾಗಿದ್ದು, ನಗರ ಪ್ರದೇಶ ಸೇರಿದಂತೆ ಗ್ರಾಮೀಣ ಭಾಗಗಳ ಜನಜೀವನ ಅಸ್ತವ್ಯಸ್ತವಾಗಿದೆ. ಮಳೆ ಗಾಳಿಗೆ ಜಿಲ್ಲೆಯ ವಿವಿಧೆಡೆ ಸಾಕಷ್ಟು ಮನೆಗಳಿಗೆ ಹಾನಿಯಾಗಿರುವ ಬಗ್ಗೆಯೂ ವರದಿಯಾಗಿದೆ. ಹಲವು ನದಿಗಳ ಪ್ರವಾಹದಿಂದ ರಸ್ತೆಗಳ ಸಂಚಾರ ಬಂದ್ ಆಗಿದೆ.

ಭಾರೀ ಮಳೆ ಮುಂದುವರೆದಿರುವ ಕಾರಣ ಮತ್ತೆ ಜಿಲ್ಲೆಯಾದ್ಯಂತ ಜು.8ರ ಬೆಳಗ್ಗೆ 8.30ರವರೆಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಮುಂದಿನ 24 ಗಂಟೆಗಳಲ್ಲಿ ಮಳೆ ಮತ್ತಷ್ಟು ತೀವ್ರ ಸ್ವರೂಪ ಪಡೆಯುವ ಸಾಧ್ಯತೆಗಳಿವೆ ಎಂದು ಗೋಣಿಕೊಪ್ಪ ಕೃಷಿ ವಿಜ್ಞಾನ ಕೇಂದ್ರ ಮಾಹಿತಿ ನೀಡಿದೆ.

**ಮನೆಗಳಿಗೆ ಹಾನಿ:** ಕೆಲವು ಕಡೆಗಳಲ್ಲಿ ಗಾಳಿಗೆ ಮರ, ವಿದ್ಯುತ್ ಕಂಬಗಳು ಉರುಳಿ ಬಿದ್ದು ಹಾನಿ ಸಂಭವಿಸಿದೆ. ಸುಂಟಿಕೊಪ್ಪ ಸಮೀಪದ ಕಂಬಿಬಾಣೆಯ ಭೂದಾನ ಪೈಸಾರಿಯಲ್ಲಿ ಒಣಗಿದ ನಂದಿ ಮರ ಮತ್ತು ವಿದ್ಯುತ್ ಕಂಬಗಳು ಬಿದ್ದು ಮರಿಯಾ, ಲಲಿತ ಮತ್ತು ಐಸಮ್ಮ ಎಂಬುವರ ಮನೆಗಳಿಗೆ ಹಾನಿಯಾಗಿದೆ. ಬುಧವಾರ ರಾತ್ರಿ ಈ ಘಟನೆ ನಡೆದಿದ್ದು, ಮನೆಗಳ ಕಾಂಕ್ರೀಟ್ ಶೀಟ್‌ನ ಮೇಲ್ಛಾವಣಿಗಳು ಒಡೆದು ಹೋಗಿ, ಅದೃಷ್ಟವಶಾತ್ ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಮರವನ್ನು ತೆರವು ಮಾಡಲಾಗಿದ್ದು, ವಿದ್ಯುತ್ ಕಂಬ ಗಳನ್ನು ಬದಲಿಸಿ ಲೈನ್ ದುರಸ್ತಿ ಕಾರ್ಯ ಮಳೆಯ ನಡುವೆಯೇ ನಡೆಯುತ್ತಿದೆ. ಘಟನಾ ಸ್ಥಳಕ್ಕೆ ಕಂದಾಯ, ಪೊಲೀಸ್ ಇಲಾಖೆ, ಚೆಸ್ಕಾಂ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಮಡಿಕೇರಿ ತಾಲೂಕಿನ ಹೊಸ್ಕೇರಿ ಪಂಚಾಯಿತಿಗೆ ಒಳಪಟ್ಟ ನೇತಾಜಿನಗರದಲ್ಲಿ ಗುರುರಾಜ್ ಎಂಬುವರ ಮನೆಯ ಮೇಲೆ ಭಾರೀ ಗಾತ್ರದ ಮರ ಬಿದ್ದು, ತೀವ್ರ ಹಾನಿಯಾಗಿದೆ. ಈ ಸಂದರ್ಭ ಮನೆಯಲ್ಲಿ ಯಾರೂ ಇಲ್ಲದ ಕಾರಣ ಜೀವಹಾನಿ ತಪ್ಪಿದಂತಾಗಿದೆ. ಮನೆಯ ಮೇಲ್ಛಾವಣಿಗೆ ಭಾರೀ ಹಾನಿಯಾಗಿದ್ದು, ಗೋಡೆಗಳು ಬಿರುಕು ಬಿಟ್ಟಿವೆ. ಮಡಿಕೇರಿ–ಸುಂಟಿಕೊಪ್ಪ ನಡುವಿನ ಕೆದಕಲ್ ಭದ್ರಕಾಳಿ ದೇವಾಲಯದ ಬಳಿ ಹೆದ್ದಾರಿ ಮೇಲೆ ಮರ ಬಿದ್ದಿದ್ದು, ಕೆಲಕಾಲ ವಾಹನ ಸಂಚಾರ ಸ್ಥಗಿತವಾಗಿತ್ತು. ಅರಣ್ಯ ಇಲಾಖೆ, ಸ್ಥಳೀಯ ಪಂಚಾಯಿತಿ ಮರ ತೆರವು ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ.

**ತ್ರಿವೇಣಿ ಸಂಗಮ ಜಲಾವೃತ:** ಬ್ರಹ್ಮಗಿರಿ ಶ್ರೇಣಿ, ತಲಕಾವೇರಿ, ಭಾಗಮಂಡಲ ವ್ಯಾಪ್ತಿಗಳಲ್ಲಿ ಎಡೆಬಿಡದೆ ಮಳೆ ಸುರಿಯುತ್ತಿರುವ ಕಾರಣ ತ್ರಿವೇಣಿ ಸಂಗಮ ಸಂಪೂರ್ಣ ಜಲಾವೃತವಾಗಿದೆ. ಹಳೇ ಕೇಶಮುಂಡನ ಕಟ್ಟಡದ ಅರ್ಧ ಭಾಗ ಮುಳುಗಡೆಯಾಗಿದ್ದು, ನಾಗನಕಟ್ಟೆ, ಅಶ್ವಥಕಟ್ಟೆ ಮುಳುಗಡೆಯಾಗಿದೆ. ಪ್ರಸ್ತುತ ಸಂಗಮಕ್ಕೆ ಭಕ್ತರ ಪ್ರವೇಶ ನಿಷೇಧಿಸಲಾಗಿದೆ.

ಇನ್ನು ಶ್ರೀ ಭಗಂಡೇಶ್ವರ ದೇವಾಲಯದ ಆವರಣ ಮಟ್ಟಕ್ಕೆ ಸಮವಾಗಿ ಕಾವೇರಿ ನದಿ ನೀರು ಹರಿಯುತ್ತಿದ್ದು, ಇದೇ ಮಾದರಿಯಲ್ಲಿ ಮಳೆ ಮುಂದುವರೆದಲ್ಲಿ ನದಿ ಪ್ರವಾಹ ನೀರು ದೇವಾಲಯ ಆವರಣ ಪ್ರವೇಶಿಸುವ ಲಕ್ಷಣಗಳು ಕಂಡು ಬಂದಿದೆ. ಕಾವೇರಿ ನದಿ ಪಾತ್ರದ ಗ್ರಾಮಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಮೂರ್ನಾಡು ಸಮೀಪದ ಬಲಮುರಿ ಕೆಳ ಸೇತುವೆ ಮುಳುಗಡೆಯಾಗಿದೆ. ಸೇತುವೆಯ ಮೇಲೆ 1 ಅಡಿ ನೀರು ಹರಿಯುತ್ತಿದ್ದು, ಮೇಲ್ಸೇತುವೆ ಮೂಲಕ ವಾಹನ ಸಂಚಾರ ಸುಗಮವಾಗಿ ಸಾಗಿದೆ.

**'ಪ್ರವಾಹ'–ರಸ್ತೆ ಬಂದ್:** ತಲಕಾವೇರಿ, ಭಾಗಮಂಡಲ, ಕೋರಂಗಾಲ, ಚೇರಂಗಾಲ ಗ್ರಾಮಗಳ ವ್ಯಾಪ್ತಿಯಲ್ಲಿ ಮಳೆ ಆರ್ಭಟಿಸುತ್ತಿದ್ದು, ಕಾವೇರಿ, ಕನ್ನಿಕೆ, ಸುಜ್ಯೋತಿ ನದಿಗಳಲ್ಲಿ ಪ್ರವಾಹ ಏರ್ಪಟ್ಟಿದೆ. ಪರಿಣಾಮವಾಗಿ ಭಾಗಮಂಡಲ–ನಾಪೋಕ್ಲು ರಸ್ತೆ ಸಂಚಾರ ತ್ರಿವೇಣಿ ಸಂಗಮದ ನದಿ ನೀರು ಪ್ರವಾಹದಿಂದ ಸಂಪೂರ್ಣ ಬಂದ್ ಆಗಿದೆ. ಈ ಸಂಪರ್ಕ ರಸ್ತೆಯಲ್ಲಿ 5 ಅಡಿಗೂ ಹೆಚ್ಚು ಪ್ರವಾಹ ನೀರು ಹರಿಯುತ್ತಿದ್ದು, ಎಲ್ಲಾ ರೀತಿಯ ವಾಹನ ಸಂಚಾರ ಸ್ತಬ್ಧವಾಗಿದೆ.

ಸ್ಥಳದಲ್ಲಿ ಪೊಲೀಸರು, ಗೃಹರಕ್ಷಕ ದಳದ ಸಿಬ್ಬಂದಿಗಳು ಮತ್ತು ಮುಳುಗು ತಜ್ಞರನ್ನು ರ್‍ಯಾಫ್ಟ್ ಬೋಟ್‌ಗಳ ಮೂಲಕ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಗುರುವಾರ ಬೆಳಗಿನ ವೇಳೆ ತ್ರಿವೇಣಿ ಸಂಗಮದಲ್ಲಿ ನೀರಿನ ಏರಿಕೆ ಕಂಡು ಬಂದಿತ್ತಾದರೂ, ಮಧ್ಯಾಹ್ನದ ಬಳಿಕ ಸುರಿದ ಮಳೆಯಿಂದ ನದಿ ಪಾತ್ರದ ಗದ್ದೆಗಳಿಗೆ ನದಿ ನೀರು ನುಗ್ಗಿದೆ. ಭಾಗಮಂಡಲ–ಮಡಿಕೇರಿ ಸಂಪರ್ಕ ರಸ್ತೆಯಲ್ಲೂ ಪ್ರವಾಹ ನೀರು ಹರಿಯುತ್ತಿದ್ದು, ಪ್ರಸ್ತುತ ಜನರು ಹಾಗೂ ವಾಹನ ಸಂಚಾರಕ್ಕೆ ತೊಡಕಾಗಿಲ್ಲ. ಆದರೆ ಮಳೆ ಮುಂದುವರೆದಲ್ಲಿ ಈ ರಸ್ತೆಯೂ ಬಂದ್ ಆಗುವ ಎಲ್ಲಾ ಸಾಧ್ಯತೆಗಳಿವೆ ಎಂದು ಅಲ್ಲಿನ ನಿವಾಸಿಗಳು ಮಾಹಿತಿ ನೀಡಿದ್ದಾರೆ.

**ಮಳೆ ವಿವರ:** ಕಳೆದ 24 ಗಂಟೆಗಳ ಅವಧಿಯಲ್ಲಿ ಜಿಲ್ಲೆಗೆ 58.12 ಮಿ.ಮೀ. ಮಳೆಯಾಗಿದೆ. ಮಡಿಕೇರಿ ತಾಲೂಕಿನ ಭಾಗಮಂಡಲಕ್ಕೆ ದಾಖಲೆಯ 120 ಮಿ.ಮೀ ಮಳೆ ಸುರಿದರೆ, ಸಂಪಾಜೆ ವ್ಯಾಪ್ತಿಯಲ್ಲಿ 98.5 ಮಿ.ಮೀ ಮಳೆಯಾಗಿದೆ. ವಿರಾಜಪೇಟೆ ಕಸಬಾ 68.4, ಶ್ರೀಮಂಗಲ ವ್ಯಾಪ್ತಿಯಲ್ಲಿ 59.4 ಹಾಗೂ ಸೋಮವಾರಪೇಟೆ ವ್ಯಾಪ್ತಿಯ ಶಾಂತಳ್ಳಿ ವ್ಯಾಪ್ತಿಯಲ್ಲಿ 100.2ಮಿ.ಮೀ ಮಳೆ ಸುರಿದಿದೆ.

**ರಜೆ ಘೋಷಣೆ**

ಶುಕ್ರವಾರ ಕೂಡ ಜಿಲ್ಲೆಯಲ್ಲಿ ಭಾರೀ ಮಳೆ ಸುರಿಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕೊಡಗು ಜಿಲ್ಲೆಯ ಎಲ್ಲಾ ಅಂಗನವಾಡಿ ಕೇಂದ್ರಗಳು, ಸರ್ಕಾರಿ ಮತ್ತು ಖಾಸಗಿ ಶಾಲಾ–ಕಾಲೇಜುಗಳಿಗೆ ಒಂದು ದಿನ ರಜೆ ಘೋಷಿಸಿ, ಜಿಲ್ಲಾಧಿಕಾರಿ ವೆಂಕಟರಾಜು ಆದೇಶ ಹೊರಡಿಸಿದ್ದಾರೆ.

## ಅಂಬಾವಿಲಾಸ ಅರಮನೆ ಬ್ರಹ್ಮಪುರಿ ದ್ವಾರ ದುರಸ್ತಿ ಕಾಮಗಾರಿ



ಮೈಸೂರು, ಜು.6(ಜಿಎ)–ಮೈಸೂರಿನ ಅಂಬಾವಿಲಾಸ ಅರಮನೆಯ ಬ್ರಹ್ಮಪುರಿ ದ್ವಾರವು ಮಳೆಯಿಂದ ಶಿಥಿಲಗೊಂಡಿದ್ದು, ಅರಮನೆ ಆಡಳಿತ ಮಂಡಳಿಯು ದುರಸ್ತಿ ಕಾಮಗಾರಿಗೆ ಮುಂದಾಗಿದೆ.

1912ರಲ್ಲಿ ನಿರ್ಮಾಣವಾಗಿರುವ ಅಂಬಾವಿಲಾಸ ಅರಮನೆಯು ಶತಮಾನ ಪೂರೈಸಿದ್ದು, ಸೂಕ್ತ ನಿರ್ವಹಣೆ ಇಲ್ಲದ ಕಾರಣ ಮಳೆಗಾಲದಲ್ಲಿ ಕೆಲವೆಡೆ ಮಳೆ ನೀರು ಸೋರಿಕೆಯಾಗುತ್ತಿದೆ. ಅರಮನೆಯ ಬ್ರಹ್ಮಪುರಿ ದ್ವಾರವೂ ಮಳೆಗೆ ಶಿಥಿಲವಾಗಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಅರಮನೆ ಆಡಳಿತ ಮಂಡಳಿ ದುರಸ್ತಿ ಕಾಮಗಾರಿ ಆರಂಭಿಸಿದೆ.


ಮೈಸೂರು ಅರಮನೆಗೆ ಜಯಮಾರ್ತಾಂಡ, ಬಲರಾಮ, ಕರಿಕಲ್ ತೊಟ್ಟಿ, ವರಾಹ, ಬ್ರಹ್ಮಪುರಿ ದ್ವಾರ ಎಂಬ ಮುಖ್ಯ ದ್ವಾರಗಳನ್ನು ಹೊಂದಿದ್ದು, ಅವುಗಳಲ್ಲಿ ಅರಮನೆಯ ಪೂರ್ವಕ್ಕೆ ಜಯಮಾರ್ತಾಂಡ ದ್ವಾರವಿದ್ದು, ಅದು ಅರಮನೆಯ ಮುಖ್ಯ ದ್ವಾರವಾಗಿದೆ. ಉತ್ತರಕ್ಕೆ ಬಲರಾಮ ಮತ್ತು ದಕ್ಷಿಣಕ್ಕೆ ಜಯರಾಮ ದ್ವಾರವಿದ್ದು, ಪಶ್ಚಿಮಕ್ಕೆ ವರಾಹ ದ್ವಾರವನ್ನು ಹೊಂದಿದೆ. ಈ ದ್ವಾರಗಳ ಮೂಲಕ ಅರಮನೆಗೆ ಭೇಟಿ ನೀಡುವ ಪ್ರವಾಸಿಗರಿಗೆ ಮತ್ತು ಪ್ರಮುಖ ವ್ಯಕ್ತಿಗಳ ಪ್ರವೇಶದ್ವಾರವಾಗಿವೆ.

ನಗರದ ಸಯ್ಯಾಜಿರಾವ್ ರಸ್ತೆ (ನಗರ ಬಸ್ ನಿಲ್ದಾಣದ ಪಕ್ಕ) ಎದುರಿಗೆ ಬ್ರಹ್ಮಪುರಿ ದ್ವಾರವನ್ನು ಹೊಂದಿದ್ದು, ಈ ದ್ವಾರದ ಮೂಲಕ ಪ್ರವೇಶಿಸಲು ಎಲ್ಲರಿಗೂ ನಿರ್ಬಂಧವಿದ್ದು, ಕೇವಲ ರಾಜವಂಶಸ್ಥರು ಮಾತ್ರ ಇದನ್ನು ಬಳಸುತ್ತಾರೆ. ಕೆಲವೊಮ್ಮೆ ಪರಕಾಲ ಮಠದ ಸ್ವಾಮೀಜಿಗಳು ಅರಮನೆಯ ಪೂಜಾ ಕೈಂಕರ್ಯಕ್ಕೆ ಆಗಮಿಸುವಾಗ ಈ ದ್ವಾರವನ್ನು ಬಳಸುವುದು ವಾಡಿಕೆಯಾಗಿದೆ. ಮಳೆ ನೀರಿನ ಸೋರಿಕೆಯಿಂದ ದ್ವಾರದ ಗೋಡೆಯ ಚೆಕ್ಕೆಗಳು ಬೀಳುತ್ತಿದ್ದು, ಅದನ್ನು ದುರಸ್ತಿಪಡಿಸುವ ಕಾರ್ಯ ಭರದಿಂದ ಸಾಗಿದೆ.

ಮಳೆಯಿಂದ ಶಿಥಿಲಗೊಂಡಿದ್ದ ಬ್ರಹ್ಮಪುರಿ ದ್ವಾರವನ್ನು ಅರಮನೆ ಆಡಳಿತ ಮಂಡಳಿ ವತಿಯಿಂದ ದುರಸ್ತಿ ಮಾಡಿಸಲಾಗುತ್ತಿದೆ. ಪಾರಂಪರಿಕ ತಜ್ಞರ ಸಲಹೆಯಂತೆ ಕಾಮಗಾರಿ ನಡೆಯುತ್ತಿದೆ ಎಂದು ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಮಣ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅರಮನೆ ಆವರಣದಲ್ಲಿ ಮತ್ತಷ್ಟು ಕಾಮಗಾರಿಗಳು ನಡೆಯುತ್ತಿದ್ದು, ಸಿಎಸ್‌ಆರ್ ಫಂಡ್ ಮೂಲಕ ಪುರುಷರ ಶೌಚಾಲಯ ನಿರ್ಮಾಣ ಮಾಡಲಾಗುತ್ತಿದೆ. ಬಹುತೇಕ ಎಲ್ಲಾ ಕಾಮಗಾರಿಗಳು ದಸರಾ ವೇಳೆಗೆ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು.

## ನಾಳೆ ಕಥನ ಕಾವ್ಯ ಬಿಡುಗಡೆ




ಮೈಸೂರು, ಜು.6(ಜಿಎ)– ಜು.8 ರಂದು ಲೇಖಕ ಎಂ.ಜವರಾಜ್ ಅವರ ಕಥನ ಕಾವ್ಯ 'ಮೆಟ್ಟು ಹೇಳಿದ ಕಥಾ ಪ್ರಸಂಗ' ಕೃತಿ ಲೋಕಾರ್ಪಣೆ ಸಮಾರಂಭ ಆಯೋಜಿಸಲಾಗಿದೆ ಎಂದು ಸಾಹಿತಿ ಡಾ.ಹರೀಶ್ ಕುಮಾರ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಇ.ಎಂ.ಆರ್.ಸಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ, ಮೈಸೂರು ವಿವಿ ದಲಿತ ವಿದ್ಯಾರ್ಥಿಗಳ ಮತ್ತು ಸಂಧ್ಯಾ ಪ್ರಕಾಶನ–ಪಂಜು ವೆಬ್ ಮ್ಯಾಗಜಿನ್ ಸಹಯೋಗದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಬೆಳಗ್ಗೆ 11 ಗಂಟೆಗೆ ಹಿರಿಯ ಸಾಹಿತಿ ಕಾಳೇಗೌಡ ನಾಗವಾರ ಕೃತಿ ಬಿಡುಗಡೆ ಮಾಡಲಿದ್ದಾರೆ. ಕವಿ ಓ.ಎಲ್.ನಾಗಭೂಷಣಸ್ವಾಮಿ ಕೃತಿ ಪರಿಚಯ ಮಾಡಿಕೊಡಲಿದ್ದು, ಮುಖ್ಯ ಅತಿಥಿಯಾಗಿ ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ಆಗಮಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಂತಕ ನಾ.ದಿವಾಕರ ವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಲೇಖಕ ಎಂ. ಜವರಾಜ್, ಪ್ರಕಾಶಕ ಎಸ್. ರವಿಕುಮಾರ್ ಉಪಸ್ಥಿತರಿದ್ದರು.

## ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಜು. 6– ಮೈಸೂರಿನ ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘದ ವತಿಯಿಂದ ಜೆಎಸ್‌ಎಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಜೆಎಸ್‌ಎಸ್ ಡೆಂಟಲ್ ಆಸ್ಪತ್ರೆ, ಭಾರತ್ ಕ್ಯಾನ್ಸರ್ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗದಲ್ಲಿ ಜು. 11 ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 99161 55453 ಸಂಪರ್ಕಿಸಬಹುದು.

## ಮೈಸೂರು ವಿಜ್ಞಾನ ನಾಟಕೋತ್ಸವಕ್ಕೆ ಚಾಲನೆ






ಮೈಸೂರು, ಜು. 6(ಸಿಎನ್)–ವಿದ್ಯಾರ್ಥಿಗಳಿಗೆ ವಿಜ್ಞಾನದ ಮೂಲಕ ಜ್ಞಾನ ಮೂಡಿಸಲು ಹಾಗೂ ವಿಜ್ಞಾನಿಗಳ ಸಾಧನೆ ಕುರಿತು ಬೆಳಕು ಚೆಲ್ಲುವ ಸಲುವಾಗಿ ನಾಲ್ಕು ದಿನಗಳ ನಾಟಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಗರದ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಪರಿವರ್ತನ ರಂಗ ಸಮಾಜ, ಕಲಾಸುರುಚಿ ಮೈಸೂರು ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಸಹಯೋಗದಲ್ಲಿ ಗುರುವಾರ ಆಯೋಜಿಸಲಾಗಿದ್ದ 'ಮೈಸೂರು ವಿಜ್ಞಾನ ನಾಟಕೋತ್ಸವ 2023' ಕುತೂಹಲಿ ನಾಟಕೋತ್ಸವಕ್ಕೆ ಅಧಿಕೃತ ಚಾಲನೆ ದೊರೆತಿದೆ.

ಬಳಿಕ ಕಲಾಸುರುಚಿ ಸಂಸ್ಥೆಯ ಶಶಿಧರ್ ಡೋಂಗ್ರೆ ಮಾತನಾಡಿ, ಮೊದಲು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮ ನಡೆಯುತ್ತಿತ್ತು. ಆದರೆ ಈಗ ಸಂಸ್ಥೆಯೂ ಸಧೃಡವಾಗಿದೆ. ವಿದ್ಯಾರ್ಥಿಗಳಿಗಾಗಿ ಸಾರ್ಥಕತೆಯ ಕಾರ್ಯಕ್ರಮಗಳನ್ನು ನೀಡುವುದು ನಮ್ಮ ಉದ್ದೇಶವಾಗಿದೆ ಎಂದರು.

2005 ರಿಂದ 2017ರಲ್ಲಿ ಅಮೇರಿಕಾದ ಮಾಲ್ಕೊ ಥಿಯೇಟರ್ ಹೊರತುಪಡಿಸಿದರೆ ವಿಶ್ವದಲ್ಲೇ ವಿಜ್ಞಾನದ ಬಗ್ಗೆ ನಾಟಕೋತ್ಸವಗಳು ನಡೆದ ಉದಾಹರಣೆಗಳಿಲ್ಲ. ಅದರಲ್ಲೂ ನಮ್ಮ ಮೈಸೂರಿನಲ್ಲಿ ನಿರಂತರ ನಾಟಕೋತ್ಸವ ನಡೆಯುತ್ತಾ ಬಂದಿದ್ದು, ಇದು 6ನೇ ಆವೃತ್ತಿಯಾಗಿದೆ. ಇದಕ್ಕೆಲ್ಲಾ ಕಾರಣರಾದ ಪ್ರೇಕ್ಷಕರಿಗೆ ಧನ್ಯವಾದಗಳು ಎಂದು ಕೃತಜ್ಞತೆ ತಿಳಿಸಿದರು.

ಕುತೂಹಲಿ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಇದರ ಭಾಗವಾಗಿ ವಿಜ್ಞಾನದ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅವಕಾಶವಿತ್ತು. ಹೀಗಾಗಿ ವಿಜ್ಞಾನದ ಮಹತ್ವವನ್ನು ಸಾರಲು ನಾಟಕವನ್ನು ಮಾಧ್ಯಮವಾಗಿ ವ್ಯವಸ್ಥಿತವಾಗಿ ಬಳಸಿಕೊಳ್ಳುವ ಕುರಿತು ಚರ್ಚೆಗಳು ನಡೆದಿದ್ದವು. ನಾವು 2018ರ ಪ್ರಾರಂಭದಲ್ಲಿ ಅನುವಾದ ನಾಟಕಗಳನ್ನು ಹೆಚ್ಚು ಪ್ರದರ್ಶಿಸುತ್ತಿದ್ದೆವು. ಆದರೆ ಈಗ ನಾಲ್ಕು ನಾಟಕಗಳ ಪೈಕಿ 3 ಕಥೆಗಳನ್ನು ಸ್ವತಂತ್ರವಾಗಿ ಪ್ರಸ್ತುತ ಪಡಿಸುತ್ತಿದ್ದೇವೆ. ಅಷ್ಟರ ಮಟ್ಟಿಗೆ ನಾವು ಸ್ವತಂತ್ರರಾಗಿದ್ದೇವೆ. ಇನ್ನು ನಾಟಕದಲ್ಲಿ ವಿಜ್ಞಾನದ ಅಂಶವೇನಿರುತ್ತೆ ಎಂದು ನೋಡುವುದಾದರೆ, ಎರಡು ವಿಧಗಳಲ್ಲಿ ನಾಟಕಗಳು ತಯಾರಾಗುತ್ತವೆ. ವೈಜ್ಞಾನಿಕ ವ್ಯಕ್ತಿಗಳ ಸುತ್ತಾ ಹಾಗೂ ವ್ಯಕ್ತಿಗಳ ಸಿದ್ಧಾಂತದ ಬಗೆಯ ಅಂಶಗಳನ್ನು ಅಳವಡಿಸಿ ತಯಾರು ಮಾಡಲಾಗುತ್ತದೆ ಎಂದರು.

ವ್ಯಕ್ತಿಗಳ ಸುತ್ತ ಹೆಣೆದ ನಾಟಕಗಳು 9 ಇವೆ. ವ್ಯಕ್ತಿಯ ಸಿದ್ಧಾಂತದ ಬಗೆಗಿನ ನಾಟಕಗಳು ಸಹ ಇವೆ. ವ್ಯಕ್ತಿಯ ನಾಟಕಗಳು ಆತನ ಬಾಲ್ಯ, ಕಷ್ಟದ ದಿನಗಳು, ವಿದ್ಯಾಭ್ಯಾಸ, ಸಾಧನೆ ಬಗ್ಗೆ ಬೆಳಕು ಚೆಲ್ಲಿದರೆ, ವ್ಯಕ್ತಿಯ ಸಿದ್ಧಾಂತದ ನಾಟಕಗಳು ಅವರ ಸೈದ್ಧಾಂತಿಕ ನೆಲೆಕಟ್ಟು, ವೈಜ್ಞಾನಿಕ ವಿಚಾರಧಾರೆಯ ಕುರಿತು ನಡೆಯಲಿವೆ ಎಂದು ತಿಳಿಸಿದರು.

ನಂತರ ಸಾಲಿಯಾನ್ ಉಮೇಶ ನಾರಾಯಣ ನಿರ್ದೇಶನದ ನೊಬೆಲ್ ಪ್ರಶಸ್ತಿ ವಿಜೇತೆ ಮೇಡಂ ಕ್ಯೂರಿ ಕಥಾಧಾರಿತ 'ಪ್ರಭಾಸ' ನಾಟಕವನ್ನು ಪ್ರದರ್ಶಿಸುವ ಮೂಲಕ ನೆರೆದಿದ್ದ ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಬೆಳಕು ಚೆಲ್ಲಲಾಯಿತು. ಜು. 7, 8, 9ನೇ ತಾರೀಖಿನಂದು ಇಲ್ಲಿನ ಕಿರುರಂಗಮಂದಿರದಲ್ಲಿ ವಿಜ್ಞಾನ ಕುರಿತು ವಿವಿಧ ನಾಟಕಗಳನ್ನು ಏರ್ಪಡಿಸಲಾಗಿದೆ. ಡಾ.ಮನೋಹರ್, ಕುತೂಹಲಿ ಸಂಸ್ಥೆಯ ಕೊಳ್ಳೇಗಾಲ ಶರ್ಮಾ, ಪರಿವರ್ತನ ಸಂಸ್ಥೆಯ ಮಾಧವ್ ಖರೆ ಮತ್ತಿತರರಿದ್ದರು.

## ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.6– ಮೈಸೂರು ಮಹಾನಗರ ಪಾಲಿಕೆಯ 2022–23ನೇ ಸಾಲಿನ ಪರಿಷ್ಕೃತ ಮತ್ತು 2023–24ನೇ ಸಾಲಿನ ಆಯ–ವ್ಯಯದಲ್ಲಿ ಕನ್ನಡ ಭಾಷೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಪಾಲಿಕೆ ವ್ಯಾಪ್ತಿಯಲ್ಲಿ ವಾಸಿಸುವ ನಾಗರಿಕರ ಮಕ್ಕಳು ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾಭ್ಯಾಸವನ್ನು ಸರ್ಕಾರಿ ಶಾಲೆ ಮತ್ತು ಕಾಲೇಜುಗಳಲ್ಲಿ ಪೂರೈಸಿ ಕನ್ನಡ ಭಾಷೆಯಲ್ಲಿ ಶೇ.95 ಕ್ಕಿಂತ ಹೆಚ್ಚಿನ ಅಂಕಗಳನ್ನ ಗಳಿಸಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ರೂ.5000 ಗಳನ್ನು ನೀಡಲು ತೀರ್ಮಾನಿಸಲಾಗಿದೆ.

ಅದರಂತೆ ಅರ್ಹ ವಿದ್ಯಾರ್ಥಿಗಳು ಸಂಬಂಧಿಸಿದ ಸರ್ಕಾರಿ ಶಾಲಾ, ಕಾಲೇಜುಗಳ ಮುಖ್ಯೋಪಾಧ್ಯಾಯರು, ಪ್ರಾಂಶುಪಾಲರ ಮೂಲಕ ಅರ್ಜಿ ಪಡೆದು ನಿಗದಿತ ನಮೂನೆಯಲ್ಲಿ ವಾಸಸ್ಥಳ ದೃಢೀಕರಣ ಪತ್ರ, ವ್ಯಾಸಂಗ ದೃಢೀಕರಣ ಪತ್ರ, ಆಧಾರ್‌ಕಾರ್ಡ್ ಹಾಗೂ 2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿಯಲ್ಲಿ ದೃಢೀಕೃತ ಅಂಕಪಟ್ಟಿ ಇತ್ಯಾದಿ ಅವಶ್ಯಕ ದಾಖಲಾತಿಗಳೊಂದಿಗೆ ಆಗಸ್ಟ್ 31 ರ ಒಳಗಾಗಿ ಅರ್ಜಿಯನ್ನು ಸಲ್ಲಿಸಬೇಕು ಎಂದು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕದಿಯಲು ಬಂದವರು ಹಸಿದಿದ್ದರು ! ಅಡುಗೆ ಮಾಡಿ ಉಂಡು ಮಲಗಿದರು !! ಕೊನೆಗೆ ಎದ್ದು ಹೋದರು !!!

### ಕೊಡಗು ಜಿಲ್ಲೆಯ ಪೊನ್ನಂಪೇಟೆ ಬಳಿ ವಿನೂತನ ಶೈಲಿ ಕಳ್ಳತನ

ಮಡಿಕೇರಿ, ಜು.6– ಮನೆ ಕಳ್ಳತನಕ್ಕೆ ಬಂದ ಕಳ್ಳರು ಕೈಗೆ ಸಿಕ್ಕ ಸಣ್ಣ–ಪುಟ್ಟ ವಸ್ತುಗಳನ್ನು ದೋಚಿ ಪರಾರಿಯಾಗುವ ಮುನ್ನ ಮೊಟ್ಟೆ ಸಾಂಬಾರ್ ತಯಾರಿಸಿ, ಊಟ ಮಾಡಿಕೊಂಡು, ಜೊತೆಗೆ ಗಡದ್ದಾಗಿ ನಿದ್ರೆಯನ್ನೂ ಮಾಡಿ ಹೋಗಿರುವ ವಿಲಕ್ಷಣ ಘಟನೆ ಪೊನ್ನಂಪೇಟೆ ತಾಲೂಕಿನ ಚಿಕ್ಕ ಸೊಡ್ಲೂರು ಗ್ರಾಮದಲ್ಲಿ ಸಂಭವಿಸಿದೆ.



ಕಾನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೆಕ್ಕೆಸೊಡ್ಲೂರು ಗ್ರಾಮದ ಸುಳ್ಳಿಮಾಡ ಪುಷ್ಪ ಮುದ್ದಪ್ಪ ಅವರ ಮನೆಯಲ್ಲಿ ಈ ವಿನೂತನ ಕಳ್ಳತನ ನಡೆದಿದೆ.

ಮನೆ ಮಾಲೀಕರು ಶನಿವಾರ ಕೆಲಸದ ನಿಮಿತ್ತ ಮೈಸೂರಿಗೆ ತೆರಳಿದ್ದು, ಬುಧವಾರ ಸಂಜೆ 4.30ರ ಸಮಯದಲ್ಲಿ ಮನೆಗೆ ಮರಳಿದಾಗ ಕಳ್ಳರ ಈ ಕೃತ್ಯ ಬೆಳಕಿಗೆ ಬಂದಿದೆ. ಮಂಗಳವಾರ ರಾತ್ರಿ ಮನೆಯ ಮುಂಬಾಗಿಲಿನ ಬೀಗ ಮುರಿದು ಒಳ ನುಗ್ಗಿರುವ ಕಳ್ಳರು 1 ರೇಡಿಯೋ, ಕಂಬಳಿ, ಒಂದು ಸಿಲ್ವರ್ ಗಂಜಿ (ಪಾತ್ರೆ) ಯನ್ನು ಕಳವು ಮಾಡಿದ್ದಾರೆ. ಜೊತೆಗೆ ಮನೆಯಲ್ಲಿದ್ದ ಬೀರುವಿನಲ್ಲೂ ಚಿನ್ನಾಭರಣ, ನಗದು ಮತ್ತು ಅಮೂಲ್ಯ ವಸ್ತುಗಳಿಗಾಗಿ ಶೋಧಿಸಿರುವ ಕಳ್ಳರು ಬಟ್ಟೆಗಳನ್ನು ಚೆಲ್ಲಾಪಿಲ್ಲಿಯಾಗಿಸಿದ್ದಾರೆ.

**'ಉಂಡು'–'ಕೊಂಡು' ಹೋದ್ರು:** ಮಾಲೀಕರು ಸದ್ಯಕ್ಕೆ ಮನೆಗೆ ಬರುವುದಿಲ್ಲ ಎಂದು ತಿಳಿದವರಂತೆ ಮನೆಯನ್ನು ಸಂಪೂರ್ಣವಾಗಿ ಜಾಲಾಡಿದ ಕಳ್ಳರು ಮನೆಯ ಅಡುಗೆ ಕೋಣೆಗೆ ತೆರಳಿ ಅಲ್ಲಿಯೇ ಅನ್ನ ಮಾಡಿ, ಮನೆಯಲ್ಲಿದ್ದ 7 ಮೊಟ್ಟೆಗಳಿಂದ ಸಾಂಬಾರ್ ಸಿದ್ಧಪಡಿಸಿ, ಹೊಟ್ಟೆತುಂಬಾ ಊಟ ಮಾಡಿದ್ದಾರೆ ಇಷ್ಟು ಸಾಲದು ಎಂಬಂತೆ ಮನೆಯಲ್ಲಿಯೇ ಸುಖವಾಗಿ ನಿದ್ದೆ ಮಾಡಿ ಬೆಳಗಿನ ಜಾವ ಸ್ಥಳದಿಂದ ಕಾಲ್ಕಿತ್ತಿದ್ದಾರೆ.

**ಜನರ ಆಕ್ರೋಶ:** ಪೊನ್ನಂಪೇಟೆ ತಾಲೂಕಿನಲ್ಲಿ ನಿರಂತರವಾಗಿ ಒಂಟಿ ಮನೆಗಳನ್ನು ಗುರಿಯಾಗಿಸಿಕೊಂಡು ಕಳ್ಳತನ ನಡೆಸಲಾಗುತ್ತಿದ್ದು, ಪೊಲೀಸ್ ಇಲಾಖೆ ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಂಟಿ ಮನೆಗಳ ಮಾಹಿತಿ ಇದ್ದವರಿಂದಲೇ ಇಂತಹ ಕಳ್ಳತನ ನಡೆಸಲು ಸಾಧ್ಯ. ಪೊಲೀಸರು ತಕ್ಷಣವೇ ಕಳ್ಳರನ್ನು ಪತ್ತೆ ಹಚ್ಚಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಕಳೆದ 2 ದಿನಗಳ ಹಿಂದೆಯಷ್ಟೇ ಎಸ್.ಗಂಗಮ್ಮ ಎಂಬವರ ಮನೆಯಲ್ಲಿ ಕಳ್ಳತನಕ್ಕೆ ವಿಫಲ ಯತ್ನ ನಡೆಸಲಾಗಿತ್ತು. ಮಾತ್ರವಲ್ಲದೇ ಬ್ಯಾಂಕ್‌ನ ಕಿಟಕಿ ಒಡೆದು ಸಿಸಿ ಕ್ಯಾಮರ ಹಾನಿಪಡಿಸಲಾಗಿದೆ. ಒಂದು ಕ್ಯಾಮರದಲ್ಲಿ ಕಳ್ಳನ ಮುಖ ಪತ್ತೆಯಾಗಿದ್ದರೂ, ಆತನ ಬಂಧನ ಮಾಡಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಮಾಚಿಮಾಡ ರವೀಂದ್ರ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

# ಅಪಘಾತ ತಡೆಗೆ ಹೆದ್ದಾರಿಗಳಲ್ಲಿ 'ಸೈನ್ ಬೋರ್ಡ್' ಅಳವಡಿಸಿ

### ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ವೆಂಕಟ್‌ರಾಜಾ ಸೂಚನೆ

ಮಡಿಕೇರಿ, ಜು.6– ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ರಾಷ್ಟ್ರೀಯ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಆಗಾಗ ಅಪಘಾತಗಳು ಸಂಭವಿಸುತ್ತಿದ್ದು, ಅಪಘಾತಗಳನ್ನು ತಡೆಯಲು ಅಗತ್ಯ ಇರುವ ಕಡೆಗಳಲ್ಲಿ 'ಸೈನ್‌ಬೋರ್ಡ್' (ಸೂಚನಾ ಫಲಕ) ಅಳವಡಿಸುವಂತೆ ಸಂಬಂಧಪಟ್ಟ ವಿಭಾಗದ ಎಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ 'ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ' ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೊಡಗು ಜಿಲ್ಲೆಗೆ ರಾಜ್ಯ, ಅಂತರ ರಾಜ್ಯಗಳಿಂದ ಲಕ್ಷಾಂತರ ಜನರು ಭೇಟಿ ನೀಡುತ್ತಾರೆ. ಸ್ಥಳೀಯರು ಸೇರಿದಂತೆ ಯಾರಿಗೂ ಯಾವುದೇ ರೀತಿ ತೊಂದರೆಯಾಗದಂತೆ ಗಮನಹರಿಸುವುದು ಅತ್ಯಗತ್ಯ. ಪ್ರತಿಯೊಬ್ಬರ ಜೀವ ಮುಖ್ಯವಾಗಿದ್ದು, ಆ ನಿಟ್ಟಿನಲ್ಲಿ ಅಪಘಾತ ತಡೆಯುವಲ್ಲಿ ಅಗತ್ಯ ಕ್ರಮವಹಿಸುವಂತೆ ತಾಕೀತು ಮಾಡಿದರು.

ರಾಷ್ಟ್ರೀಯ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಸೈನ್ ಬೋರ್ಡ್ ಅಳವಡಿಸುವ ಸಂಬಂಧ ಪೊಲೀಸ್ ಇಲಾಖೆಯಿಂದ ಸ್ಥಳದ ಮಾಹಿತಿ ಪಟ್ಟಿ ಪಡೆದು ಕೂಡಲೇ ಸೈನ್‌ಬೋರ್ಡ್‌ನ್ನು ಆದ್ಯತೆ ಮೇಲೆ ಅಳವಡಿಸುವಂತಾಗಬೇಕು ಎಂದು ಅವರು ಸೂಚಿಸಿದರು.



ಈಗಾಗಲೇ ಜಿಲ್ಲೆಯಲ್ಲಿ ಮಳೆ ಬಿರುಸು ಪಡೆದಿದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಮಳೆ ಜೊತೆಗೆ ಮಂಜು ಆವರಿಸುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಸೈನ್‌ಬೋರ್ಡ್ ಅಳವಡಿಸುವುದು, ಜೀಬ್ರಾ ಕ್ರಾಸ್ ಬರೆಸುವುದು, ರೈಲಿಂಗ್ಸ್ ನಿರ್ಮಾಣ ಅತ್ಯವಶ್ಯಕವಾಗಿದ್ದು, ಈ ಕಾರ್ಯವನ್ನು ತ್ವರಿತವಾಗಿ ಕೈಗೊಳ್ಳುವಂತೆ ಸಂಬಂಧಪಟ್ಟ ಎಂಜಿನಿಯರ್‌ಗಳಿಗೆ ವೆಂಕಟ್‌ರಾಜಾ ಅವರು ನಿರ್ದೇಶನ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಮಾತನಾಡಿ, ಕುಶಾಲನಗರದಿಂದ ಸಂಪಾಜೆವರೆಗೆ ಅಷ್ಟಾಗಿ ಸೂಚನಾ ಫಲಕಗಳು ಇಲ್ಲ. ಆದ್ದರಿಂದ ಅಗತ್ಯವಿರುವ ಕಡೆಗಳಲ್ಲಿ ಸೂಚನಾ ಫಲಕ ಅಳವಡಿಸಬೇಕು ಎಂದು ಹೇಳಿದರು. 'ರಾಷ್ಟ್ರೀಯ, ರಾಜ್ಯ ಹೆದ್ದಾರಿ ಸೇರಿದಂತೆ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗಿಡಗಂಟಿಗಳನ್ನು ಕಡಿದು ವಾಹನಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡುವಂತೆ ಕೆ.ರಾಮರಾಜನ್ ಅವರು ಸಲಹೆ ಮಾಡಿದರು.'

ಲೋಕೋಪಯೋಗಿ ಇಲಾಖೆಯ ಇಇ ಸಿದ್ದೇಗೌಡ, ಜಿ.ಪಂ. ಇಇ ಸುರೇಶ್ ಕುಮಾರ್, ಹೆದ್ದಾರಿ ವಿಭಾಗದ ಸಹಾಯಕ ಎಂಜಿನಿಯರ್ ಹನುಮಂತ ಅವರು ತಮ್ಮ ವ್ಯಾಪ್ತಿಯಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಕೂಡಲೇ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಕೆಎಸ್‌ಆರ್‌ಟಿಸಿ ಪುತ್ತೂರು ವಿಭಾಗದ ಮುಖ್ಯಸ್ಥರಾದ ಜಯಕರ ಶೆಟ್ಟಿ ಅವರು ರಸ್ತೆ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಬಸ್‌ಗಳಿಗೆ ವೇಗದ ಮಿತಿ ಅಳವಡಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಮಧುರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ಸತೀಶ್ ಕುಮಾರ್, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವ್ಯವಸ್ಥಾಪಕರಾದ ಗೀತಾ, ಕಾರ್ಮಿಕ ಇಲಾಖಾ ಅಧಿಕಾರಿ ಹರ್ಷವರ್ಧನ್, ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ನಯನ ಇತರರು ಇದ್ದರು.

## ಡಾ.ಬಾಬು ಜಗಜೀವನ್ ರಾಂ ಅವರ 37ನೇ ಪರಿನಿರ್ವಾಣ ದಿನ



ಮಡಿಕೇರಿ, ಜು.6– ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಹಸಿರುಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್‌ರಾಂ ಅವರ 37ನೇ ಪರಿನಿರ್ವಾಣ ಕಾರ್ಯಕ್ರಮವನ್ನು ಗುರುವಾರ ಸರಳವಾಗಿ ಆಚರಿಸಲಾಯಿತು.

ನಗರದ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರ ಕಚೇರಿಯಲ್ಲಿ ಡಾ.ಬಾಬು ಜಗಜೀವನ್ ರಾಂ ಅವರ ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು. ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು, ಬಾಬು ಜಗಜೀವನ್ ರಾಂ ಅವರು ಕೇಂದ್ರದಲ್ಲಿ ಆಹಾರ ಸಚಿವರಾಗಿ 'ಹಸಿರುಕ್ರಾಂತಿ' ಜಾರಿಗೊಳಿಸಿದರು ಎಂದು ಹೇಳಿದರು.

ಬಡವರ ಏಳಿಗೆಗೆ ಶ್ರಮಿಸಿದ ಬಾಬು ಜಗಜೀವನ್ ರಾಂ ಅವರು ಸಮಾಜದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ' ಎಂದು ಅವರು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಮಾತನಾಡಿ, ಆಹಾರ, ಕಾರ್ಮಿಕ, ರಕ್ಷಣಾ ಸಚಿವರಾಗಿ ಹಲವು ಮಹತ್ತರ ಕಾರ್ಯಗಳನ್ನು ಕೈಗೊಂಡು ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ನುಡಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್.ಸುಂದರರಾಜ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಸಿ.ರಂಗಧಾಮಯ್ಯ, ಐಟಿಡಿಪಿ ಇಲಾಖಾ ಅಧಿಕಾರಿ ಹೊನ್ನೇಗೌಡ, ಬಿಸಿಎಂ ಇಲಾಖೆ ಅಧಿಕಾರಿ ಮಂಜುನಾಥ್, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕ ಬಸಪ್ಪ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸದಾಶಿವ ಪಲ್ಲೇದ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಾಷಾ, ಇತರರು ಇದ್ದರು.

## ಆರ್ಜಿ ಗ್ರಾಪಂ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ಕಸದ ರಾಶಿ

### ವಿರಾಜಪೇಟೆ ಪುರಸಭೆ ವಿರುದ್ಧ ಗ್ರಾಮಸ್ಥರ ಆಕ್ರೋಶ



ವಿರಾಜಪೇಟೆ, ಜು.6– ವಿರಾಜಪೇಟೆ ಪುರಸಭೆಯಿಂದ ಸಮೀಪದ ಆರ್ಜಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪೆರುಂಬಾಡಿಯ ಬಳಿ ತ್ಯಾಜ್ಯಗಳನ್ನು ತಂದು ಸುರಿಯುತ್ತಿದ್ದು, ಬೀದಿನಾಯಿಗಳ ಹಾವಳಿ ಮತ್ತು ಸೊಳ್ಳೆ–ನೊಣಗಳ ಕಾಟ ಹೆಚ್ಚಾಗಿದೆ. ಇದರಿಂದ ಅಲ್ಲಿನ ನಿವಾಸಿಗಳು ಸಂಕಷ್ಟವನ್ನು ಅನುಭವಿಸುವಂತಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸ್ಥಳೀಯ ಆರ್ಜಿ ಗ್ರಾಮಸ್ಥರು ವಿರಾಜಪೇಟೆ ಪುರಸಭೆ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಿ ಕಸ ವಿಲೇವಾರಿ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಪ್ರತಿಭಟನೆಯ ಎಚ್ಚರಿಕೆ ನೀಡಿದರು.

ಈ ಸಂದರ್ಭ ಆರ್ಜಿ ಗ್ರಾಮಸ್ಥರಾದ ಬಿ.ಆರ್.ಅನಿಲ್ ಕುಮಾರ್ ಮಾತನಾಡಿ, ಕಸ ಹಾಕಲು ನಮ್ಮ ಅಭ್ಯಂತರವಿಲ್ಲ. ಸರಿಯಾದ ರೀತಿಯಲ್ಲಿ ಜನರಿಗೆ ತೊಂದರೆ ಆಗದಂತೆ ವಿಲೇವಾರಿ ಮಾಡುವುದು ಸೂಕ್ತ. ಈ ಹಿಂದೆ ಕಸ ಹಾಕಲು ಪೆರುಂಬಾಡಿಯಲ್ಲಿ 5 ಎಕರೆ ಜಾಗ ನೀಡಿ ಸರಿಯಾದ ರೀತಿಯಲ್ಲಿ ಕಸ ವಿಲೇವಾರಿ ಮಾಡುವಂತೆ ಆದೇಶಿಸಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಹಸಿ ಮೀನು ಹಾಗೂ ಕೋಳಿ ತ್ಯಾಜ್ಯಗಳನ್ನು ತಂದು ಸುರಿಯುತ್ತಿದ್ದಾರೆ ಎಂದರು.

ಬೀದಿನಾಯಿಗಳು ಈ ತ್ಯಾಜ್ಯಗಳನ್ನು ತಿಂದು ಎಲ್ಲೆಂದರಲ್ಲಿ ತಂದು ಹಾಕುತ್ತಿವೆ. ಇದರಿಂದ ಇಲ್ಲಿನ ಕುಡಿಯುವ ನೀರಿನ ತೆರೆದ ಬಾವಿ ಕಲುಷಿತಗೊಂಡು ಸಾಂಕ್ರಾಮಿಕ ರೋಗಗಳು ಹರಡುವ ಭಯ ಉಂಟಾಗಿದೆ. ಅದೇ ರಸ್ತೆ ಪಕ್ಕದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಇದ್ದು, ಇಲ್ಲಿನ ಮಕ್ಕಳು ಭಯದಿಂದ ಜೀವನ ಸಾಗಿಸುವಂತಾಗಿದೆ ಎಂದರು.

ಮನವಿ ಸ್ವೀಕರಿಸಿದ ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, ತ್ಯಾಜ್ಯ ವಿಲೇವಾರಿ ಯೋಜನೆಯ ವರದಿ ತಯಾರಾಗಿದ್ದು, ಇದಕ್ಕೆ ಒಂದು ತಂಡ ರಚಿಸಲಾಗಿದೆ. ಹಸಿ ಕಸ ಮತ್ತು ಒಣ ಕಸ ಹಾಗೂ ಪ್ಲಾಸ್ಟಿಕ್‌ಗಳನ್ನು ವಿಂಗಡಣೆ ಮಾಡಿ ಹಸಿ ಕಸವನ್ನು ಕಾಂಪೋಸ್ಟ್ ಗೊಬ್ಬರ ಮಾಡಲಾಗುವುದು. ನಗರದ ಸಾರ್ವಜನಿಕರು ಕಸ ಹಾಕುವ ಬಗ್ಗೆ ತಿಳಿದುಕೊಂಡು ಸಹಕಾರ ನೀಡಬೇಕು ಎಂದರು.

ಮನವಿ ಸಲ್ಲಿಸುವ ಸಂದರ್ಭ ಆರ್ಜಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಉಪೇಂದ್ರ ಗ್ರಾಮಸ್ಥರಾದ ಕೆ.ಸಿ.ಜನಾರ್ಧನ, ಬಿ.ಜಿ.ನಾಗೇಶ್, ಹೆಚ್.ಎ.ಸುರೇಶ್, ಜಿ.ಕೆ.ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

## ವಿಧಾನಸಭೆಯಲ್ಲಿ ಮಡಿಕೇರಿ ಜಿಲ್ಲಾಡಳಿತ ಭವನದ ತಡೆಗೋಡೆ ದುರವಸ್ಥೆ ಪ್ರಸ್ತಾಪ



ಮಡಿಕೇರಿ, ಜು.6– ಮಡಿಕೇರಿ ಜಿಲ್ಲಾಡಳಿತ ಭವನದ ಬಹುಕೋಟಿ ವೆಚ್ಚದ ತಡೆಗೋಡೆ ರಾಜ್ಯ ವಿಧಾನಸಭೆಯಲ್ಲೂ ಸದ್ದು ಮಾಡಿದೆ.

ಮಡಿಕೇರಿಯ ಜಿಲ್ಲಾಡಳಿತ ಭವನದ ಎದುರು ನಿರ್ಮಾಣಗೊಂಡಿರುವ ಬೃಹತ್ ತಡೆಗೋಡೆ ಕಾಮಗಾರಿ ಬಗ್ಗೆ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಮಡಿಕೇರಿ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ, ಸುಮಾರು ಏಳೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣಗೊಂಡ ಜಿಲ್ಲಾಡಳಿತ ಭವನದ ಬೃಹತ್ ತಡೆಗೋಡೆ ಮಳೆಯಿಂದಾಗಿ ಕುಸಿದು ಬೀಳುವ ಆತಂಕ ಎದುರಾಗಿದ್ದು, ಜಿಲ್ಲಾಧಿಕಾರಿಗಳ ಕಚೇರಿಗೂ ಅಪಾಯದ ಆತಂಕವಿದೆ. ಮಡಿಕೇರಿ–ಮಂಗಳೂರು ರಾಜ್ಯ ಹೆದ್ದಾರಿಯಲ್ಲಿ ನಿರ್ಮಾಣಗೊಂಡಿರುವ ಬೃಹತ್ ತಡೆಗೋಡೆ ಕಾಮಗಾರಿ ಕುರಿತು ತನಿಖೆ ಮಾಡಿ, ಸಂಬಂಧಿಸಿದ ಅಧಿಕಾರಿಗಳು, ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಾಸಕ ಡಾ.ಮಂಥರ್‌ಗೌಡ ಅವರು ಆಗ್ರಹಿಸಿದರು.

ಈ ಕುರಿತು ಪ್ರತಿಕ್ರಿಯಿಸಿದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಪ್ರತ್ಯೇಕವಾಗಿ ಚರ್ಚಿಸಿದ ಬಳಿಕ ಉತ್ತರ ನೀಡುವುದಾಗಿ ಹೇಳಿದರು. ಸುಮಾರು ಏಳೂವರೆ ಕೋಟಿ ರೂಪಾಯಿಗಳ ವೆಚ್ಚದ ತಡೆಗೋಡೆಗೆ ಬೃಹತ್ ಗಾತ್ರದ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಲಾಗಿತ್ತು. ಆದರೆ ಕಳೆದ ಎರಡು ದಿನಗಳ ಹಿಂದೆ ಸುರಿದ ಸಾಧಾರಣ ಮಳೆಗೆ ಬೃಹತ್ ಗಾತ್ರದ ಪ್ಲಾಸ್ಟಿಕ್ ಹೊದಿಕೆ ಅಲ್ಲಲ್ಲಿ ಹರಿದು ಹೋದ ಪರಿಣಾಮ ಉಕ್ಕಿ ಬರುತ್ತಿರುವ ಮಣ್ಣು ಮಿಶ್ರಿತ ಕೆಸರು ನೀರು ಆತಂಕ ಸೃಷ್ಟಿಸಿದ್ದು, ಹರಿದು ಹೋದ ಪ್ಲಾಸ್ಟಿಕ್ ಹೊದಿಕೆಯನ್ನು ದುರಸ್ತಿ ಪಡಿಸುವ ಕೆಲಸದಲ್ಲಿ ಕಾರ್ಮಿಕರು ತೊಡಗಿದ್ದರು.

# ಅಭಿವೃದ್ಧಿಗೋಸ್ಕರ ಪ್ರಕೃತಿ ನಾಶ ಸರಿಯಲ್ಲ

### ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



> ಮಕ್ಕಳಿಗೆ ಅರಣ್ಯ, ವನ್ಯಜೀವಿಗಳ ಬಗ್ಗೆ ಜ್ಞಾನ ತುಂಬುವ ಸಲುವಾಗಿ ಈ ಕೇಂದ್ರ ಸ್ಥಾಪಿಸಲಾಗಿದೆ. ಇದುವರೆಗೆ ಕೇಂದ್ರಕ್ಕೆ 12,500 ಮಂದಿ ಭೇಟಿ ನೀಡಿದ್ದಾರೆ. ಇವರಲ್ಲಿ 9,500 ಮಂದಿ ಸ್ಥಳೀಯ ವಿದ್ಯಾರ್ಥಿಗಳು, 500ಕ್ಕೂ ಅಧಿಕ ಅರಣ್ಯ ಇಲಾಖೆ ಸಿಬ್ಬಂದಿ ಅಧಿಕಾರಿಗಳು, 900 ಪ್ರವಾಸಿಗರು ಹಾಗೂ ಸ್ಥಳೀಯರು ಭೇಟಿ ನೀಡಿದ್ದಾರೆ.
>
> -ಸಂಜಯ್ ಗುಬ್ಬಿ, ಹೊಳೆಮತ್ತಿ ಪ್ರಕೃತಿ ಮಾಹಿತಿ ಕೇಂದ್ರದ ಸಂಸ್ಥಾಪಕ.

ಚಾಮರಾಜನಗರ, ಜು.6– ಅಭಿವೃದ್ಧಿಗೋಸ್ಕರ ಪ್ರಕೃತಿ ನಾಶ ಸರಿಯಲ್ಲ. ಅಭಿವೃದ್ಧಿ, ನಾಗರಿಕತೆ ಹಾಗೂ ಪ್ರಕೃತಿ ನಡುವೆ ಸಮತೋಲನ ಕಾಪಾಡಿಕೊಳ್ಳಬೇಕು ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಹನೂರು ತಾಲೂಕಿನ ಎಲ್ಲೆಮಾಳ ಬಳಿಯ ಹೊಳೆಮತ್ತಿ ಪ್ರಕೃತಿ ಮಾಹಿತಿ ಕೇಂದ್ರದ 5ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಅಭಿವೃದ್ಧಿಗಾಗಿ ಪ್ರಕೃತಿ ಮೇಲೆ ಅತಿಕ್ರಮಣ ಮಾಡಬಾರದು. ಅರಣ್ಯ ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಹೀಗಾಗಿ ಹೊಳೆಮತ್ತಿ ಪ್ರಕೃತಿ ಮಾಹಿತಿ ಕೇಂದ್ರದಂತಹ ಮಾಹಿತಿ ಕೇಂದ್ರಗಳ ಅಗತ್ಯವಿದೆ ಎಂದರು. ಉತ್ತಮ ಪರಿಸರದ ನಡುವೆ ಈ ಮಾಹಿತಿ ಕೇಂದ್ರವಿದೆ. ಕಟ್ಟಡ ಚಿಕ್ಕದಾದರೂ ಮಾಹಿತಿ ದೊಡ್ಡದಾಗಿದೆ. ಕೇಂದ್ರದಲ್ಲಿ ಪಶು– ಪ್ರಾಣಿಗಳ ಬಗ್ಗೆ ಮಾಹಿತಿ ಇದ್ದು, ಇದನ್ನು ತಿಳಿದುಕೊಳ್ಳುವುದು ಎಲ್ಲರ ಜವಾಬ್ದಾರಿ. ಪ್ರಕೃತಿ ಬಗ್ಗೆ ತಿಳಿದುಕೊಳ್ಳುವುದು ಅವಶ್ಯಕ ಎಂದು ತಿಳಿಸಿದರು.

ಪ್ರಾಣಿಗಳು ತಮ್ಮ ಆಹಾರವನ್ನು ಹುಡುಕಿಕೊಳ್ಳುತ್ತವೆ. ಹೀಗಾಗಿ ನಾವು ಕಾಡಿನ ರಸ್ತೆಗಳಲ್ಲಿ ಪ್ರಾಣಿಗಳಿಗೆ ಆಹಾರ ನೀಡಬಾರದು. ಯಾವುದೇ ಪ್ರಾಣಿ ಕೃತಕ ಪರಿಸರ ಇಷ್ಟಪಡುವುದಿಲ್ಲ. ಕೃತಕ ಪರಿಸರದಲ್ಲಿ ಇರುವವರು ಮನುಷ್ಯರು ಮಾತ್ರ. ಆದರೆ, ವನ್ಯಜೀವಿಗಳು ಹಾಗಲ್ಲ. ಆಯಾಯ ಕಾಲಕ್ಕೆ ಅನುಗುಣವಾಗಿ ಇತಂಹದೇ ಆಹಾರಬೇಕೆಂದು ಆಯ್ಕೆ ಮಾಡಿಕೊಳ್ಳುತ್ತವೆ. ಭಗವಂತನ ಸೃಷ್ಟಿ ವಿಸ್ಮಯವಾದದ್ದು, ಪಕ್ಷಿಗಳು ದೇಶದಿಂದ ದೇಶಕ್ಕೆ ವಲಸೆ ಹೋಗಿ ತನಗೆ ಅಗತ್ಯವಾದ ಪರಿಸರ ಆಯ್ಕೆ ಮಾಡಿಕೊಳ್ಳುತ್ತದೆ. ಮನುಷ್ಯ ಮಾತ್ರ ಪ್ರಕೃತಿ ನಿಯಮ ಮೀರುತ್ತಾನೆ ಎಂದು ವಿಷಾದಿಸಿದರು. ಮನುಷ್ಯ ತನ್ನ ವೈಯಕ್ತಿಕ ಆಸೆಗಳಿಗಾಗಿ ಕಾಡಿನ ಮೇಲೆ ದಾಳಿ ನಡೆಸಿ, ಒತ್ತುವರಿ ಮಾಡಿಕೊಳ್ಳುತ್ತಿದ್ದಾನೆ. ಇದು ನಿಲ್ಲಬೇಕು. ಅಭಿವೃದ್ಧಿಗಾಗಿ ಪ್ರಕೃತಿ ನಾಶ ಮಾಡುವುದು ಸರಿಯಲ್ಲ ಎಂದು ತಿಳಿಸಿದರು.

ಮಲೆ ಮಹದೇಶ್ವರ ವನ್ಯಜೀವಿ ಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಸಂತೋಷಕುಮಾರ್ ಮಾತನಾಡಿ, ಮಾಹಿತಿ ಕೇಂದ್ರದಿಂದ ಅರಣ್ಯ ಸಂರಕ್ಷಣೆಗೆ ಪೂರಕವಾಗಿದೆ. ಗುಬ್ಬಿ ಅವರು ಅರಣ್ಯ ಇಲಾಖೆಯೊಂದಿಗೆ ಬಾಂಧವ್ಯದಿಂದ ಇದ್ದು, ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದರು. ಕಾವೇರಿ ವನ್ಯಜೀವಿ ಧಾಮದ ಉಪ ಅರಣ್ಯ ಸಂರಕ್ಷಣಾಧಿಕಾರಿ ನಂದೀಶ್ ಮಾತನಾಡಿ, ಕಾವೇರಿ, ಮಹದೇಶ್ವರ ವನ್ಯಜೀವಿ ಧಾಮಗಳ ಆನೆಗಳ ಕಾರಿಡಾರ್ ಮಹತ್ವದ ಪಾತ್ರ ವಹಿಸುತ್ತದೆ. ವನ್ಯಜೀವಿಗಳ ಪ್ರಾಮುಖ್ಯತೆ ತಿಳಿಯಲು ಇಂತಹ ಮಾಹಿತಿ ಕೇಂದ್ರಗಳ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯಾಧಿಕಾರಿಗಳಾದ ಶಶಿಧರ್, ಅಂಕರಾಜ್ ಇತರರಿದ್ದರು. ಇದೇ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

## ಚಾ.ನಗರದಲ್ಲಿ ಬಾಬು ಜಗಜೀವನ್ ರಾಂ ಪುಣ್ಯಸ್ಮರಣೆ



ಚಾಮರಾಜನಗರ, ಜು.6– ಜಿಲ್ಲಾಡಳಿತ, ಜಿಪಂ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪ ಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 37ನೇ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಸ್.ಪೂವಿತಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ಅವರು ಜ್ಯೋತಿ ಬೆಳಗಿಸಿ ಡಾ.ಬಾಬು ಜಗಜೀವನ್ ರಾಂ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಲ್ಲಿಕಾರ್ಜುನ್ ಮಾತನಾಡಿ, ಡಾ.ಬಾಬು ಜಗಜೀವನ ರಾಂ ಅವರ ತತ್ವಾದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಂ ಅವರು ನೀಡಿರುವ ಸಂದೇಶಗಳನ್ನು ಪಾಲನೆ ಮಾಡಬೇಕು. ಅವರ ಸಂದೇಶಗಳು ಕಾನೂನಾತ್ಮಕ ಹಾಗೂ ಆಡಳಿತಾತ್ಮಕವಾಗಿ ಕಾರ್ಯ ನಿರ್ವಹಿಸಲು ಸಹಕಾರಿಯಾಗಿವೆ ಎಂದರು.

ಜಿಲ್ಲೆಯಲ್ಲಿ ಈ ಬಾರಿ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚಿನ ವಿದ್ಯಾರ್ಥಿಗಳು ವಸತಿ ಶಾಲೆಗಳಿಗೆ ಪ್ರವೇಶ ಪಡೆದಿದ್ದಾರೆ. ಸಮುದಾಯದ ವಿದ್ಯಾರ್ಥಿಗಳು ಸರ್ಕಾರದ ಸವಲತ್ತುಗಳನ್ನು ಸದುಪಯೋಗಪಡಿಸಿಕೊಂಡು ಆರ್ಥಿಕ ಮತ್ತು ಸಾಮಾಜಿಕವಾಗಿ ಬೆಳೆದು ದೇಶದ ಉನ್ನತ ಹುದ್ದೆ ಅಲಂಕರಿಸುವಂತಾಗಬೇಕು ಎಂದರು.

ಕಾರ್ಯಕ್ರಮಕ್ಕೂ ಮೊದಲು ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಜಿಲ್ಲಾಧಿಕಾರಿ ಎಸ್.ಪೂವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಇತರೆ ಗಣ್ಯರು ಮಾಲಾರ್ಪಣೆ ಮಾಡಿ ನಮಿಸಿದರು. ಜಿಲ್ಲಾಮಟ್ಟದ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆ



ಚಾಮರಾಜನಗರ, ಜು.6– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ನೀಡುವ ಪ್ರತಿಭಾ ಪುರಸ್ಕಾರಕ್ಕೆ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿರುವ ಜಿಲ್ಲೆಯ ಆರ್.ಸಿಂಚನಾ ಆಯ್ಕೆಯಾಗಿದ್ದಾರೆ. ಪ್ರಸಕ್ತ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಶೇ.90ರಷ್ಟು ಅಂಕ ಪಡೆದಿರುವ ಸಿಂಚನಾ ಜು.8ರಂದು ಉಡುಪಿಯಲ್ಲಿ ನಡೆಯುವ ಸಮಾರಂಭದಲ್ಲಿ ವಿಧಾನಸಭಾ ಸಭಾಪತಿ ಯು.ಟಿ.ಖಾದರ್ ಹಾಗೂ ಗಣ್ಯರಿಂದ ಪ್ರಶಸ್ತಿ ಮತ್ತು ನಗದು ಪುರಸ್ಕಾರವನ್ನು ಸ್ವೀಕರಿಸಲಿದ್ದಾರೆ. ಈಕೆ ಪತ್ರಕರ್ತ ರೇಣುಕೇಶ್ ಮತ್ತು ಸರೋಜಾ ದಂಪತಿ ದ್ವಿತಿಯ ಪುತ್ರಿ.

## ಗ್ರಾಪಂ ಉಪ ಚುನಾವಣೆ: ಅಧಿಸೂಚನೆ ಪ್ರಕಟ

ಚಾಮರಾಜನಗರ, ಜು.6– ಜಿಲ್ಲೆಯ ವಿವಿಧ ಗ್ರಾಪಂಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸುವ ಸಂಬಂಧ ಜಿಲ್ಲಾಧಿಕಾರಿ ಎಸ್.ಪೂವಿತಾ ಗುರುವಾರ ಅಧಿಸೂಚನೆ ಹೊರಡಿಸಿದ್ದಾರೆ.

ನಾಮಪತ್ರ ಸಲ್ಲಿಕೆಗೆ ಜು.12 ಕೊನೆ ದಿನ. ಜು.13ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಜು.15ರಂದು ಉಮೇದುವಾರಿಕೆ ಹಿಂಪಡೆಯಲು ಕಡೇ ದಿನ. ಮತದಾನ ಅವಶ್ಯವಿದ್ದರೆ ಜು.23ರಂದು ಬೆಳಗ್ಗೆ 7 ರಿಂದ ಸಂಜೆ 5ರವರೆಗೆ ನಡೆಸಲಾಗುತ್ತದೆ. ಮರು ಮತದಾನ ಅವಶ್ಯವಿದ್ದರೆ ಜು.25ರಂದು ಬೆಳಗ್ಗೆ 7 ರಿಂದ ಸಂಜೆ 5 ರವರೆಗೆ ಮತದಾನ ನಡೆಯಲಿದೆ. ಜು.26ರಂದು ಬೆಳಗ್ಗೆ 8 ರಿಂದ ಆಯಾ ತಾಲೂಕು ಕೇಂದ್ರಗಳಲ್ಲಿ ಮತಗಳ ಎಣಿಕೆ ಕಾರ್ಯ ನಡೆಯಲಿದ್ದು, ಅಂದೇ ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ.


ಚಾಮರಾಜನಗರ ತಾಲೂಕಿನ ಮಸಣಾಪುರ ಗ್ರಾಪಂನ ಚಾಟೀಪುರ (ಅನುಸೂಚಿತ ಪಂಗಡ ಮಹಿಳೆ), ಹೆಗ್ಗೋಠಾರ ಗ್ರಾಪಂನ ಹೆಗ್ಗೊಠಾರ ಕ್ಷೇತ್ರ (ಸಾಮಾನ್ಯ ಮಹಿಳೆ), ಹರವೆ ಗ್ರಾಪಂನ ಕೇತಹಳ್ಳಿ (ಅನುಸೂಚಿತ ಜಾತಿ ಮಹಿಳೆ), ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟ ಗ್ರಾಪಂನ ಯರಕನಗದ್ದೆ ಪೋಡು (ಅನುಸೂಚಿತ ಪಂಗಡ), ಗೌಡಹಳ್ಳಿ ಗ್ರಾಪಂನ ಟಿ. ಹೊಸೂರು (ಅನುಸೂಚಿತ ಜಾತಿ ಮಹಿಳೆ) ಹಾಗೂ ಕೊಳ್ಳೇಗಾಲ ತಾಲೂಕಿನ ಸಿದ್ದಯ್ಯನಪುರ ಗ್ರಾಪಂನ ಲಕ್ಕರಸನಪಾಳ್ಯ (ಅನುಸೂಚಿತ ಜಾತಿ ಮಹಿಳೆ), ಲಕ್ಕರಸನಪಾಳ್ಯ (ಸಾಮಾನ್ಯ) ಕ್ಷೇತ್ರಗಳಿಗೆ ಚುನಾವಣೆ ನಿಗದಿಯಾಗಿದೆ ಎಂದು ಜಿಲ್ಲಾಧಿಕಾರಿ ಎಸ್. ಪೂವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುರಿ, ಮೇಕೆ ಘಟಕಗಳಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.6– ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ 2023–24ನೇ ಸಾಲಿನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ಕುರಿ, ಮೇಕೆ ಘಟಕಗಳಿಗಾಗಿ ಅರ್ಜಿ ಆಹ್ವಾನಿಸಿದೆ. ಜಿಲ್ಲೆಯ ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ 18 ರಿಂದ 60 ವರ್ಷದ ಪರಿಶಿಷ್ಟ ಜಾತಿ, ಪಂಗಡದ ಸದಸ್ಯರು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿ ಅರ್ಜಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು ಜು.31ರೊಳಗಾಗಿ ನಗರದ ಬಿ.ರಾಚಯ್ಯ ಜೋಡಿ ರಸ್ತೆಯ ಪಶು ಆಸ್ಪತ್ರೆ ಆವರಣದಲ್ಲಿರುವ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

### ಅಸನೂರು ಬಳಿ ಆನೆಯೊಂದಿಗೆ ಸೆಲ್ಫಿ ತೆಗೆದುಕೊಂಡ

## ಇಬ್ಬರು ಪ್ರವಾಸಿಗರಿಗೆ ತಲಾ 10 ಸಾವಿರ ದಂಡ




ಚಾಮರಾಜನಗರ, ಜು.6– ಗಜರಾಜನೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡ ಇಬ್ಬರು ಪ್ರವಾಸಿಗರಿಗೆ ತಲಾ 10 ಸಾವಿರ ರೂ. ದಂಡ ವಿಧಿಸಿರುವ ಘಟನೆ ಚಾಮರಾಜನಗರ ಜಿಲ್ಲೆ ಗಡಿಯ ತಮಿಳುನಾಡಿನ ಅಸನೂರು ಬಳಿ ನಡೆದಿದೆ.

ತೆಲಂಗಾಣ ನಿಜಾಮ್‌ಪೇಟೆ ಮೂಲದ ದಿಲೀಪ್ ಕುಮಾರ್ (42) ಹಾಗೂ ಶ್ಯಾಂಪ್ರಸಾದ್(31) ದಂಡ ಕಟ್ಟಿರುವ ಪ್ರವಾಸಿಗರು. ಕಾರಿನಲ್ಲಿ ಬೆಂಗಳೂರು–ದಿಂಡಿಗಲ್ ರಾಷ್ಟ್ರೀಯ ಹೆದ್ದಾರಿ ಮೂಲಕ ಇವರು ಕೊಯಮತ್ತೂರಿಗೆ ತೆರಳುತ್ತಿದ್ದರು. ಈ ವೇಳೆ ಅಸನೂರು ಬಳಿ ಆನೆ ನಿಂತಿದ್ದನ್ನು ನೋಡಿದ್ದಾರೆ. ನಂತರ ಕಾರಿನಿಂದ ಇಳಿದು ಕಾಡಾನೆ ಸಮೀಪ ಹೋಗಿ ಸೆಲ್ಫಿ ಕ್ಲಿಕ್ಕಿಸಿಕೊಂಡಿದ್ದಾರೆ. ಈ ವೇಳೆ ಗಸ್ತು ತಿರುಗುತ್ತಿದ್ದ ತಮಿಳುನಾಡಿನ ಅರಣ್ಯ ಇಲಾಖೆ ಸಿಬ್ಬಂದಿ ಗಮನಿಸಿದ್ದು, ಇನ್ನೇನೂ ವಿಚಾರಿಸಬೇಕು ಎನ್ನುವಷ್ಟರಲ್ಲಿ ಕಾರು ಹತ್ತಿ ಪರಾರಿಯಾಗಿದ್ದರು. ಈ ಸಂಬಂಧ ಬಣ್ಣಾರಿ ಚೆಕ್‌ಪೋಸ್ಟ್‌ಗೆ ಸಿಬ್ಬಂದಿ ಮಾಹಿತಿ ನೀಡಿದ್ದರು. ಅಲ್ಲಿ ಕಾರನ್ನು ತಡೆದು ರಾಷ್ಟ್ರೀಯ ಹೆದ್ದಾರಿಯಲ್ಲಿ ಬೇಜಾವಾಬ್ದಾರಿ ತೋರಿದ ಇಬ್ಬರಿಗೂ ತಲಾ 10 ಸಾವಿರ ರೂ. ದಂಡ ವಿಧಿಸಿ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

## ಆದರ್ಶ ವಿದ್ಯಾಲಯ: ಆಯ್ಕೆ ಪಟ್ಟಿ ಪ್ರಕಟ

ಚಾಮರಾಜನಗರ, ಜು.6– ಚಾಮರಾಜನಗರದ ಮಲ್ಲಯ್ಯನಪುರದಲ್ಲಿರುವ ಆದರ್ಶ ವಿದ್ಯಾಲಯದಲ್ಲಿ 2023–24ನೇ ಸಾಲಿನ 6ನೇ ತರಗತಿ ಪ್ರವೇಶ ಸಂಬಂಧ 2ನೇ ಸುತ್ತಿನ ಆಯ್ಕೆಪಟ್ಟಿ ಪ್ರಕಟಿಸಲಾಗಿದೆ. ಈಗಾಗಲೇ ದಾಖಲಾತಿ ಆರಂಭವಾಗಿದ್ದು, ಜು. 13ರವರೆಗೂ ದಾಖಲಾತಿ ಮಾಡಿಕೊಳ್ಳಲಾಗುತ್ತದೆ ಎಂದು ವಿದ್ಯಾಲಯದ ಮುಖ್ಯ ಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಾದಪ್ಪನ ಹುಂಡಿಯಲ್ಲಿ 2.47 ಕೋಟಿ ಸಂಗ್ರಹ



ಚಾಮರಾಜನಗರ, ಜು.6– ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದ ಮಹದೇಶ್ವರ ದೇವಾಲಯದ ಹುಂಡಿಯಲ್ಲಿ 2.47 ಕೋಟಿ ರೂ. ಸಂಗ್ರಹವಾಗಿದೆ.

ಮಹದೇಶ್ವರ ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣದಲ್ಲಿ ನಡೆದ ಹುಂಡಿ ಎಣಿಕೆ ಕಾರ್ಯ ನಡೆಯಿತು. ಈ ವೇಳೆ 2,47,15,655 ರೂ., 77 ಗ್ರಾಂ ಚಿನ್ನ, 2ಕೆಜಿ 250 ಗ್ರಾಂ ಬೆಳ್ಳಿ ದೊರೆತಿದೆ ಎಂದು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಧಾರ್ ಕೇಂದ್ರ ತೆರೆಯಲು ಒತ್ತಾಯಿಸಿ ಪ್ರತಿಭಟನೆ




ಚಾಮರಾಜನಗರ, ಜು.6– ಜಿಲ್ಲಾದ್ಯಂತ ಸಾರ್ವಜನಿಕರ ಅನುಕೂಲಕ್ಕಾಗಿ ಹೆಚ್ಚು ಆಧಾರ್ ಕೇಂದ್ರಗಳನ್ನು ತೆರೆಯಬೇಕು ಎಂದು ಒತ್ತಾಯಿಸಿ ನಗರದಲ್ಲಿ ಜಿಲ್ಲಾ ಜನ ಹಿತಾಶಕ್ತಿ ಹೋರಾಟ ವೇದಿಕೆಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ತಾಲೂಕು ಕಚೇರಿ ಮುಂಭಾಗ ಸಮಾವೇಶಗೊಂಡ ಪ್ರತಿಭಟನಾಕಾರರು, ಆಧಾರ್ ಕೇಂದ್ರ ತೆರೆಯುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿ, ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಆಧಾರ್ ಕಾರ್ಡ್ ಪ್ರಮುಖವಾಗಿದೆ. ಸಾರ್ವಜನಿಕರು ಆಧಾರ್ ಕಾರ್ಡ್ ಹೊಸದಾಗಿ ಪಡೆಯಲು ಹಾಗೂ ತಿದ್ದುಪಡಿ ಮಾಡಿಸಲು, ಇನ್ನಿತರ ನ್ಯೂನತೆ ಸರಿಪಡಿಸಿಕೊಳ್ಳಲು ಆಧಾರ್ ಕೇಂದ್ರಕ್ಕೆ ಬರುತ್ತಾರೆ. ಆದರೆ, ಹೆಚ್ಚಿನ ಜನಸಂದಣಿ ಇರುವುದರಿಂದ ದಿನಗಟ್ಟಲೇ ಸರದಿ ಸಾಲಿನಲ್ಲಿ ನಿಂತು ಕಾಯುವಂತಾಗಿದೆ ಎಂದು ದೂರಿದರು.

ತಾಲೂಕು ಕಚೇರಿಯಲ್ಲಿ ದಿನಕ್ಕೆ ಕೇವಲ 35ರಿಂದ 40 ಜನರಿಗೆ ಮಾತ್ರ ತಿದ್ದುಪಡಿ, ಇನ್ನಿತರ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಅವಕಾಶವಿದೆ. ಇದರಿಂದ ಪ್ರತಿ ದಿನವೂ ಜನರು ಕೆಲಸ ಬಿಟ್ಟು ಅಲೆದಾಡುವ ಪರಿಸ್ಥಿತಿ ಎದುರಾಗಿದ್ದು, ತಾಲೂಕು ಕಚೇರಿಯಲ್ಲಿ ರುವ ಆಧಾರ್ ಕೇಂದ್ರದ ಕೌಂಟರ್‌ಗಳನ್ನು 5 ರಿಂದ 10ಕ್ಕೆ ಹೆಚ್ಚು ಮಾಡಬೇಕು. ಅಲ್ಲದೇ ಜಿಲ್ಲಾದ್ಯಂತ ಆಧಾರ್ ಕೇಂದ್ರಗಳನ್ನು ತೆರೆಯಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದ ರಾಜು, ಉಮ್ಮತ್ತೂರು ಸೋಮಣ್ಣ, ಮೂಡ್ಲು ಪುರ ನಾಗರಾಜು, ನಂದ ಕಿಶೋರ್, ಚಂದ್ರ ಕುಮಾರ್, ರವಿ, ಬಸವಣ್ಣ, ಕುಮಾರ ಇನ್ನಿತರರಿದ್ದರು.

ಒಂದನೇ ಪುಟದಿಂದ

## ಪೆನ್‌ಡ್ರೈವ್ ಸದನದಲ್ಲೇ ಎಲ್ಲರಿಗೂ ಕೇಳಿಸುತ್ತೇನೆ

ಪೆನ್‌ಡ್ರೈವ್ ಪ್ರದರ್ಶನ ಮಾಡಿದ್ದೀರಿ. ಗಣಿಗಾರಿ ವಿಚಾರದಲ್ಲೂ ಇದೇ ರೀತಿ ಆರೋಪ ಮಾಡಿದ್ದೀರಿ ಎಂದು ಏರಿದ ದನಿಯಲ್ಲಿ ಪ್ರಶ್ನಿಸಿದರು. ಅಷ್ಟೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ನಿಮ್ಮ ಹಣೆಬರ ಗೊತ್ತು ಸುಮ್ಮನೆ ಹೇಳುವುದಿಲ್ಲ. ನಿಮಗೆ ತನಿಖೆ ಮಾಡಿ ಕ್ರಮ ಕೈಗೊಳ್ಳುವ ತಾಕತ್ತು ಇದೆಯೇ ಎಂದು ಪ್ರಶ್ನಿಸಿದರು.

ನಿಮ್ಮ ಬಳಿ ದಾಖಲೆ ಸಾಕ್ಷ್ಯ ಇದ್ದರೆ ಪೆನ್‌ಡ್ರೈವ್ ಅನ್ನು ಸಭಾಧ್ಯಕ್ಷರಿಗೆ ಕೊಡಿ. ಗಾಳಿಯಲ್ಲಿ ಗುಂಡು ಹೊಡೆಯಬೇಡಿ ಎಂದು ಜಾರ್ಜ್ ತಿರುಗೇಟು ನೀಡಿದರು.

ಆಗ ಕುಮಾರಸ್ವಾಮಿ ಯಾವ ಮಂತ್ರಿಯ ಹೆಸರೂ ಹೇಳಿಲ್ಲ ಸಭಾಧ್ಯಕ್ಷರು ಒಪ್ಪುವುದಾದರೆ ಸದನದಲ್ಲೇ ಆಡಿಯೋ ಹಾಕಲಿ. 224 ಸದಸ್ಯರು ಅದನ್ನು ಗಮನಿಸಲಿ. ಇಂಧನ ಇಲಾಖೆ ವರ್ಗಾವಣೆ ಹೇಗಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಆಕ್ರೋಶಭರಿತವಾಗಿ ನುಡಿದರು. ಈ ನಡುವೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಸಾಕ್ಷ್ಯ ಇದ್ದರೂ ಮುಚ್ಚಿಡುವುದು ಅಪರಾಧ. ನೀವು ಸಾಕ್ಷ್ಯವನ್ನು ಒದಗಿಸಬೇಕು ಎಂದರು.

ಮತ್ತೆ ಮಾತನಾಡಿದ ಕುಮಾರಸ್ವಾಮಿ, ವರ್ಗಾವಣೆಗೆ ಸಂಬಂಧಿಸಿದಂತೆ ದಾಖಲೆಗಳಿದ್ದರೆ ಲೋಕಾಯುಕ್ತಕ್ಕೆ ಕೊಡಲಿ ಎಂದು ನಿಮ್ಮ ಉಪಮುಖ್ಯಮಂತ್ರಿಯವರೇ ಹೇಳಿದ್ದಲ್ಲವೇ. ನಾನು ಸಾಕ್ಷ್ಯ ಮುಚ್ಚಿಡುತ್ತಿದ್ದರೆ ನೀವು ಕೇಸು ಹಾಕಿ. ಯಾರು ಸತ್ತರೂ ಪರವಾಗಿಲ್ಲ, ಯಾರು ಬೇಕಾದರೂ ಆತ್ಮಹತ್ಯೆ ಮಾಡಿಕೊಳ್ಳಲಿ ಎಂಬುದು ನಿಮ್ಮ ಧೋರಣೆ ಎಂದು ಆರೋಪಿಸಿದರು. ಈ ಹಂತದಲ್ಲಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ಕುಮಾರಸ್ವಾಮಿ ಅವರು ಪ್ರಸ್ತಾಪಿಸಿರುವ ವಿಷಯ ತನಿಖೆಯಾಗಬೇಕೆಂಬುದು ನಮ್ಮ ಉದ್ದೇಶ. ಸತ್ಯಾಂಶ ಹೊರಬಂದು ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂದರು.

ಈ ಹಂತದಲ್ಲಿ ಆಡಳಿತ ಮತ್ತು ವಿರೋಧಪಕ್ಷಗಳ ಸದಸ್ಯರ ನಡುವೆ ಏರಿದ ದನಿಯಲ್ಲಿ ವಾಗ್ವಾದ ನಡೆದು ಸದನದಲ್ಲಿ ಗದ್ದಲ, ಗೊಂದಲಮಯ ವಾತಾವರಣ ಸೃಷ್ಟಿಯಾಯಿತು.

ಬಸನಗೌಡ ಪಾಟೀಲ್ ಯತ್ನಾಳ್ ಎದ್ದು ನಿಂತು ಮಾತನಾಡಲು ಮುಂದಾದಾಗ ಎಂ.ಬಿ.ಪಾಟೀಲ್ ಅವರು ಮುಖ್ಯಮಂತ್ರಿ ಹುದ್ದೆಗೆ 2,400 ಕೋಟಿ ರೂ. ಕೊಡಬೇಕೆಂದು ನೀವೇ ಹೇಳಿದ್ದೀರಿ. ಉಲ್ಟಾ ಹೊಡೆಯಬೇಡಿ ಎಂದು ಹೇಳಿದರು. ಇದು ಅವರನ್ನು ಸಿಟ್ಟಿಗೆಬ್ಬಿಸಿತು. ಯತ್ನಾಳ್ ಮತ್ತು ಆಡಳಿತ ಪಕ್ಷದ ಸದಸ್ಯರ ನಡುವೆ ಕೆಲ ಕಾಲ ವಾಗ್ವಾದ, ಮಾತಿನ ಚಕಮಕಿ ನಡೆಯಿತು. ಆಗ ಜಾರ್ಜ್ ಅವರು ನಿಮಗೆ ಇನ್ನೂ ವಿರೋಧ ಪಕ್ಷದ ನಾಯಕರ ಸ್ಥಾನ ಸಿಕ್ಕಿಲ್ಲ. ಕುಮಾರಸ್ವಾಮಿಯವರನ್ನೇ ಕೂರಿಸಿಕೊಳ್ಳಿ ಎಂದರು. ಆಗ ತೀವ್ರ ಆಕ್ಷೇಪ ಬಿಜೆಪಿ ಸದಸ್ಯರಿಂದ ವ್ಯಕ್ತವಾಗಿ ಯತ್ನಾಳ್ ಮತ್ತು ಕಾಂಗ್ರೆಸ್ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಯತ್ನಾಳ್ ಮಾತನಾಡಿ, ವಿರೋಧ ಪಕ್ಷದವರ ದನಿ ಅಡಗಿಸಬಾರದು. ಹೆಚ್ಚು ಅವಕಾಶ ಕೊಡಬೇಕು. ಮುಖ್ಯಮಂತ್ರಿಯವರ ಆಡಿಯೋವನ್ನು ಸಿಐಡಿಗೆ ಕೊಡಬೇಕು ಇಲ್ಲವೇ ಜಗತ್ತಿನ ಯಾವುದೇ ತನಿಖೆ ಮಾಡಿಸಿ ಎಂದರು. ಆಗ ಕಾಂಗ್ರೆಸ್‌ನ ಹಲವು ಸದಸ್ಯರು ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಒಂದು ಹಂತದಲ್ಲಿ ಕುಮಾರಸ್ವಾಮಿಯವರು ಗುತ್ತಿಗೆದಾರರಿಂದ ಶೇ.40ರಷ್ಟು ಕಮಿಷನ್ ಆರೋಪದ ಸಾಕ್ಷ್ಯವನ್ನು ಎಲ್ಲಿ ಒದಗಿಸಿದ್ದೀರಿ ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿಯವರು ಮಾತನಾಡುವ ವೇಳೆ ಕಾಂಗ್ರೆಸ್ ಶಾಸಕರು ಪದೇ ಪದೆ ಅಡ್ಡಿಪಡಿಸುತ್ತಿದ್ದರು. ಆಗ ಬಿಜೆಪಿಯ ಸುನಿಲ್‌ಕುಮಾರ್ ಎದ್ದು ನಿಂತು ಇದು ಕಮಿಷನ್ ಸರ್ಕಾರ, ಕೊಲೆಗಡುಕ ಸರ್ಕಾರ ಎಂದು ಗಂಭೀರ ಆರೋಪ ಮಾಡಿದರು.

ಇದನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಪ್ರತಿಭಟನೆ ನಡೆಸಿದ್ದಲ್ಲದೆ ಆಕ್ಷೇಪ ವ್ಯಕ್ತಪಡಿಸಿದರು. ಅದಕ್ಕೆ ಎದುರಾಗಿ ಬಿಜೆಪಿ ಸದಸ್ಯರು ಕೂಡ ಎದ್ದು ನಿಂತು ಘೋಷಣೆ ಕೂಗಿದ್ದಲ್ಲದೆ ಕಾಂಗ್ರೆಸ್ ಶಾಸಕರ ಧೋರಣೆಗಳನ್ನು ವಿರೋಧಿಸಿ ಸದಸ್ಯರ ಮುಂದಿನ ಬಾವಿಗಿಳಿದು ಧರಣಿ ನಡೆಸಿದರು. ಈ ಹಂತದಲ್ಲಿ ಮತ್ತೆ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಗದ್ದಲ, ಕೋಲಾಹಲ ಹೆಚ್ಚಾಗಿದ್ದರಿಂದ ಸಭಾಧ್ಯಕ್ಷರು ಭೋಜನ ವಿರಾಮಕ್ಕೆ ಕಲಾಪವನ್ನು ಮುಂದೂಡಿದರು.

### ವರ್ಗಾವಣೆ ದಂಧೆ ನಡೆಯುತ್ತಿದೆ

ಕ್ಷೇತ್ರದಲ್ಲಿ ನನ್ನ ವಿರುದ್ಧ ಇದ್ದ ಯಾವುದೇ ಅಧಿಕಾರಿಯನ್ನು ವರ್ಗಾವಣೆ ಮಾಡಲಿಲ್ಲ. ಆದರೆ ಇವರು ವಿರೋಧ ಪಕ್ಷದವರನ್ನು ಟಾರ್ಗೆಟ್ ಮಾಡಿ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತಿದ್ದಾರೆ ಎಂದು ಕುಮಾರಸ್ವಾಮಿ ದೂರಿದರು.

### ನನ್ನ ಆಸ್ತಿ ಬಗ್ಗೆ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ತನಿಖೆ ಮಾಡಿಸಲಿ

ನಾನು ಅಕ್ರಮ ಆಸ್ತಿ ಸಂಪಾದಿಸಿದ್ದರೆ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ತನಿಖೆ ಮಾಡಿಸಲಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದ್ದಾರೆ. ಕೆಲವು ಕಾಂಗ್ರೆಸ್ ನಾಯಕರು ನನ್ನ ಆಸ್ತಿ ಬಗ್ಗೆ ಲೆಕ್ಕ ಹಾಕುತ್ತಾರೆ. ನಾನು ಅಕ್ರಮ ಆಸ್ತಿ ಮಾಡಿದ್ದೇನೆ ಎಂದು ಆರೋಪ ಮಾಡುತ್ತಾರೆ. ನಾನು ಈ ಹಿಂದೆಯೂ ಹೇಳಿದ್ದೆ, ಈಗಲೂ ಹೇಳುತ್ತಿದ್ದೇನೆ. ನನ್ನ ಆಸ್ತಿಗಳ ಬಗ್ಗೆ ಬೇಕಿದ್ದರೆ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ತನಿಖೆ ಮಾಡಿಸಲಿ. ನನ್ನ ಯಾವ ಅಭ್ಯಂತರವಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ಕಾಂಗ್ರೆಸ್‌ನವರು ರಾಜಕಾರಣ ಮಾಡಲಿ. ಆದರೆ ಕೀಳು ಮಟ್ಟದ ರಾಜಕಾರಣ ಮಾಡಬಾರದು. ಮುಖ್ಯಮಂತ್ರಿ, ಮಂತ್ರಿ ಹಾಗೂ ಶಾಸಕ ಸ್ಥಾನ ಯಾರಿಗೂ ಶಾಶ್ವತ ಅಲ್ಲ ಎಂದು ಕಾಂಗ್ರೆಸ್ ನಾಯಕರಿಗೆ ಕಿವಿಮಾತು ಹೇಳಿದರು. ಬಿಜೆಪಿಯವರು ವಿರೋಧ ಪಕ್ಷದ ಸ್ಥಾನದಲ್ಲಿದ್ದಾರೆ. ನಾವು ಕೂಡ ವಿರೋಧ ಪಕ್ಷದ ಸ್ಥಾನದಲ್ಲಿದ್ದೇವೆ. ಬಿಜೆಪಿಯಲ್ಲಿ ವಿರೋಧ ಪಕ್ಷದ ನಾಯಕರಾಗುವ ಬಹಳಷ್ಟು ಸಮರ್ಥ ನಾಯಕರಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

### ಹಿರಿಯ ಪೊಲೀಸ್ ಅಧಿಕಾರಿಗಳಿಂದ ತನಿಖೆ

ಎಚ್.ಡಿ.ಕುಮಾರಸ್ವಾಮಿ ವಿಧಾನಸಭೆಯಲ್ಲಿ ಪಟ್ಟುಹಿಡಿದಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಇಡೀ ದಿನ ವಾದ–ಪ್ರತಿವಾದ ನಡೆದು ಕುಮಾರಸ್ವಾಮಿ ವಿರುದ್ಧ ಇಡೀ ಆಡಳಿತ ಪಕ್ಷ ತಿರುಗಿಬಿದ್ದರೂ ತಮ್ಮ ಪಟ್ಟು ಸಡಿಲಿಸಲಿಲ್ಲ. ಕುಮಾರಸ್ವಾಮಿ ಬೆಂಬಲಕ್ಕೆ ಬಿಜೆಪಿಯವರು ಕೈಜೋಡಿಸಿದ್ದು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿತು, ಸಚಿವರ ರಾಜೀನಾಮೆಗೆ ಒತ್ತಾಯಿಸಿ ಮೂರು ಬಾರಿ ಧರಣಿ ನಡೆಸಿದ್ದರಿಂದ ನಾಲ್ಕು ಬಾರಿ ಸದನವನ್ನು ಸಭಾಧ್ಯಕ್ಷರು ಮುಂದೂಡಿದ್ದರು. ಒಂದು ಹಂತದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಚಲುವರಾಯಸ್ವಾಮಿ ಸೇರಿದಂತೆ ಕೆಲವು ಕಾಂಗ್ರೆಸ್ ಸದಸ್ಯರು ಕುಮಾರಸ್ವಾಮಿ ವಿರುದ್ಧ ಮಾತಿನ ಚಕಮಕಿಗೆ ಇಳಿದು ಏಕವಚನದಲ್ಲೇ ಪರಸ್ಪರ ನಿಂದಿಸಿಕೊಂಡರು.

ಈ ಹಂತದಲ್ಲಿ ಸಭಾಧ್ಯಕ್ಷರು ಸದನವನ್ನು ಮುಂದೂಡಿ ತೆರೆಮರೆಯಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ಮುಖಂಡರೊಂದಿಗೆ ಚರ್ಚೆ ನಡೆಸಿದ ನಂತರ ಸರ್ಕಾರ ತನಿಖೆಗೆ ಒಪ್ಪಿದ್ದು, ಈ ನಿರ್ಧಾರದಿಂದ ತೃಪ್ತರಾದ ಕುಮಾರಸ್ವಾಮಿ ಧರಣಿಯನ್ನು ಹಿಂತೆಗೆದುಕೊಂಡರು.

ಇದಕ್ಕೂ ಮುನ್ನ, ಸದನದಲ್ಲಿ ವಿಷಯ ಪ್ರಸ್ತಾಪ ಮಾಡಿ, ಮಾತನಾಡಿದ ಕುಮಾರಸ್ವಾಮಿ, ನಾಗಮಂಗಲ ಡಿಪೋದಿಂದ ವರ್ಗಾವಣೆ ಮಾಡಿದ್ದರಿಂದ ಬೇಸರಗೊಂಡು ನಾಗರಾಜ್ ಅಲ್ಲಿಯೇ ವಿಷ ಕುಡಿದು ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದರು. ವಿಷ ಸೇವನೆಗೂ ಮುನ್ನ ಅವರು ಎರಡು ಪುಟಗಳ ಡೆತ್‌ನೋಟ್ ಬರೆದು 'ನನ್ನ ಸಾವಿಗೆ ಸಚಿವ ಚಲುವರಾಯಸ್ವಾಮಿ ಕಾರಣ' ಎಂದು ನಮೂದಿಸಿದ್ದರು. ವಿಷಯ ಪ್ರಸ್ತಾಪಿಸಲು ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ನಿಲುವಳಿ ಸೂಚನೆ ಕೋರಿದ್ದರು. ಇದೇ ಸಂದರ್ಭದಲ್ಲಿ ಬಿಜೆಪಿ ಶೂನ್ಯವೇಳೆಯಲ್ಲಿ ಪ್ರಸ್ತಾಪಕ್ಕೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿತ್ತು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ, ರಾಜಕೀಯ ದ್ವೇಷಕ್ಕಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು, ನಿರ್ವಾಹಕ ಕಂ ಚಾಲಕನನ್ನು ವರ್ಗಾವಣೆ ಮಾಡಿದ್ದರು. ಇದಕ್ಕೆ ನೊಂದು ಅವರು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ಆತ್ಮಹತ್ಯೆ ಯತ್ನಕ್ಕೂ ಮುನ್ನ ಬರೆದಿರುವ ಡೆತ್‌ನೋಟ್‌ನಲ್ಲಿ ಸಚಿವರ ಹೆಸರು ಬರೆದಿದ್ದಾರೆ. ಈ ಹಿಂದೆ ಹಲವು ಪ್ರಕರಣಗಳಲ್ಲಿ ಅಂದಿನ ಸಚಿವರಾದ ಕೆ.ಜೆ.ಜಾರ್ಜ್, ಕೆ.ಎಸ್.ಈಶ್ವರಪ್ಪ ಸೇರಿದಂತೆ ಕೆಲವು ಸಚಿವರು ರಾಜೀನಾಮೆ ನೀಡಿದ್ದಾರೆ. ಡೆತ್‌ನೋಟ್‌ನಲ್ಲೇ ಸಚಿವರ ಹೆಸರು ಪ್ರಸ್ತಾಪಗೊಂಡಿರುವುದರಿಂದ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಮತ್ತು ತನಿಖೆಯಾಗಬೇಕು ಎಂದಾಗ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಮುಂದುವರೆದು ಮಾತನಾಡಿದ ಕುಮಾರಸ್ವಾಮಿ, ಆತ್ಮಹತ್ಯೆಗೆ ಯತ್ನ ಪ್ರಕರಣ ನಡೆಯುತ್ತಿದ್ದಂತೆ ಆ ಚಾಲಕರ ವಿರುದ್ಧ ಸುಳ್ಳು ಆರೋಪ ಹೊರಿಸಿ, ಇಡೀ ಪ್ರಕರಣವನ್ನೇ ಮುಚ್ಚಿಹಾಕುವ ಯತ್ನ ನಡೆದಿದೆ. ತನಿಖೆ ಪೂರ್ಣಗೊಳ್ಳುವವರೆಗೂ ಸಚಿವರನ್ನು ಸಂಪುಟದಿಂದ ಕೈಬಿಡಬೇಕು, ಇಲ್ಲದಿದ್ದರೆ ಸಚಿವರು ಹಸ್ತಕ್ಷೇಪ ಮಾಡಿ ದಾಖಲೆಗಳನ್ನು ನಾಶಪಡಿಸುತ್ತಾರೆ ಎಂದು ನೇರ ಆರೋಪ ಮಾಡಿದರು. ಪ್ರಕರಣ ನಡೆದು 24 ಗಂಟೆ ಕಳೆದರೂ ಪೊಲೀಸರು ಇದುವರೆಗೂ ಎಫ್‌ಐಆರ್ ಹಾಕಿಲ್ಲ. ಕೇಳಿದರೆ, ಆತ್ಮಹತ್ಯೆಗೆ ಯತ್ನ ಮಾಡಿದ ವ್ಯಕ್ತಿ ಇನ್ನೂ ಸತ್ತಿಲ್ಲ ಎನ್ನುತ್ತಾರೆ ಎಂದರು.

ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆದು ಬಿಜೆಪಿ ಸದಸ್ಯರು ಧರಣಿಗೆ ಮುಂದಾದಾಗ ಸಭಾಧ್ಯಕ್ಷರು ಸದನವನ್ನು ಭೋಜನ ವಿರಾಮಕ್ಕೆ ಮುಂದೂಡಿದರು. ಮತ್ತೆ ಸದನ ಸೇರುತ್ತಿದ್ದಂತೆ ಕುಮಾರಸ್ವಾಮಿ, ವಿಷಯ ಮುಂದುವರೆಸಿ, ಸಚಿವರ ರಾಜೀನಾಮೆಗೆ ಆಗ್ರಹ ಪಡಿಸಿದರು.

ಚಾಲಕನ ಪತ್ನಿ ಅವರ ಗ್ರಾಮದ ಪಂಚಾಯತ್ ಸದಸ್ಯೆ. ಅವರು ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದಾರೆ. ಈಗ ಈ ಪಂಚಾಯತ್‌ಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯುತ್ತಿದೆ. ಅವರನ್ನು ತಮ್ಮ ಪಕ್ಷದ ಕಡೆ ಸೆಳೆದುಕೊಳ್ಳಲು ಪತಿಗೆ ವರ್ಗಾವಣೆಯಂತಹ ಕಿರುಕುಳ ನೀಡುತ್ತಿದ್ದು ಇದು ಆತ್ಮಹತ್ಯೆ ಯತ್ನಕ್ಕೆ ಕಾರಣವಾಗಿದೆ ಎಂದರು. ಈ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಚಲುವರಾಯಸ್ವಾಮಿ, ಈ ಪ್ರಕರಣಕ್ಕೂ, ನಮಗೂ ಸಂಬಂಧವಿಲ್ಲ. ನಾನು ಇದರಲ್ಲಿ ಹಸ್ತಕ್ಷೇಪ ಮಾಡಿಲ್ಲ. ವರ್ಗಾವಣೆಗೆ ಪತ್ರವನ್ನೂ ನೀಡಿಲ್ಲ. ರಾಜಕೀಯ ದ್ವೇಷದಿಂದ ಕುಮಾರಸ್ವಾಮಿ ನನ್ನ ಮೇಲೆ ಆರೋಪ ಮಾಡುತ್ತಿದ್ದು, ರಾಜೀನಾಮೆ ಕೊಡುವ ಅಗತ್ಯತೆಯೇ ಇಲ್ಲ ಎಂದರು. ಸಚಿವರ ಉತ್ತರದಿಂದ ಸಮಾಧಾನಗೊಳ್ಳದ ಜೆಡಿಎಸ್ ಸದಸ್ಯರು, ಸಚಿವರು ರಾಜೀನಾಮೆ ನೀಡಲೇಬೇಕೆಂದು ಆಗ್ರಹಿಸಿ, ಧರಣಿ ಕುಳಿತರು.

# ಉತ್ಪಾದನೆಯಲ್ಲಿ ಪರಿಸರ ಪೂರಕ ಪ್ರಕ್ರಿಯೆ ಇರಲಿ

## ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್‌ನ ಐಸಿಆರ್‌ಓ ನಿರ್ದೇಶಕ ಡಾ.ರಾಜೀವ್ ರಂಜನ್; 'ಉತ್ಪಾದಕತೆ ಮತ್ತು ಹಸಿರು ಬೆಳವಣಿಗೆಯಲ್ಲಿ ಕರ್ನಾಟಕದ ಸುಸ್ಥಿರತೆ' ಸಮಾವೇಶ

ಮೈಸೂರು,ಜು.6(ಪಿಎಂ)– ಉತ್ಪಾದನೆಯಲ್ಲಿ ಪರಿಸರದ ಮೇಲೆ ದುಷ್ಪರಿಣಾಮ ಉಂಟು ಮಾಡದಂತಹ ಮಾರ್ಗಗಳನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ಹೊಸ ತಂತ್ರಜ್ಞಾನ ಮತ್ತು ಸೃಜನಶೀಲತೆಗೆ ಆದ್ಯತೆ ನೀಡಬೇಕು. ಪರಿಸರಕ್ಕೆ ಪೂರಕವಾದ ಪ್ರಕ್ರಿಯೆಗೆ ಒತ್ತು ನೀಡಬೇಕು ಎಂದು ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್‌ನ ಐಸಿಆರ್‌ಓ ನಿರ್ದೇಶಕ ಡಾ.ರಾಜೀವ್ ರಂಜನ್ ಹೇಳಿದರು.



ಮೈಸೂರಿನ ಎಟಿಐನಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಉತ್ಪಾದಕತೆ ಮತ್ತು ಹಸಿರು ಬೆಳವಣಿಗೆಯಲ್ಲಿ ಕರ್ನಾಟಕದ ಸುಸ್ಥಿರತೆ' ಕುರಿತ ಸಮಾವೇಶವನ್ನು ಎನ್‌ಸಿಪಿ ಮಹಾನಿರ್ದೇಶಕ ಸುಂದೀಪ್ ಕುಮಾರ್ ನಾಯಕ್ ಉದ್ಘಾಟಿಸಿದರು.

ಮೈಸೂರಿನ ಆಡಳಿತ ತರಬೇತಿ ಸಂಸ್ಥೆಯ (ಎಟಿಐ) ಕಬಿನಿ ಸಂಕೀರ್ಣದ ಚಾಣಕ್ಯ ಹಾಲ್‌ನಲ್ಲಿ ಎಟಿಐ, ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್, ಇಂಡಿಯನ್ ಪೊಟ್ಯಾಶ್ ಲಿಮಿಟೆಡ್ ಸೇರಿದಂತೆ ವಿವಿಧ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 'ಉತ್ಪಾದಕತೆ ಮತ್ತು ಹಸಿರು ಬೆಳವಣಿಗೆಯಲ್ಲಿ ಕರ್ನಾಟಕದ ಸುಸ್ಥಿರತೆ' ಕುರಿತು ಗುರುವಾರ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಅವರು ಮಾತನಾಡಿದರು.

ಉತ್ಪಾದಕತೆ ಮತ್ತು ಹಸಿರು ಬೆಳವಣಿಗೆ ಉತ್ತೇಜಿಸಿ ಸುಸ್ಥಿರ ಭವಿಷ್ಯ ಕಾಯ್ದುಕೊಳ್ಳಲು ಸರ್ಕಾರ, ಖಾಸಗಿ ವಲಯ ಮತ್ತು ಸ್ಥಳೀಯರು ಒಟ್ಟಾಗಿ ಕೆಲಸ ಮಾಡಬೇಕು. ಯಾವುದೇ ಪ್ರದೇಶವಾದರೂ ಸ್ಥಳೀಯರು ಮತ್ತು ಪ್ರವಾಸಿಗರಲ್ಲಿ ಸುಸ್ಥಿರ ಬಳಕೆಯ ಮಾದರಿಗಳನ್ನು ಉತ್ತೇಜಿಸಬೇಕು. ಆ ಮೂಲಕ ತ್ಯಾಜ್ಯದ ಉತ್ಪಾದನೆ ತಗ್ಗಿಸಬೇಕು. ಇದರೊಂದಿಗೆ ನೀರು ಮತ್ತು ಇಂಧನ ಸಂರಕ್ಷಿಸುವ, ಪರಿಸರ ಸ್ನೇಹಿ ಉತ್ಪನ್ನಗಳನ್ನು ಬಳಸುವ ಮತ್ತು ಸೇವೆಯನ್ನು ಪಡೆಯುವಲ್ಲಿ ಇರುವ ಮಹತ್ವದ ಬಗ್ಗೆ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು.

ಪ್ರಕೃತಿ ಮತ್ತು ಸುಸ್ಥಿರ ಅಭಿವೃದ್ಧಿಯು ಪರಸ್ಪರ ಪೂರಕ ಸಂಬಂಧ ಹೊಂದಿವೆ. ತ್ಯಾಜ್ಯದ ಉತ್ಪಾದನೆ ಕಡಿಮೆಯಾದಷ್ಟು ಪರಿಸರದ ಮೇಲಿನ ಒತ್ತಡ ತಗ್ಗಲಿದೆ. ಹಿಂದೆ ಕೇವಲ ಅಭಿವೃದ್ಧಿ ಎಂಬುದೇ ಮುಖ್ಯ ಧ್ಯೇಯವಾಗಿತ್ತು. ಆದರೆ ಈಗ ಅಭಿವೃದ್ಧಿ ಕಲ್ಪನೆ ಬದಲಾಗಿದೆ. ಆರ್ಥಿಕಾಭಿವೃದ್ಧಿ ಜೊತೆಗೆ ಸುಸ್ಥಿರ ಅಭಿವೃದ್ಧಿ ಕೂಡ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ ಎಂದರು.

ಆವಿಷ್ಕಾರಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರವು ಹಲವು ಮಹತ್ವದ ಕಾರ್ಯಕ್ರಮಗಳನ್ನು ರೂಪಿಸಿದೆ. ಸ್ಟಾರ್ಟ್ ಅಪ್ ಇಂಡಿಯಾ, ಸ್ಮಾರ್ಟ್ ಸಿಟಿ ಮಿಷನ್, ಉಚ್ಚತಾರ್ ಆವಿಷ್ಕಾರ್ ಯೋಜನೆ ಸೇರಿದಂತೆ ಮೊದಲಾದ ಯೋಜನೆಗಳ ಮೂಲಕ ಉತ್ತೇಜನ ನೀಡುತ್ತಿದೆ. ಯುವ ಜನರ ಸಂಖ್ಯೆಯಲ್ಲಿ ಭಾರತ ಮುಂದಿರುವುದು ಅಭಿವೃದ್ಧಿಗೆ ಪೂರಕವಾದ ವಾತಾವರಣವಾಗಿದೆ ಎಂದು ತಿಳಿಸಿದರು.

**ಆರ್ಥಿಕತೆ ಬೆನ್ನೆಲುಬು:** ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಭಾರತದ ಆರ್ಥಿಕತೆಯ ಬೆನ್ನೆಲುಬು. ಇವು ಆರ್ಥಿಕತೆಯ ನಿರಂತರ ಬೆಳವಣಿಗೆಗೆ ಉತ್ತೇಜನ ನೀಡುತ್ತಿವೆ. ಉದ್ಯೋಗಾವಕಾಶ ಒದಗಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ಎರಡನೇ ಅತಿ ದೊಡ್ಡ ಉದ್ಯೋಗದಾತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ದೇಶವು 5 ಟ್ರಿಲಿಯನ್ ಡಾಲರ್ ಆರ್ಥಿಕತೆ ಸಾಧಿಸಬೇಕೆಂಬ ಸರ್ಕಾರದ ಕಾರ್ಯತಂತ್ರಕ್ಕೆ ಈ ಉದ್ಯಮಗಳ ಪಾತ್ರ ನಿರ್ಣಾಯಕ. ಈ ಉದ್ಯಮಗಳಿಗೆ ಸೂಕ್ತ ರೀತಿಯಲ್ಲಿ ಉತ್ತೇಜನ ನೀಡಿದರೆ 2030ರ ವೇಳೆಗೆ ಭಾರತದ ಜಿಡಿಪಿಗೆ ಇವುಗಳಿಂದ ಕನಿಷ್ಠ ಶೇ.40ರಷ್ಟು ಕೊಡುಗೆ ದೊರೆಯಲು ಸಾಧ್ಯವಿದೆ ಎಂದು ಹೇಳಿದರು.

ಕಲ್ಲಿದ್ದಲು ಮತ್ತು ತೈಲ ಭಾರತದ ಕೈಗಾರಿಕಾ ಬೆಳವಣಿಗೆಗೆ ತಳಹದಿಯಾಗಿವೆ. ಹೆಚ್ಚುತ್ತಿರುವ ಭಾರತೀಯ ಜನಸಂಖ್ಯೆಗೆ ಇಂಧನ ಸೇವೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಕಳೆದ ದಶಕದಲ್ಲಿ ಪ್ರತಿವರ್ಷ 10 ಲಕ್ಷ ನಾಗರಿಕರಿಗೆ ಹೊಸ ವಿದ್ಯುತ್ ಸಂಪರ್ಕ ಕಲ್ಪಿಸಲು ಇವು ಸಾಧ್ಯ ಮಾಡಿವೆ. ಭಾರತದಲ್ಲಿ ಶುದ್ಧ ಇಂಧನ ಪರಿವರ್ತನೆ ಈಗಾಗಲೇ ಉತ್ತಮವಾಗಿ ನಡೆಯುತ್ತಿದೆ. ಸೌರ ಮತ್ತು ಗಾಳಿ ಪಾಲು ಅಸಾಧಾರಣವಾಗಿದೆ ಎಂದು ಹೇಳಿದರು.

ಸಿಐಐ ಮೈಸೂರು ವಲಯದ ಅಧ್ಯಕ್ಷ ಸ್ಯಾಮ್ ಚೆರಿಯನ್ ಮಾತನಾಡಿ, ಪ್ರಸ್ತುತ ದೇಶದಲ್ಲಿ ಸರ್ಕಾರದ ಯೋಜನೆಗಳು ಸುಸ್ಥಿರ ಅಭಿವೃದ್ಧಿಗೆ ಪೂರಕವಾಗಿವೆ. ಅಂದಮಾತ್ರಕ್ಕೆ ನಾವು ಕೇವಲ ಸರ್ಕಾರದ ಮೇಲೆ ಅವಲಂಬಿತರಾಗಬಾರದು. ನಮ್ಮಿಂದಲೂ ಸುಸ್ಥಿರ ಅಭಿವೃದ್ಧಿಗೆ ಪೂರಕ ಪ್ರಕ್ರಿಯೆಗಳು ಅಗತ್ಯ. ಈ ನಿಟ್ಟಿನಲ್ಲಿ ಪರಿಸರ ಸ್ನೇಹಿ ತಂತ್ರಜ್ಞಾನ ಸದ್ಬಳಕೆ ಮಾಡಿಕೊಳ್ಳಬೇಕು. ಪರಿಸರ ಸ್ನೇಹಿ ಹೂಡಿಕೆಗಳಿಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಎನ್‌ಸಿಪಿ ಮಹಾನಿರ್ದೇಶಕ ಸುಂದೀಪ್ ಕುಮಾರ್ ನಾಯಕ್ ಉದ್ಘಾಟಿಸಿದರು. ವಿವಿಧ ವಿಷಯಗಳ ತಜ್ಞರು ವಿಚಾರ ಮಂಡಿಸಿದರು. ವಿವಿಧ ಉದ್ಯಮಗಳ ಪ್ರತಿನಿಧಿಗಳು, ಶಿಕ್ಷಣ ತಜ್ಞರು, ಎನ್‌ಜಿಓ ಪ್ರತಿನಿಧಿಗಳು, ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರು ಪಾಲ್ಗೊಂಡಿದ್ದರು. ಎಟಿಐ ಜಂಟಿ ನಿರ್ದೇಶಕ (ಆಡಳಿತ) ಡಾ.ಬಿ.ಸಿ.ಸತೀಶ್ ಮತ್ತಿತರರು ಹಾಜರಿದ್ದರು.

### ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ ಭಾರತ ಸಾಧನೆ...

ಜಾಗತಿಕ ಆವಿಷ್ಕಾರ ಸೂಚ್ಯಂಕದಲ್ಲಿ ಭಾರತ ಉತ್ತಮ ಸಾಧನೆ ಮಾಡಿದೆ. 2015ರಲ್ಲಿ 81ನೇ ಸ್ಥಾನದಲ್ಲಿದ್ದ ಭಾರತ, 2022ರಲ್ಲಿ 40ನೇ ಸ್ಥಾನ ಅಲಂಕರಿಸಿದೆ. 2018ರಲ್ಲಿ 57ನೇ ಸ್ಥಾನ, 2019ರಲ್ಲಿ 52ನೇ ಸ್ಥಾನ, 2021ರಲ್ಲಿ 46ನೇ ಸ್ಥಾನದಲ್ಲಿದ್ದ ಭಾರತ ಹಂತ ಹಂತವಾಗಿ ಸುಧಾರಣೆಯತ್ತ ದಾಪುಗಾಲು ಇರಿಸಿದೆ.

-ಡಾ.ರಾಜೀವ್ ರಂಜನ್

## ಜು. 9ರಂದು ಮಹಿಳಾ ಉದ್ದಿಮೆ ಉತ್ಪನ್ನಗಳ ಪ್ರದರ್ಶನ, ಮಾರಾಟ



ಮೈಸೂರು,ಜು.6(ಜಿಎ)– ಮಹಿಳಾ ಉದ್ದಿಮೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಮಹಿಳಾ ಸಮನ್ವಯ ವೇದಿಕೆ ವತಿಯಿಂದ ಜು.9 ರಂದು ಆಯೋಜಿಸಲಾಗಿದೆ ಎಂದು ವೇದಿಕೆಯ ಸಹ ಸಂಚಾಲಕಿ ಲಾವಣ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಗೋಪಾಲಸ್ವಾಮಿ ಶಿಶುವಿಹಾರ ಶಾಲೆಯ ಆವರಣದಲ್ಲಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಿದ್ದು, ಬೆಳಗ್ಗೆ 9.30ಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಅವರು ಚಾಲನೆ ನೀಡಲಿದ್ದಾರೆ ಎಂದರು.

ಸ್ತ್ರೀಯರಲ್ಲಿ ರಾಷ್ಟ್ರೀಯ ಚಿಂತನೆ ಮತ್ತು ಮಹಿಳಾ ಸಬಲೀಕರಣದ ಉದ್ದೇಶದೊಂದಿಗೆ ವೇದಿಕೆ ಆರಂಭವಾಗಿದ್ದು, ಈಗಾಗಲೇ ಮೇಳಗಳನ್ನು ಮಾಡಿ ಯಶಸ್ಸು ಕಂಡಿದೆ. ಬೆಳಗ್ಗೆ 9 ರಿಂದ 4 ಗಂಟೆಯವರೆಗೆ ನಡೆಯಲಿದೆ. ಮೇಳದಲ್ಲಿ ಕುಂದನ್ ವರ್ಕ್, ಕಲಾ ಮತ್ತು ಕರಕುಶಲ ಉತ್ಪನ್ನಗಳು, ಡ್ರೆಸ್ ಮೆಟೀರಿಯಲ್‌ಗಳು, ಸೀರೆಗಳು, ಬೇಕರಿ ಉತ್ಪನ್ನಗಳು, ರೆಡಿ ಟು ಈಟ್ ಉತ್ಪನ್ನಗಳು, ಆಹಾರ ಮಳಿಗೆ ಇತ್ಯಾದಿಗಳಂತಹ ವಿವಿಧ ಉತ್ಪನ್ನಗಳು ಪ್ರದರ್ಶನ ಮತ್ತು ಮಾರಾಟ ಮಳಿಗೆಯಲ್ಲಿ ದೊರೆಯಲಿದೆ. ಈಗಾಗಲೇ 32 ಮಹಿಳಾ ಉದ್ದಿಮೆದಾರರು ನೋಂದಾಯಿಸಿಕೊಂಡಿದ್ದಾರೆ ಎಂದರು.

ಹೆಚ್ಚುವರಿ ಆಕರ್ಷಣೆಯಾಗಿ ಶಾಲಾ ಮಕ್ಕಳಿಗೆ ನೋಂದಣಿ ಶುಲ್ಕ 50 ರೂ.ಗಳೊಂದಿಗೆ ಚಿತ್ರಕಲೆ ಸ್ಪರ್ಧೆಯನ್ನು ಹಮ್ಮಿಕೊಂಡಿದ್ದು, ಚಿತ್ರಕಲಾ ಸ್ಪರ್ಧೆಯು ಬೆಳಗ್ಗೆ 11 ರಿಂದ ಮಧ್ಯಾಹ್ನ 12:30 ರವರೆಗೆ ನಡೆಯಲಿದೆ. ಎಲ್.ಕೆಜಿ ಮತ್ತು ಯು.ಕೆಜಿ ಮಕ್ಕಳಿಗೆ ಚುಕ್ಕಿಗಳನ್ನು ಜೋಡಿಸುವುದು ಮತ್ತು ಬಣ್ಣ ತುಂಬುವುದು. 1 ರಿಂದ 10 ನೇ ತರಗತಿಯ ವಿದ್ಯಾರ್ಥಿಗಳಿಗೆ "ತಾಯಿ ಭೂಮಿಯನ್ನು ಉಳಿಸಿ" ಎಂಬ ವಿಷಯ ಆಧರಿಸಿ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು. ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಅಧ್ಯಕ್ಷತೆಯನ್ನು ಸಾಮಾಜಿಕ ಕಾರ್ಯಕರ್ತೆ ಚೆಲುವಾಂಬಿಕೆ, ಸಾಧನಾ ತಂತ್ರಿಯವರು ವಹಿಸಲಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9886227216 ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಹಿಳಾ ಸಮನ್ವಯ ವೇದಿಕೆಯ ಮಮತಾ ಕಿಣಿ, ಲಕ್ಷ್ಮಿ ಉಪಸ್ಥಿತರಿದ್ದರು.

## ಜು.9ಕ್ಕೆ ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಕಾರ್ಯಕ್ರಮ



ಮೈಸೂರು, ಜು.6(ಜಿಎ)–ಮೈಸೂರಿನ ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಶತಮಾನೋತ್ಸವ ಕಾರ್ಯಕ್ರಮವನ್ನು ಜು.9ರಂದು ಆಯೋಜಿಸಲಾಗಿದೆ ಎಂದು ಬ್ಯಾಂಕ್‌ನ ಅಧ್ಯಕ್ಷರಾದ ಎನ್.ಶ್ರೀನಿವಾಸ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಜೆಕೆಮೈದಾನದಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದು, ಬೆಳಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಬ್ಯಾಂಕ್‌ನ ಸ್ಮರಣ ಸಂಚಿಕೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಡುಗಡೆ ಮಾಡಲಿದ್ದು, ಬ್ಯಾಂಕ್‌ನ ಮಾಜಿ ಅಧ್ಯಕ್ಷರನ್ನು ಸಹಕಾರ ಮಂತ್ರಿ ಕೆ.ಎನ್.ರಾಜಣ್ಣ ಸನ್ಮಾನಿಸಲಿದ್ದಾರೆ. ಹಾಗೇ ಮುಖ್ಯ ಅತಿಥಿಗಳಾಗಿ ಮೈಸೂರಿನ ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್ ಮತ್ತು ಪ್ರತಾಪ್ ಸಿಂಹ ಭಾಗವಹಿಸಲಿದ್ದಾರೆ ಎಂದರು.

ಮೈಸೂರು ವಿವಿಯ ಉಪಕುಲಪತಿಗಳಾಗಿದ್ದ ಪ್ರೊ.ಎನ್.ಎಸ್.ಸುಬ್ಬರಾವ್ ಅವರ ಅಧ್ಯಕ್ಷತೆಯಲ್ಲಿ 1932ರಲ್ಲಿ ಬ್ಯಾಂಕ್ ನಗರದ ಚಾಮರಾಜ ಜೋಡಿ ರಸ್ತೆಯಲ್ಲಿ ಪ್ರಾರಂಭವಾಯಿತು. ಅಂದು ಕೇವಲ 87 ಸದಸ್ಯರನ್ನು ಹೊಂದಿದ್ದು, ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇರಿದಂತೆ ಇಂಜಿನಿಯರ್‌ಗಳು, ವೈದ್ಯರು, ಉಪನ್ಯಾಸಕರು, ಉನ್ನತ ಅಧಿಕಾರಿಗಳು ಸೇರಿದಂತೆ ನಗರದ ಬಹುತೇಕ ಪ್ರತಿನಿಧಿಗಳು ಬ್ಯಾಂಕ್‌ನ ಸದಸ್ಯರಾಗಿದ್ದು, ಪ್ರಸ್ತುತ 13808 ಸದಸ್ಯರನ್ನು ಹೊಂದಿದ್ದು, 2,83,11,108 ರೂ. ಷೇರು ಮೊಬಲಗನ್ನು ಹೊಂದಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಆರ್.ಅನಂತರಾಮು, ಸಮಿತಿ ಸದಸ್ಯರಾದ ಕೆ.ಜಿ.ಸತೀಶ್, ಟಿ.ಎಸ್.ರವಿ ಶಂಕರ್, ಸುಜಾತ ವೆಂಕಟರಾಜು, ಸುಜಾತ ಎನ್.ರಾವ್, ಪಿ.ಕಮಲಮ್ಮ ಮತ್ತು ಎಂ.ಎಸ್. ರಾಜಾರಾಂ ಉಪಸ್ಥಿತರಿದ್ದರು.

## ಸಂಚಾರ ನಿಯಮ ಉಲ್ಲಂಘನೆ ಪ್ರಕರಣ: ಶೇ.50ರಷ್ಟು ದಂಡ ಪಾವತಿಗೆ ನೀರಸ ಪ್ರತಿಕ್ರಿಯೆ

ಮೈಸೂರು,ಜು.6 (ಎಂಟಿವೈ)– ಸಂಚಾರ ನಿಯಮ ಉಲ್ಲಂಘಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶೇ.50ರಷ್ಟು ದಂಡ ಪಾವತಿಸುವ ರಿಯಾಯಿತಿ ಸೌಲಭ್ಯ ಪಡೆಯಲು ಮೊದಲ ದಿನವಾದ ಗುರುವಾರ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿ, ಇ–ಚಲನ್‌ನಲ್ಲಿ 2023ರ ಫೆ.11ರವರೆಗೆ ದಾಖಲಾಗಿರುವ ಇತ್ಯರ್ಥಪಡಿಸಬಹುದಾದ ಪ್ರಕರಣಗಳಿಗೆ ಮಾತ್ರ ಅನ್ವಯವಾಗುವಂತೆ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲು ನಿರ್ಧರಿಸಿ ಆದೇಶ ಹೊರಡಿಸಿದೆ. ಶೇ.50ರಷ್ಟು ರಿಯಾಯಿತಿ ದಂಡ ಪಾವತಿಸಲು ಸೆ.9ರವರೆಗೆ ಕಾಲಾವಕಾಶ ನೀಡಲಾಗಿದೆ. ಮೈಸೂರಿನ ಎಲ್ಲಾ ಸಂಚಾರ ಠಾಣೆಗಳಲ್ಲಿ ದಂಡ ಪಾವತಿಸಲು ಅವಕಾಶ ನೀಡಲಾಗಿತ್ತು.

ಅದು ಮಾತ್ರವಲ್ಲದೇ, ಪೊಲೀಸ್ ಆಯುಕ್ತರ ಕಚೇರಿಯ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸೆಂಟರ್, ತಪಾಸಣೆ ಮಾಡುವ ಸ್ಥಳಗಳಲ್ಲಿ ಹಾಗೂ ಕರ್ನಾಟಕ ಒನ್ ಅಪ್ಲಿಕೇಷನ್ ಮೂಲಕವೂ ರಿಯಾಯಿತಿ ದಂಡ ಪಾವತಿಸಲು ಅವಕಾಶ ನೀಡಲಾಗಿತ್ತು ರಿಯಾಯಿತಿಗೆ ನೀಡಿರುವ ಅವಕಾಶ ಬಳಸಿಕೊಳ್ಳುವ ನಿಟ್ಟಿನಲ್ಲಿ ದಂಡ ಪಾವತಿದಾರರು ಹಿಂದೇಟು ಹಾಕಿದಂತೆ ಕಂಡುಬಂದಿತು. ಎಲ್ಲಾ ಠಾಣೆಗಳಲ್ಲಿ ದಂಡ ಪಾವತಿಸಿಕೊಳ್ಳಲು ಸಿಬ್ಬಂದಿಗಳು ಕಾಯುತ್ತಿದ್ದರೂ, ದಂಡ ಪಾವತಿಸಲು ಬಂದವರ ಸಂಖ್ಯೆ ಬೆರಳೆಣಿಕೆಯಷ್ಟಿತ್ತು.

ಮೈಸೂರಲ್ಲಿ ಬೆಳಗ್ಗಿನಿಂದ ಎಡೆಬಿಡದೆ ಜಿಟಿಜಿಟಿ ಮಳೆ ಸುರಿಯುತ್ತಿದ್ದ ಕಾರಣ ದಂಡ ಪಾವತಿಸಲು ಜನ ಠಾಣೆಗಳಿಗೆ ಬರಲು ಹಿಂದೇಟು ಹಾಕಿದಂತೆ ಕಂಡುಬಂದಿತು. ವಿವಿಧ ಸ್ಥಳಗಳಲ್ಲಿ ವಾಹನ ತಪಾಸಣೆ ಮಾಡುವಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿರಲಿಲ್ಲ. ಹಾಗಾಗಿ ಠಾಣೆಯ ಹೊರಗೆ ತಪಾಸಣೆ ವೇಳೆ ಸಂಗ್ರಹಿಸ ಬಹುದಾದ ದಂಡಕ್ಕೂ ಹಿನ್ನಡೆಯಾಯಿತು. ಆಷಾಢ ಮೂರನೇ ಶುಕ್ರವಾರದ ಹಿನ್ನೆಲೆಯಲ್ಲಿ ಪೊಲೀಸರು ಭದ್ರತಾ ಕಾರ್ಯದಲ್ಲಿ ನಿರತರಾಗುವುದರಿಂದ ದಂಡ ಸಂಗ್ರಹಿಸುವ ಪ್ರಕ್ರಿಯೆ ನಿರೀಕ್ಷಿತ ಮಟ್ಟದಲ್ಲಿ ನಡೆಯುವುದಿಲ್ಲ. ಶನಿವಾರದಿಂದ ಪೂರ್ಣ ಪ್ರಮಾಣದಲ್ಲಿ ದಂಡ ಸಂಗ್ರಹ ಪ್ರಕ್ರಿಯೆ ನಡೆಸಲು ಸಂಚಾರ ಪೊಲೀಸರು ಮುಂದಾಗಲಿದ್ದಾರೆ.

## ಅರಣ್ಯವಾಸಿ, ಬುಡಕಟ್ಟು ಸಮುದಾಯಗಳ ವಲಸೆ ಕುರಿತು ಅಧ್ಯಯನ

ಮೈಸೂರು, ಜು.6– ಮೈಸೂರು ಮತ್ತು ಕೊಡಗು ಜಿಲ್ಲೆಗಳ ಅರಣ್ಯವಾಸಿ ಹಾಗೂ ಬುಡಕಟ್ಟು ಸಮುದಾಯಗಳ ವಲಸೆ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ.

ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಆದೇಶದನ್ವಯ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಸಂಶೋಧನಾ ಅಧ್ಯಯನ ನಡೆಸಲಾಗುತ್ತಿದ್ದು, ಇದಕ್ಕೆ ಕ್ಷೇತ್ರ ಸಂಶೋಧಕ ಡಾ.ಎ.ಪಿ.ಮಧುಸೂದನ್ ನೇತೃತ್ವದ ತಂಡವನ್ನು ನಿಯೋಜಿಸಲಾಗಿದೆ. ಸಾರ್ವಜನಿಕರು, ಬುಡಕಟ್ಟು ಸಮುದಾಯದ ಮುಖಂಡರು, ಕೊಡಗಿನ ಕಾಫಿ ತೋಟದ ಮಾಲೀಕರು ಅಧಿಕಾರಿಗಳಿಗೆ ಸೂಕ್ತ ಮಾಹಿತಿ ಹಾಗೂ ಅಗತ್ಯ ದಾಖಲೆ ಪ್ರಸ್ತುತಪಡಿಸುವ ಮೂಲಕ ಅಧ್ಯಯನಕ್ಕೆ ಸಹಕರಿಸುವಂತೆ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

### ಸಿಎಫ್‌ಟಿಆರ್‌ಐನಲ್ಲಿ ಮುಕ್ತ ದಿನ

## ಸಿರಿಧಾನ್ಯ, ನಾನಾ ಆಹಾರ ತಯಾರಿಕಾ ವಿಧಾನ ವಸ್ತು ಪ್ರದರ್ಶನ







ಮೈಸೂರು, ಜು. 6 (ಆರ್‌ಕೆ)– ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಇಂದಿನಿಂದ ಎರಡು ದಿನಗಳ ಮುಕ್ತ ದಿನ (ಓಪನ್ ಡೇ) ಆರಂಭವಾಯಿತು.

ಮೈಸೂರಿನ ಹಲವು ಶಾಲಾ–ಕಾಲೇಜು ವಿದ್ಯಾರ್ಥಿಗಳು ಸಿಎಫ್‌ಟಿಆರ್‌ಐನಲ್ಲಿ ಆಯೋಜಿಸಿರುವ ಸಿರಿಧಾನ್ಯ ಆಹಾರ ತಯಾರಿಕಾ ಯಂತ್ರಗಳು, ಸಂಶೋಧನಾ ಪ್ರಯೋಗಗಳ ವಸ್ತು ಪ್ರದರ್ಶನ ವೀಕ್ಷಿಸಿ ಸಂಭ್ರಮಿಸಿದರಲ್ಲದೆ, ದೋಸೆ, ಅಕ್ಕಿ ರೊಟ್ಟಿ, ಜೋಳದ ರೊಟ್ಟಿ ಸವಿದು ಆನಂದಿಸಿದರು. ಸಿಎಫ್‌ಟಿಆರ್‌ಐನಲ್ಲಿ ನಡೆಯುವ ಆಹಾರ ತಯಾರಿಕಾ ಪ್ರಕ್ರಿಯೆ ಮತ್ತು ವೈಜ್ಞಾನಿಕ ಆಹಾರ ಸಂಶೋಧನಾ ಪ್ರಯೋಗ ಶಾಲೆಯ ವಿಶೇಷತೆಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿ ಮಾಹಿತಿ ಪಡೆದುಕೊಂಡರು.

'ಒನ್ ಲ್ಯಾಬ್ –ಒನ್ ವೀಕ್' ಕಾರ್ಯಕ್ರಮದಡಿ ಆಯೋಜಿಸಿರುವ ಮುಕ್ತ ದಿನಾಚರಣೆಯಲ್ಲಿ ಜೈವಿಕ ತಂತ್ರಜ್ಞಾನ, ಆಹಾರ ತಯಾರಿಕೆ, ಸಂಸ್ಕರಣೆ, ಹೊಸ ತಂತ್ರಜ್ಞಾನ, ಆಹಾರ ಕಲಬೆರಕೆ ಪತ್ತೆ ಮಾಡುವ ಕ್ರಮಗಳ ಬಗ್ಗೆಯೂ ವಸ್ತು ಪ್ರದರ್ಶನದಲ್ಲಿ ತಂತ್ರಜ್ಞರು ಪ್ರಾತ್ಯಕ್ಷಿಕೆ ನೀಡುತ್ತಿದ್ದು, ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡುತ್ತಿದ್ದಾರೆ.

ಹಾಲಿನಲ್ಲಿ ಕೊಬ್ಬಿನಾಂಶ ಮತ್ತು ಉಷ್ಣಾಂಶ ಕಂಡು ಹಿಡಿದು ಕಲಬೆರಕೆ ಪತ್ತೆ ಮಾಡಲು ಫ್ಯಾಟೋ ಮೀಟರ್ ತಯಾರಿಸಿರುವ ಸಿಎಫ್‌ಟಿಆರ್‌ಐ ವಿಜ್ಞಾನಿಗಳು, ಹಾಲಿನಲ್ಲಿ ಸಕ್ಕರೆ ಅಥವಾ ಯೂರಿಯಾ ಬಳಸುವುದನ್ನು ತಪ್ಪಿಸಲು ಈ ಯಂತ್ರವು ಸಹಕಾರಿಯಾಗುತ್ತದೆ ಎಂಬುದನ್ನು, ವಸ್ತುಪ್ರದರ್ಶನದಲ್ಲಿ ಹೇಳಲಾಗುತ್ತಿದೆ.

ಕಲಬೆರಕೆಯಾಗುವ ಸಾಧ್ಯತೆ ಇರುವುದರಿಂದ ಸಂಸ್ಕರಿಸಿದ ಪ್ಯಾಕ್ ಮಾಡಿದ ಹಾಲನ್ನೇ ಬಳಸುವಂತೆ ಈ ಸಂದರ್ಭದಲ್ಲಿ ಅರಿವು ಮೂಡಿಸಲಾಗುತ್ತಿದೆಯಲ್ಲದೆ, ಚಪಾತಿ, ಅಕ್ಕಿ, ರಾಗಿ, ಜೋಳದ ರೊಟ್ಟಿ ತಯಾರಿಕಾ ಯಂತ್ರ, ರಾಗಿ ಮುದ್ದೆ, ಜೋಳದ ಮುದ್ದೆ ತಯಾರಿಸುವ ಯಂತ್ರಗಳು, ಜೇನು ಪರೀಕ್ಷಾ ಸಲಕರಣೆಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿದರು.

ಅದೇ ರೀತಿ ಸಿರಿಧಾನ್ಯಗಳ ಗಿರಣಿ ಆಹಾರ ತಯಾರಿಕಾ ಕ್ರಮ, ಸಂಸ್ಕರಣೆ, ರಫ್ತು ಮಾರುಕಟ್ಟೆ ವಿಧಾನ, ಸಿರಿಧಾನ್ಯಗಳ ಆಹಾರದಿಂದ ಆರೋಗ್ಯ ರಕ್ಷಣೆಗಳ ಬಗ್ಗೆ ಸಿಎಫ್‌ಟಿಆರ್‌ಐನಿಂದ ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳು, ಮನೆಯಲ್ಲೇ ಏಕದಳ, ದ್ವಿದಳ ಧಾನ್ಯಗಳ ಗಿರಣಿ ನಿರ್ವಹಣೆ ಕುರಿತಂತೆಯೂ ವಸ್ತುಪ್ರದರ್ಶನದಲ್ಲಿ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಲಾಗುತ್ತಿದೆ.

ಇಂದು ಮತ್ತು ನಾಳೆ (ಶನಿವಾರ) ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಸಿಎಫ್‌ಟಿಆರ್‌ಐ ಆವರಣದಲ್ಲಿ ಏರ್ಪಡಿಸಿರುವ ಸಂಶೋಧನೆ, ಆಹಾರ ಸಂಸ್ಕರಣೆ ಕುರಿತಂತೆ ವಸ್ತುಪ್ರದರ್ಶನ ವೀಕ್ಷಿಸಲು ಸಾರ್ವಜನಿಕರು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಸಂಶೋಧಕರು, ಶಿಕ್ಷಕರುಗಳಿಗೆ ಮುಕ್ತ ಅವಕಾಶ ನೀಡಲಾಗಿದೆ.



# ಗಣ
## ಎರಡು ಕಾಲಘಟ್ಟದಲ್ಲಿ ನಡೆಯೋ ಕಥೆ

ಎರಡು ಕಾಲಮಾನಗಳಲ್ಲಿ ನಡೆಯುವ, ಸಮಯದ ಜೊತೆ ಹೋರಾಡುವ ನಾಯಕನಾಗಿ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಅವರು ಕಾಣಿಸಿಕೊಂಡಿರುವ ಚಿತ್ರ 'ಗಣ'. ಹರಿಪ್ರಸಾದ್ ಜಕ್ಕ ಅವರು ಕಥೆ–ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದ ಚಿತ್ರೀಕರಣ ಈಗಾಗಲೇ ಮುಗಿದಿದ್ದು ಚಿತ್ರವೀಗ ಬಿಡುಗಡೆಯ ಹಂತ ತಲುಪಿದೆ. ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಈ ಚಿತ್ರದ ಟೀಸರ್ ಅನ್ನು ಶ್ರೀಮತಿ ಚಂದ್ರಲೇಖ ದೇವರಾಜ್ ಬಿಡುಗಡೆ ಮಾಡಿದರು. ಹಿರಿಯನಟ ದೇವರಾಜ್, ಪ್ರಜ್ವಲ್ ಪತ್ನಿ ರಾಗಿಣಿ ಪ್ರಜ್ವಲ್ ಹಾಗೂ ಸಹೋದರ ಪ್ರಣಾಮ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮೂಲತ: ಐಟಿ ಎಂಪ್ಲಾಯಿ ಆದ ನಾನು ಕನ್ನಡ ಭಾಷೆಯಲ್ಲಿ ಚಿತ್ರವೊಂದನ್ನು ನಿರ್ಮಾಣ ಮಾಡಬೇಕೆಂದು ಈ ಸಿನಿಮಾಗೆ ಕೈಹಾಕಿದ್ದೇನೆ ಎಂದ ನಿರ್ಮಾಪಕ ಪಾರ್ಥು, ಸೋಶಿಯಲ್ ಮೀಡಿಯಾದಲ್ಲಿ ನಾನು ಪ್ರಜ್ವಲ್ ಅವರನ್ನು ಫಾಲೋ ಮಾಡುತ್ತಿದ್ದೆ. ಅದರಲ್ಲಿ ಪ್ರಜ್ವಲ್ ಅವರ ಅಭಿಮಾನಿಗಳು ಯಾವ ರೀತಿಯ ಚಿತ್ರವನ್ನು ನಿರೀಕ್ಷಿಸುತ್ತಿದ್ದರೊ, ಅದೇ ಥರದ ಚಿತ್ರವನ್ನು ನಿರ್ಮಾಣ ಮಾಡಿದ್ದೇವೆ. ಪ್ರಜ್ವಲ್ ದೇವರಾಜ್ ಅವರು ಈವರೆಗೂ ಮಾಡಿರದಂಥ ಪಾತ್ರ ನಮ್ಮ 'ಗಣ' ಚಿತ್ರದಲ್ಲಿದೆ, ಹರಿಪ್ರಸಾದ್ ಜಕ್ಕ ಅವರು ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ನಾನು ಕೂಡ ಚಿಕ್ಕ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದೇನೆ ಎಂದರು.

ಚಿತ್ರದ ನಾಯಕ ಪ್ರಜ್ವಲ್ ದೇವರಾಜ್ ಮಾತನಾಡುತ್ತಾ, ಗಣ ನಾನು ಈವರೆಗೂ ಮಾಡಿರುವ ಚಿತ್ರಗಳಲ್ಲೇ ಬಹುಬೇಗ ಮುಗಿದಿರುವ ಹಾಗೂ ಡಿಫರೆಂಟ್ ಜಾನರ್‌ನ ಚಿತ್ರ ಎನ್ನಬಹುದು. 1993 ಹಾಗೂ 2023 ಈ ಎರಡು ಕಾಲಘಟ್ಟಗಳಲ್ಲಿ ನಡೆಯುವ ವಿಭಿನ್ನವಾದ ಕಥೆ, ನನ್ನದು ಸಮಯದ ಜೊತೆ ಹೋರಾಡುವ ನಾಯಕನ ಪಾತ್ರ ಎಂದು ಹೇಳಿದರು. ನಟಿಯರಾದ ವೇದಿಕ, ಕೃಷಿ ತಾಪಂಡ ಹಾಗೂ ಶಿವರಾಜ್ ಕೆ.ಆರ್.ಪೇಟೆ, ಮಾಸ್ಟರ್ ರಘುನಂದನ್, ಸಂಗೀತ ನಿರ್ದೇಶಕ ಅನೂಪ್ ಸೀಳಿನ್, ಛಾಯಾಗ್ರಹಕ ಜೈಆನಂದ್, ಕಲಾನಿರ್ದೇಶಕ ಸತೀಶ್, ಸಂಕಲನಕಾರ ಹರೀಶ್ ಕೊಮ್ಮೆ ಹಾಗೂ ಗೋಪಿ ಇವರೆಲ್ಲ 'ಗಣ' ಚಿತ್ರದ ವಿಶೇಷತೆಗಳ ಕುರಿತಂತೆ ಮಾತನಾಡಿದರು.



## ಶಿವರಾಜಕುಮಾರ್ ಹುಟ್ಟುಹಬ್ಬಕ್ಕೆ 'ಘೋಸ್ಟ್' ಚಿತ್ರದ ಬಿಗ್ ಡ್ಯಾಡಿ ವಿಡಿಯೋ

ಜುಲೈ 12, ನಟ ಶಿವರಾಜಕುಮಾರ್ ಅವರ ಹುಟ್ಟುಹಬ್ಬ. ಈ ಸಂದರ್ಭದಲ್ಲಿ ಶಿವಣ್ಣ ನಾಯಕರಾಗಿ ನಟಿಸಿರುವ ಬಹು ನಿರೀಕ್ಷಿತ "ಘೋಸ್ಟ್" ಚಿತ್ರದ "ಬಿಗ್ ಡ್ಯಾಡಿ" ವಿಶೇಷ ವಿಡಿಯೋವನ್ನು ಅದ್ದೂರಿಯಾಗಿ ಬಿಡುಗಡೆ ಮಾಡಲು ನಿರ್ಮಾಪಕರು ನಿರ್ಧರಿಸಿದ್ದಾರೆ. ಕನ್ನಡ ಸೇರಿದಂತೆ ಮೂರು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಈಗಾಗಲೇ ಈ ಕುರಿತು "July 12 "BD"(BIG DADDY)" ಪೋಸ್ಟರ್ ಸಹ ಬಿಡುಗಡೆಯಾಗಿದೆ. ಈಗ ವಿಡಿಯೋ ಬಿಡುಗಡೆಗಾಗಿ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ.

ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಸದಭಿರುಚಿಯ ಚಿತ್ರಗಳನ್ನು ನೀಡಿರುವ ಸಂದೇಶ್ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಾಣವಾಗುತ್ತಿರುವ, ರಾಷ್ಟ್ರಪ್ರಶಸ್ತಿ ವಿಜೇತ ಸಂದೇಶ್ ನಾಗರಾಜ್ (MLC) ಅರ್ಪಿಸುವ, ಸಂದೇಶ್ ಎನ್. ಅವರು ನಿರ್ಮಿಸುತ್ತಿರುವ ಹಾಗೂ ಶ್ರೀನಿ ನಿರ್ದೇಶನದ. "ಘೋಸ್ಟ್" ಚಿತ್ರದ ಚಿತ್ರೀಕರಣ ಈಗಾಗಲೇ ಮುಕ್ತಾಯವಾಗಿದೆ. ಶಿವರಾಜಕುಮಾರ್, ಅನುಪಮ್ ಖೇರ್, ಜಯರಾಂ, ಸತ್ಯಪ್ರಕಾಶ್, ಪ್ರಶಾಂತ್ ನಾರಾಯಣನ್, ದತ್ತಣ್ಣ, ಅಭಿಜಿತ್ ಮುಂತಾದವರು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

# 'ಶೀಲ'
## ಹೋರಾಟದ ಹಾದಿ ಹಿಡಿದ ರಾಗಿಣಿ..!




ಹೆಣ್ಣಿನ ಹೋರಾಟದ ಸುತ್ತ ನಡೆಯುವ ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ, ಬಾಲು ನಾರಾಯಣನ್ ಅವರ ನಿರ್ದೇಶನದ ಚಿತ್ರ ಶೀಲ. ಈ ಚಿತ್ರದಲ್ಲಿ ನಟಿ ರಾಗಿಣಿ ದ್ವಿವೇದಿ ಅವರು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ, ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನೆಲ್ಲ ಮುಗಿಸಿಕೊಂಡು ರಿಲೀಸ್‌ಗೆ ಸಿದ್ದವಾಗಿರುವ ಈ ಚಿತ್ರ ಇದೇ ತಿಂಗಳ ಕೊನೆಯಲ್ಲಿ ತೆರೆಕಾಣಲಿದೆ. ಕನ್ನಡ ಹಾಗೂ ಮಲೆಯಾಳಂ ಸೇರಿ 2 ಭಾಷೆಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಬಾಲು ನಾರಾಯಣನ್ ಆಕ್ಷನ್ ಕಟ್ ಹೇಳಿದ್ದಾರೆ. ಚಿತ್ರದ ಮೇಕಿಂಗ್ ವಿಡಿಯೋ ಹಾಗೂ ಹಾಡಿನ ಪ್ರದರ್ಶನ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಈ ಸಂದರ್ಭದಲ್ಲಿ ಶೀಲ ಮಹಿಳಾ ಪ್ರಧಾನ ಚಿತ್ರ ಎಂದು ಮಾತು ಆರಂಭಿಸಿದ ನಾಯಕಿ ರಾಗಿಣಿ ದ್ವಿವೇದಿ, ಪ್ರಸ್ತುತ ಹೆಣ್ಣುಮಕ್ಕಳು ಸಮಾಜದಲ್ಲಿ ದಿನನಿತ್ಯ ಎದುರಿಸುತ್ತಿರುವ ಹಲವು ಸಮಸ್ಯೆಗಳ ಸುತ್ತ ಈ ಚಿತ್ರದ ಕಥೆಯನ್ನು ಹೆಣೆಯಲಾಗಿದೆ. ಹೆಣ್ಣು ಮನಸ್ಸು ಮಾಡಿದರೆ, ತನಗೆದುರಾಗುವ ಸಮಸ್ಯೆಯನ್ನು ತಾನೇ ಹೇಗೆ ಬಗೆಹರಿಸಿಕೊಳ್ಳಬಹುದು ಎಂಬುದನ್ನು ಕೂಡ ಈ ಚಿತ್ರದಲ್ಲಿ ತೋರಿಸಿದ್ದೇವೆ. ಹೆಣ್ಣು ಲಕ್ಷ್ಮೀ ಸ್ವರೂಪಳೂ ಹೌದು. ಕಾಳಿ ಸ್ವರೂಪಳೂ ಹೌದು. ನಿರ್ದೇಶಕ ಬಾಲು ನಾರಾಯಣನ್ ಅವರು ಉತ್ತಮ ಕಥೆಯೊಂದನ್ನು ಆಯ್ಕೆ ಮಾಡಿಕೊಂಡು ಚಿತ್ರ ಮಾಡಿದ್ದಾರೆ. ಕೇರಳ ಹಾಗೂ ಬೆಂಗಳೂರಿನಲ್ಲಿ ಈ ಚಿತ್ರದ ಚಿತ್ರೀಕರಣವನ್ನು ನಡೆಸಿದ್ದೇವೆ, ಕನ್ನಡ ಹಾಗೂ ಮಲೆಯಾಳಂ ಸೇರಿ ಎರಡೂ ಭಾಷೆಗಳಲ್ಲೂ ನೇರವಾಗಿ ಚಿತ್ರೀಕರಣ ನಡೆಸಲಾಗಿದೆ. ಶೀಲ ಚಿತ್ರವು ಮೊದಲು ಕನ್ನಡದಲ್ಲಿಯೇ ಬಿಡುಗಡೆಯಾಗಲಿದೆ ಎಂದು ನಾಯಕಿ ರಾಗಿಣಿ ತಿಳಿಸಿದರು.

ನಂತರ ಮಾತನಾಡಿದ ಚಿತ್ರದ ನಿರ್ಮಾಪಕ ಡಿ.ಎಂ.ಪಿಳ್ಳೈ, ನಾನು ಮೂಲತಃ ಉದ್ಯಮಿ. ಕಳೆದ ಮೂವತ್ತೈದು ವರ್ಷಗಳಿಂದ ಬೆಂಗಳೂರಿನಲ್ಲೇ ವಾಸಿಸುತ್ತಿದ್ದೇವೆ. ಇದು ನನ್ನ ನಿರ್ಮಾಣದ ಮೊದಲ ಚಿತ್ರ. ಈ ಸಿನಿಮಾದ ಕಂಟೆಂಟ್ ಚೆನ್ನಾಗಿದೆ. ಸದ್ಯದಲ್ಲೇ ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದೇವೆ ಎಂದರು.

ಬಾಲು ನಾರಾಯಣನ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ ಈ ಚಿತ್ರದ ಛಾಯಾಗ್ರಾಹಕರಾಗಿ ಅರುಣ್ ಕೊತೇದತ್, ಸಂಗೀತ ನಿರ್ದೇಶಕರಾಗಿ ಅಲೋಶ್ಯಾ ಪೀಟರ್, ಸಂಕಲನಕಾರರಾಗಿ ಕಿರಣ್‌ದಾಸ್ ಅವರು ಕೆಲಸ ಮಾಡಿದ್ದಾರೆ. ಚಿತ್ರದ ಪ್ರಮುಖ ತಾರಾಬಳಗದಲ್ಲಿ ರಾಗಿಣಿ ದ್ವಿವೇದಿ, ಅವಿನಾಶ್, ಶೋಭರಾಜ್, ಚಿತ್ರಾ ಶೆಣೈ, ಮಹೇಶ್ ನಾಯರ್, ಶ್ರೀಪತಿ, ರಿಯಾಜ್‌ಖಾನ್, ಅಬೆಡೇವಿಡ್, ಆರತಿ ಗೋಪಾಲ್ ಮುಂತಾದವರಿದ್ದಾರೆ.

# ಸಿನಿಪದಬಂಧ–481



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______




ವಿಜೇತರು: ಕೆ.ವೇಣುಗೋಪಾಲ್ ರಾವ್, ನಂ.179, 4ನೇ ಕ್ರಾಸ್, ಕಂದಾಯ ನಗರ 1ನೇ ಹಂತ, ಶ್ರೀರಾಂಪುರ, ಮೈಸೂರು.



ಉಮ್ಮತ್ತೂರು ಇಂದುಶೇಖರ್
ಮೊ.9880820462

### ಸಿನಿ ಪದಬಂಧ 480ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಕಾ | ನೂ | ನು | | | ಮೋ | | | | | ದಿ |
| ಮ | | | | ಚೆ | ನಿ | ಫ | ರ್ | ಕೊ | ತ್ವಾ | ಲ್ |
| ನ | | ರು | | | ಕಾ | | ಸ್ವಾ | | | ರು |
| ಬಿ | ಡು | ಗ | ಡೆ | ಯ | ಬೇ | ಡಿ | | | ತಾ | ಗೀ |
| ಲ್ಲ | | ನಾ | | | ಡಿ | | | ರಾ | | ಲಾ |
| | | ಯ | ಮು | ನಾ | | ರಾ | ಗಿ | ಣಿ | | |
| ರಾ | | ಕಿ | | | ದೇ | | | ಹೊ | | ಸ್ಯಾಂ |
| ಜ | ಗ್ಗು | | | ಅ | ವ | ನೇ | ನ | ನ್ನ | ಗಂ | ಡ |
| ಕು | | ಸೋ | | | ಮಾ | | | ಮ್ಮ | | ಲ್ |
| ಮಾ | ದ | ಮ | ತ್ತು | ಮಾ | ನ | ಸಿ | | | | ವು |
| ರ | | | | | ವ | | | ಸೈ | ನೈ | ಡ್ |

### ಎಡದಿಂದ ಬಲಕ್ಕೆ

1. ಈ ನಟಿಯ ಹೆಸರಿನ ಅರ್ಥವೇ " ಸುಂದರ ಕಲಾಕೃತಿ " 3
4. ಇದೊಂದು ಪ್ರಶ್ನೆಯ ವಿಧ.ಪಕ್ಕದಲ್ಲೇ ಉತ್ತರವಿದೆ ಸರಿಪಡಿಸಿ 7
7. ಬಂಗಾರದ ಮನುಷ್ಯನ ಹಾಡಿನಂತೆ ಏನೇ ಆಗಲಿ ಕಿಲ ಕಿಲ ಅಂತೀರಿ ! 7
8. ಕನಸಿನ ರಾಣಿ ಮಾಲಾಶ್ರೀ "ಪರಾಕ್ರಮಿ"ಯೇ 2
10. ಶ್ರೀಕೃಷ್ಣನ ಸಾಕು ತಾಯಿ 3
11. ಅವಿದ್ಯಾವಂತೆ ಹೆಬ್ಬೆಟ್‌ನ "ತಾರಾ" 3
15. ಡಚ್ಚುವಿನ ಸಕ್ಕರೆಯ ನಾಡು 2
16. ಶಿವಕುಮಾರ್ – ಅಭಿನಯ ನಟನೆಯ ಚಿತ್ರಕ್ಕೆ ಎ. ಬಾಲಕೃಷ್ಣ ನಿರ್ದೇಶಕ 7
18. ವಿಷ್ಣು ದ್ವಿಪಾತ್ರದಲ್ಲಿ ಸರ್ಪದೊಂದಿಗೆ ಪ್ರಾಣಿಗಳೆರಡು ಜೊತೆಗೂಡಿವೆ 7
19. ಭವ್ಯ ಗಂಡನನ್ನು ಪ್ರೀತಿಯಿಂದ ಕರೆದರೂ ಈ ಪದ ಮಾಮೂಲಿಯದು ! 3

### ಮೇಲಿನಿಂದ ಕೆಳಕ್ಕೆ

1. ಕನಸುಗಾರ ರವಿಯ " ಇಷಾ ಕೊಪ್ಪಿಕರ್" 5
2. ಪ್ರಭಾಕರ್ "ಮೂಲ ಪುರುಷ" 5
3. ದುನಿಯಾ ವಿಜಿಯ ಕಪ್ಪನೆಯ ಪ್ರಾಣಿಗೆ ಕೆ.ಮಾದೇಶ್ ನಿರ್ದೇಶನವಿದೆ 5
5. ಸ್ವೀಟ್ ಅಂಗಡಿಯಲ್ಲಿ ದಿಗಂತ್‌ಗೆ ಸಿಕ್ಕ ಸಿಹಿ ! 2
6. ಪ್ರಜೆಗಳ ಹಿತ, ಬವಣೆ ಕಳೆವ ಮುಖಂಡ ! 5
9. ಎದುರ್ಮನೆಲಿ ಗಂಡ _ _ _ _ _ ಹೆಂಡ್ತಿ 5
12. ಶಿವನ ನಿಂದಕ ಮಹಾಭಕ್ತನಾಗಿ ಪರಿವರ್ತಿತನಾದ ಭಕ್ತಿ ಪ್ರಧಾನ ಚಿತ್ರ 5
13. ಇವುಗಳು ಒಂದೇ ಸಮ ಇಲ್ಲದಿದ್ದರೂ ನಿರ್ದೇಶಕ ಎಸ್. ಆರ್. ರಾಜನ್ ಮುಷ್ಟಿಯಲ್ಲಿವೆ 5
14. ಈ ನಟಿಯ ಕೊನೆಯಲ್ಲಿ ಕವಿಯೊಬ್ಬರ ಉತ್ತರಾರ್ಧವಿದೆ 5
17. ಅಮರೀಶ್ ಪುರಿಯ ಅರಣ್ಯ ಇಲ್ಲಿ ತಲೆ ಕೆಳಗು 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

## ನಮೋ ಭೂತಾತ್ಮ–2, ಕೋಮಲ್‌ಗೆ ಬಿಡದ ಭೂತ!

ಹಾಸ್ಯನಟ ಕೋಮಲ್ ಬಹಳ ದಿನಗಳ ನಂತರ ಮತ್ತೆ ತೆರೆಮೇಲೆ ನಾಯಕನಾಗಿ ಕಾಣಿಸಿಕೊಳ್ಳುತ್ತಿರುವ ಚಿತ್ರ 'ನಮೋ ಭೂತಾತ್ಮ–2'. ಕೋಮಲ್ ಅಭಿನಯ ಹಾಗೂ ನಿರ್ಮಾಣದಲ್ಲಿ ಹಿಂದೆ ತೆರೆಕಂಡಿದ್ದ 'ನಮೋ ಭೂತಾತ್ಮ' ಚಿತ್ರ ಅವರಿಗೆ ದೊಡ್ಡ ಹೆಸರನ್ನು ತಂದು ಕೊಟ್ಟಿತ್ತು, ನೃತ್ಯನಿರ್ದೇಶಕ ಮುರುಳಿ ಈ ಚಿತ್ರದ ಮೂಲಕ ನಿರ್ದೇಶಕನಾಗಿದ್ದರು. ದಶಕದ ನಂತರ ಈಗ ಮತ್ತದೇ ಜೋಡಿ ಅದೇ ಟೈಟಲ್‌ನಡಿ ಪಾರ್ಟ್ 2 ಮಾಡಿದೆ. ಕೋಮಲ್ ಹಾಗೂ ಮುರುಳಿ ಕಾಂಬಿನೇಶನ್‌ನಲ್ಲಿ ಹೊರಬರುತ್ತಿರುವ ನಮೋ ಭೂತಾತ್ಮ–2 ಚಿತ್ರದ ಟೀಸರನ್ನು ಆಕ್ಷನ್‌ಪ್ರಿನ್ಸ್ ದ್ರುವ ಸರ್ಜಾ ಅನಾವರಣಗೊಳಿಸಿ ಶುಭ ಹಾರೈಸಿದರು. ಎಂ.ಎಸ್.ಗೋಲ್ಡನ್ ಪಿಕ್ಚರ್ಸ್ ಮೂಲಕ ಸಂತೋಷ್ ಶೇಖರ್ ಈ ಚಿತ್ರವನ್ನು ನಿರ್ಮಿಸಿದ್ದಾರೆ.

ಚಿತ್ರ ಕುರಿತಂತೆ ಮಾತನಾಡಿದ ನಟ ಕೋಮಲ್, ಮೊದಲ ಚಿತ್ರವನ್ನು ನಾನೇ ನಿರ್ಮಿಸಿದ್ದೆ, ಅದು ದೊಡ್ಡಮಟ್ಟಕ್ಕೆ ಹಿಟ್ ಆಗಬೇಕಾಗಿತ್ತು ಹಲವಾರು ದೊಡ್ಡ ಸಿನಿಮಾಗಳ ನಡುವೆ ಬಂದ ಕಾರಣ ಚಿತ್ರ ಜನರಿಗೆ ಸರಿಯಾಗಿ ತಲುಪಲಿಲ್ಲ, ಇದು ಕೂಡ ಹಾರರ್, ಕಾಮಿಡಿ ಕಥೆ ಇರುವ ಸಿನಿಮಾ, ಇದರಲ್ಲಿ 50 ಭಾಗ ನಗಿಸಿದರೆ, 50 ಭಾಗ ಹೆದರಿಸುತ್ತೇವೆ. ಸಹೋದರನ ರೀತಿ ಧ್ರುವಸರ್ಜಾ ಬಂದು ನಮಗೆ ಹರಸಿದ್ದಾರೆ. ಚಿತ್ರದಲ್ಲಿ ನಾನೂ ಸಹ ಟಿವಿ ಚಾನೆಲ್ ರಿಪೋರ್ಟರ್ ಆಗಿ ಕಾಣಿಸಿಕೊಂಡಿದ್ದೇನೆ. ಇದು ಮೊದಲ ಚಿತ್ರದ ಸೀಕ್ವೇಲ್ ಅಲ್ಲ, ಬೇರೆಯದೇ ಕಥೆ, ಚಿತ್ರದ ಜಾನರ್ ಅದೇ ಆಗಿದ್ದರೂ, ಕ್ಯಾರೆಕ್ಟರ್‌ಗಳು ಬೇರೆಯಾಗಿರುತ್ತವೆ. ಇನ್ನು ಚಿತ್ರದಲ್ಲಿ 4 ಹಾಡುಗಳಿವೆ.

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆ

# ಕಬಿನಿ ಜಲಾಶಯದಲ್ಲಿ ಒಳಹರಿವು ಹೆಚ್ಚಳ

## ಶೀಘ್ರ ಜಲಾಶಯ ತುಂಬುವ ಆಶಾಭಾವನೆ, ರೈತರಲ್ಲಿ ಮಂದಹಾಸ



ಹೆಚ್.ಡಿ.ಕೋಟೆ, ಜು.6 – ಕೇರಳದ ವೈನಾಡಿನಲ್ಲಿ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಯಿಂದ ಕಬಿನಿ ಜಲಾಶಯದ ಒಳಹರಿವು ಹೆಚ್ಚಾಗಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ವೈನಾಡಿನಲ್ಲಿ ಭಾರೀ ಮಳೆ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ 17 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರ ಜನಾರ್ಧನ್ ತಿಳಿಸಿದ್ದಾರೆ. ಮುಂಗಾರು ಮಳೆ ತಡವಾದ ಹಿನ್ನೆಲೆಯಲ್ಲಿ ಕಬಿನಿ ಜಲಾಶಯದ ನೀರಿನ ಮಟ್ಟ 50 ಅಡಿಗೆ ಕುಸಿತಗೊಂಡಿತ್ತು. ಆದರೆ ಕಳೆದ ಎರಡು ದಿನಗಳಿಂದ ಬಿಡುವಿಲ್ಲದೆ ಸುರಿಯುತ್ತಿರುವ ಮಳೆಯಿಂದ ಜಲಾಶಯಕ್ಕೆ ಒಳಹರಿವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ಅವರು ವಿವರಿಸಿದರು.

ಇನ್ನು ಮೂರು ದಿನಗಳ ಕಾಲ ಇದೇ ರೀತಿ ಮಳೆ ಸುರಿಯುವುದರಿಂದ ಒಳಹರಿವು ಹೆಚ್ಚಾಗಿ ಕಬಿನಿ ಮೈದುಂಬಿ ಹರಿಯಲಿದ್ದಾಳೆ ಎಂಬ ಆಶಾಭಾವನೆ ಇದೆ.

ಜಲಾಶಯದ ಗರಿಷ್ಠ ಮಟ್ಟ 2284 ಅಡಿಗಳಿದ್ದು ಇಂದಿನ ನೀರಿನ ಮಟ್ಟ 2258 ಅಡಿಗಳಿವೆ. 17 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದ್ದು, 500 ಕ್ಯೂಸೆಕ್ಸ್ ನೀರನ್ನು ನದಿಗೆ ಬಿಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಮ್ಮನ್ನು ಸಂಪರ್ಕಿಸಿದ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ರೈತ ಚಂದ್ರಶೇಖರ್, ಮುಂಗಾರು ಮಳೆ ಜೂನ್ ತಿಂಗಳಲ್ಲೇ ಆರಂಭಗೊಳ್ಳಬೇಕಿತ್ತು. ಮಳೆ ಬಾರದ ಕಾರಣ ಜಲಾಶಯದ ನೀರಿನ ಮಟ್ಟ ಕುಸಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ, ರೈತರು, ಜನ–ಜಾನುವಾರು, ವನ್ಯಜೀವಿಗಳಿಗೂ ನೀರಿನ ಸಮಸ್ಯೆ ತಲೆದೋರುವ ಆತಂಕ ಎದುರಾಗಿತ್ತು. ಆದರೆ ಕಳೆದ ಎರಡು ದಿನಗಳಿಂದ ಕೇರಳದ ವೈನಾಡು ಸೇರಿದಂತೆ ಹಲವು ಕಡೆ ಮುಂಗಾರು ಮಳೆ ಆರಂಭವಾಗಿರುವುದರಿಂದ ಜಲಾಶಯಕ್ಕೆ ಒಳಹರಿವು ಸಾಕಷ್ಟು ಹರಿದು ಬರುತ್ತಿದೆ. ಇದೇ ರೀತಿ ಮಳೆ ಹೆಚ್ಚಿನ ಪ್ರಮಾಣದಲ್ಲಿ ಬಂದರೆ ಜಲಾಶಯ ತುಂಬುವ ಸಾಧ್ಯತೆಗಳು ಇದೆ. ನಿಜಕ್ಕೂ ಮಳೆ ಇಲ್ಲದೆ ಕಂಗಾಲಾಗಿದ್ದ ರೈತರ ಮುಖದಲ್ಲಿ ಮಂದಹಾಸ ಮೂಡಿದೆ ಎಂದು ತಿಳಿಸಿದರು.

**ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ ಕುಸಿತಗೊಂಡ ಹಿನ್ನೆಲೆಯಲ್ಲಿ ಕಬಿನಿ ಶುಭಾಶ್ ಪವರ್ ಪ್ರಾಜೆಕ್ಟ್ ವಿದ್ಯುತ್ ಘಟಕದಲ್ಲಿ ವಿದ್ಯುತ್ ತಯಾರಿಕೆ ಸ್ಥಗಿತಗೊಂಡಿತ್ತು. ಜಲಾಶಯಕ್ಕೆ ಒಳಹರಿವು ಜಾಸ್ತಿ ಆಗುತ್ತಿರುವ ಹಿನ್ನೆಲೆಯಲ್ಲಿ ಇಂದಿ(ಜು.6)ನಿಂದ ವಿದ್ಯುತ್ ಘಟಕ ಆರಂಭಗೊಂಡಿದೆ.**

## ಮುತ್ತೂಮಾರಿಯಮ್ಮ ದೇವಸ್ಥಾನದಲ್ಲಿ ಆಷಾಢ ಪೂಜೆ

### 8000 ಲಾಡು ವಿತರಣೆ



ಹುಣಸೂರು, ಜು.6– ನಗರದ ಮಾರಿಗುಡಿ ಬೀದಿಯಲ್ಲಿರುವ ಮುತ್ತೂಮಾರಿಯಮ್ಮ ದೇವಸ್ಥಾನದಲ್ಲಿ ಆಷಾಢ ಮಾಸದ ಮೂರನೇ ಶುಕ್ರವಾರ(ಜು.7) ಬೆಳಗ್ಗೆ ಸಂಗೊಳ್ಳಿ ರಾಯಣ್ಣ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಿಶೇಷ ಪೂಜಾ ಕಾರ್ಯಗಳನ್ನು ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಅಶೋಕ್ ರಾಜಲಿಂಗಯ್ಯ ತಿಳಿಸಿದ್ದಾರೆ.

ಅಂದು ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಗಾಗಿ ಬೆಳಗ್ಗೆ 9 ರಿಂದ ರಾತ್ರಿವರೆಗೆ 5000 ತಿರುಪತಿ ಲಾಡು ಹಾಗೂ ಮಕ್ಕಳಿಗಾಗಿ 3000 ಲಾಡುಗಳನ್ನು ವಿತರಿಸಲಾಗುವುದು. ರಾತ್ರಿ 9 ಗಂಟೆಗೆ ದೇವಿಯ ಉತ್ಸವವನ್ನು ನಡೆಸಲಾಗುವುದು.

## ಗೌರವಯುತ ಜೀವನಕ್ಕಾಗಿ ಮಹಿಳೆಯರು ಪ್ರತಿದಿನ ಹೋರಾಟ

### ಮಹಿಳಾ ಸಮಾವೇಶದಲ್ಲಿ ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ಅಭಿಪ್ರಾಯ



ನಂಜನಗೂಡು, ಜು.6– ಗ್ರಾಮೀಣ ಭಾಗಗಳಲ್ಲಿ ರೈತ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆಯಲು ಸಂಘಟನೆಯಲ್ಲಿ ತೊಡಗಿಕೊಂಡು ಪ್ರಬುದ್ಧತೆ ಮೆರೆದಿದ್ದಾರೆ ಎಂದು ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ತಿಳಿಸಿದ್ದಾರೆ.

ತಾಲೂಕಿನ ಅಹಲ್ಯ ಗ್ರಾಮದಲ್ಲಿ ತಾಲೂಕು ರೈತ ಸಂಘ ಗುರುವಾರ ಆಯೋಜಿಸಿದ್ದ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಪ್ರತಿದಿನ ಗೌರವಯುತ ಜೀವನಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ. ಆತ್ಮಾಭಿಮಾನದ ಬದುಕು ಕಟ್ಟಿಕೊಳ್ಳಲು, ಆರ್ಥಿಕವಾಗಿ ಸಬಲರಾಗಲು, ರಚನಾತ್ಮಕವಾಗಿ ಸಂಪತ್ತನ್ನು ಸೃಷ್ಟಿ ಮಾಡಿಕೊಳ್ಳುವ ಮೂಲಕ ತಮ್ಮ ಬೆಳೆಗಳಿಗೆ, ಹೈನು ಉತ್ಪನ್ನಗಳಿಗೆ ಮಾರುಕಟ್ಟೆ ಕಂಡುಕೊಳ್ಳುವ ಮೂಲಕ ಸ್ವಾಭಿಮಾನದಿಂದ ಬದುಕುವುದನ್ನು ರೈತ ಸಂಘ ಕಲಿಸುತ್ತಿದೆ ಎಂದರು.

ಈ ನಿಟ್ಟಿನಲ್ಲಿ ಪ್ರತಿ ಗ್ರಾಮದಲ್ಲಿ ರೈತ ಸಂಘದ ಮಹಿಳಾ ಘಟಕಗಳ ಅವಶ್ಯಕತೆಯಿದೆ, ಹೆಣ್ಣನ್ನು ತುಚ್ಛವಾಗಿ ಕಾಣುವ ಮನುಸ್ಮೃತಿಯ ಭಾಗವಾಗಿ ವ್ಯವಸ್ಥೆ ಬೆಳೆದಿದೆ, ಇವತ್ತಿಗೂ ಕೂಡ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರಗಳು ಶೇ.10 ರಷ್ಟು ಮಾತ್ರ ಹೊರಗೆ ಬರುತ್ತವೆ, ಶೇ.90 ರಷ್ಟು ಮುಚ್ಚಿ ಹೋಗುತ್ತವೆ. ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಮರೆಸಲು ಮನುಸ್ಮೃತಿಯಂತೆ ಎಲ್ಲ ನದಿಗಳಿಗೆ ಹೆಂಗಸರ ಹೆಸರನ್ನು ಇಡಲಾಗಿದೆ. ಗಂಡಿಗೆ ಸಲ್ಲುವ ಎಲ್ಲಾ ಹಕ್ಕುಗಳು ಹೆಣ್ಣಿಗೆ ಸಮನಾಗಿ ಸಿಗಬೇಕು ಎಂದು ಹೇಳಿದರು.

ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಸಿಗುವುದಿಲ್ಲ ಎಂದು ಆತ್ಮಹತ್ಯೆ ದಾರಿ ಹಿಡಿಯುವ ಬದಲು, ಗುಡಿ ಕೈಗಾರಿಕೆ ಸ್ಥಾಪನೆ ಮಾಡುವ ಮೂಲಕ ತಮ್ಮ ಬೆಳೆಗಳನ್ನು ಉತ್ಪನ್ನಗಳಾಗಿ ಮಾರ್ಪಡಿಸಿ ಲಾಭಗಳಿಸಿ ಆರ್ಥಿಕತೆ ಹೆಚ್ಚಿಸಿಕೊಳ್ಳುವುದನ್ನು ಕಲಿಸುವುದು ಕೂಡ ರೈತ ಸಂಘದ ಆಶಯಗಳಲ್ಲಿ ಒಂದಾಗಿದೆ. ರೈತರಿಗೆ ಅನ್ಯಾಯವಾದಾಗ ಹೋರಾಟ ನಡೆಸಿ ನಮ್ಮ ಹಕ್ಕು ಬಾಧ್ಯತೆಗಳನ್ನು ಈಡೇರಿಸಿಕೊಳ್ಳಲು ರೈತ ಸಂಘದ ಪದಾಧಿಕಾರಿಗಳು ಸದಾ ಸಿದ್ಧರಿರಬೇಕು ಎಂದು ಕರೆ ನೀಡಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಪ್ರತಿ ಹಳ್ಳಿಗಳಲ್ಲಿ ತಮ್ಮ ಹಕ್ಕುಗಳನ್ನು ಪಡೆಯಲು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳುವತ್ತ ಮಹಿಳೆಯರು ಮುಂದಾಗಬೇಕು. ಅಹಲ್ಯ ಗ್ರಾಮದಲ್ಲಿ ಸ್ಮಶಾನ ಭೂಮಿ ಪಡೆಯಲು ಹೋರಾಟ ರೂಪಿಸಿದ ರೈತ ಸಂಘ ಕೇವಲ ಒಂದು ವಾರದಲ್ಲಿ ತಾಲೂಕು ಆಡಳಿತದ ಕಿವಿ ಹಿಂಡಿ ಸಮಸ್ಯೆಗೆ ಪರಿಹಾರ ಕಂಡುಕೊಂಡಿತ್ತು ಎಂದರು.

ಕಾರ್ಯಕ್ರಮದಲ್ಲಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಹಿಮ್ಮಾವು ರಘು, ತಾಲೂಕು ಅಧ್ಯಕ್ಷ ಸತೀಶ್ ರಾವ್, ಕತ್ವಡಿಪುರ ಶಿವಣ್ಣ, ಕೆಂಪಣ್ಣ, ನಾಗರಾಜು, ಅನುಸೂಯಮ್ಮ, ಸವಿತಾ, ಲಕ್ಷ್ಮಿ, ಗೌರಮ್ಮ, ರಾಜಮ್ಮ, ನಿಂಗಮ್ಮ, ಸುಶೀಲಮ್ಮ, ಸೌಭಾಗ್ಯ, ಜಯಮ್ಮ, ಕರಿಗೌಡ, ವೇಣುಗೋಪಾಲ್ ಉಪಸ್ಥಿತರಿದ್ದರು.

## ಮೂಗೂರು ದೊಡ್ಡಕೆರೆ, ಉದ್ಯಾನವನ ಅಭಿವೃದ್ಧಿ ಪಡಿಸಲು ಗ್ರಾಮಸ್ಥರ ಮನವಿ



ಮೂಗೂರು, ಜು.6– ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಮೂಗೂರು ದೊಡ್ಡ ಕೆರೆಯನ್ನು ಅಭಿವೃದ್ಧಿ ಪಡಿಸಿ ಕೆರೆಯಲ್ಲಿ ನಿರ್ಮಾಣಗೊಂಡಿರುವ ಉದ್ಯಾನವನಕ್ಕೆ ಮತ್ತೆ ಕಾಯಕಲ್ಪ ನೀಡುವಂತೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆಯ ಸಂಸ್ಥಾಪಕ ಡಾ.ಸೀತಾರಾಂ ಅವರನ್ನು ಸ್ಥಳೀಯ ನಿವಾಸಿಗಳು ಒತ್ತಾಯಿಸಿದರು.

ಮೂಗೂರಿನ ಕೆಪಿಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಹಾಗೂ ಗ್ರಾಪಂ ಇವರ ಸಹಯೋಗದಲ್ಲಿ 1 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿದ ಕುಡಿಯುವ ನೀರು ಮತ್ತು ಕೈತೊಳೆಯುವ ಘಟಕವನ್ನು ಉದ್ಘಾಟಿಸಿದ ಬಳಿಕ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥೆ ಸಂಸ್ಥಾಪಕ ಡಾ.ಸೀತಾರಾಂ ಹಾಗೂ ಇವರ ತಂಡ ಮೂಗೂರು ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಗ್ರಾಮಸ್ಥರು ಮನವಿ ಮಾಡಿದರು.

ವೃದ್ಧರ ಆರೋಗ್ಯ ವೃದ್ಧಿಗಾಗಿ ಮೂಗೂರಿನಲ್ಲಿ ಉತ್ತಮ ಉದ್ಯಾನವನ ನಿರ್ಮಾಣದ ಕನಸು ಹೊಂದಿ 2013 ರಲ್ಲಿ ಪಿಡಬ್ಲ್ಯೂಡಿ ಸಚಿವ ಎಚ್.ಸಿ.ಮಹದೇವಪ್ಪನವರು 2 ಕೋಟಿ ರೂ. ವೆಚ್ಚದಲ್ಲಿ ಪಾರ್ಕ್ ನಿರ್ಮಾಣ ಮಾಡಿಸಿದ್ದರು. ಸ್ಥಳೀಯ ಆಡಳಿತ ಅಧಿಕಾರಿಗಳ ಬೇಜವಾಬ್ದಾರಿ ಮತ್ತು ನಿರ್ಲಕ್ಷ್ಯದಿಂದ ನಿರ್ವಹಣೆಯ ಕೊರತೆಯಿಂದ ಉದ್ಯಾನವನ ಸಂಪೂರ್ಣವಾಗಿ ನಾಶವಾದ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಮುಖಂಡರಾದ ಎಂ.ಕೆ. ಸಿದ್ಧರಾಜು,.ಕನ್ನಹಳ್ಳಿ ಮೋಳೆ ನಟರಾಜ್, ರವೀಂದ್ರ ಇತರರು ಉಪಸ್ಥಿತರಿದ್ದರು.

## ಬದುಕಿಗೆ ಭರವಸೆ, ಅವಕಾಶಗಳನ್ನು ನೀಡುವ ರೋಟರಿ




ಹುಣಸೂರು, ಜು.6– ಪ್ರಸ್ತುತ ದಿನಗಳಲ್ಲಿ ಸಾರ್ವಜನಿಕ ಬದುಕಿಗೆ ಅವಶ್ಯವಾದ ಸಕಾರಾತ್ಮಕ ಭರವಸೆ ಮತ್ತು ಅವಕಾಶಗಳನ್ನು ನೀಡುವ ಮೂಲಕ ರೋಟರಿ ಸಂಸ್ಥೆ ವಿಶ್ವದಾದ್ಯಂತ ಜನರ ವಿಶ್ವಾಸ ಗಳಿಸಿದೆ ಎಂದು ರೊ. ಎಂಪಿಎಚ್‌ಎಫ್ ಶೇಖರ್ ಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ರೋಟರಿ ಸಂಸ್ಥೆಯಲ್ಲಿ ಇತ್ತೀಚೆಗೆ ನಡೆದ 2023–24ನೇ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಪದಗ್ರಹಣಾಧಿಕಾರಿಯಾಗಿ ಭಾಗವಹಿಸಿ ಮಾತನಾಡಿದ ಅವರು, ರೋಟರಿ ಸಂಸ್ಥೆ ಕೇವಲ ಸಾಮಾಜಿಕ ಸೇವೆಗಳನ್ನು ಮಾತ್ರ ಮಾಡುತ್ತಿಲ್ಲ. ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕಾಗಿಯೂ ದುಡಿಯುತ್ತಿದೆ. ನಿಸ್ವಾರ್ಥ ಸೇವೆಯೇ ರೋಟರಿಯ ಮುಖ್ಯಗುರಿ ಎಂದರು.

ರೋಟರಿ ಸದಸ್ಯನಾದವನಿಗೆ ಏನೂ ಸಿಗುವುದಿಲ್ಲ. ಆದರೆ ಭರವಸೆ ಮತ್ತು ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ದುಡಿದಲ್ಲಿ ಮೊಗೆದಷ್ಟೂ ಸಿಗುತ್ತದೆ. ಇದಕ್ಕಾಗಿ ಸದಸ್ಯರು ಎಲ್ಲರ ಪ್ರೀತಿಯನ್ನು ಗಳಿಸಬೇಕು. ನಿಮ್ಮ ನಡೆ–ನುಡಿಗಳಲ್ಲಿ ಅಲ್ಪ ಪ್ರಮಾಣದ ಬದಲಾವಣೆ ತಂದುಕೊಂಡಲ್ಲಿ ಸಾಧನೆ ಮತ್ತು ಸಾರ್ಥಕ್ಯ ಎರಡೂ ಲಭಿಸಲಿದೆ ಎಂದರು.

ಕ್ಲಬ್‌ನ ನೂತನ ಅಧ್ಯಕ್ಷರಾಗಿ ರೊ.ಚನ್ನಕೇಶವ ಮತ್ತು ಕಾರ್ಯದರ್ಶಿಯಾಗಿ ಕೆ.ಪಿ. ಪ್ರಸನ್ನ ಅಧಿಕಾರ ವಹಿಸಿಕೊಂಡರು. ಕ್ಲಬ್‌ಗೆ ಹೊಸದಾಗಿ ಹತ್ತಕ್ಕೂ ಹೆಚ್ಚು ನೂತನ ಸದಸ್ಯರನ್ನು ಸೇರ್ಪಡೆಗೊಳಿಸಲಾಯಿತು. ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು. ನಿಕಟಪೂರ್ವ ಅಧ್ಯಕ್ಷ ಪಾಂಡುಕುಮಾರ್, ಸಹಾಯಕ ಗವರ್ನರ್ ರೊ. ಸತ್ಯನಾರಾಯಣ, ವಲಯ ಸೇನಾನಿ ರೊ. ಬಸವರಾಜು, ಕುಶಾಲನಗರ, ಕೆ.ಆರ್. ನಗರ, ಎಚ್.ಡಿ.ಕೋಟೆ ಮತ್ತು ಪಿರಿಯಾಪಟ್ಟಣ ಕ್ಲಬ್ ಸದಸ್ಯರು ಮತ್ತು ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಕೂರಗಲ್ಲು ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಬೆಟ್ಟದಪುರ, ಜು.6– ಸಮೀಪದ ಕೂರಗಲ್ಲು ಗ್ರಾಮದ ಹಾಲು ಉತ್ಪಾದಕ ಮಹಿಳಾ ಸಹಕಾರ ಸಂಘಕ್ಕೆ ಬುಧವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಗಾಯಿತ್ರಮ್ಮ ಅಧ್ಯಕ್ಷರಾಗಿ, ಪಾರ್ವತಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಗಾಯಿತ್ರಮ್ಮ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಪಾರ್ವತಿ ಅವರುಗಳು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರಿಬ್ಬರ ಅವಿರೋಧ ಆಯ್ಕೆಯನ್ನು ಸಹಕಾರ ಇಲಾಖೆಯ ಅಧಿಕಾರಿ ಗಿರೀಶ್ ಘೋಷಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಶಿವಕುಮಾರಸ್ವಾಮಿ, ರೈತರು ಉತ್ತಮ ಗುಣಮಟ್ಟದ ಹಾಲನ್ನು ಹಾಕಿ ಹೆಚ್ಚಿನ ಅಭಿವೃದ್ಧಿ ಹೊಂದಬೇಕು. ಸರ್ಕಾರದಿಂದ ಸಾಲ ಸೌಲಭ್ಯ ಪಡೆದು ಉತ್ತಮ ಗುಣಮಟ್ಟದ ಜಾನುವಾರುಗಳನ್ನು ಸಾಕಿ ಆರೋಗ್ಯವಂತ ಹೈನುಗಾರಿಕೆಯನ್ನು ಮಾಡಿ ಅಭಿವೃದ್ಧಿ ಹೊಂದಬೇಕು ಎಂದರು.

ನಿರ್ದೇಶಕರಾದ ಲಕ್ಷ್ಮಮ್ಮ, ಮಂಜುಳಾ, ಸುಂದರಮ್ಮ, ಕವಿತಾ, ಕಮಲಮ್ಮ, ಪದ್ಮ, ಆಶಾ, ಅನುಸೂಯ, ಜ್ಯೋತಿ, ಮುಖಂಡರಾದ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಶಿವಕುಮಾರ್ ಸ್ವಾಮಿ, ಕೆ.ಎಸ್ ಚಂದ್ರು, ಕೃಷ್ಣ, ಜವರೇಗೌಡ, ಅಣ್ಣೇಗೌಡ, ರಾಜು, ರಮೇಶ್, ಸುರೇಶ್, ಪರಮೇಶ್, ಮಂಜು, ಶಂಕರ್, ಕಾರ್ಯದರ್ಶಿ ರೇಖಾ ಇದ್ದರು.

## ಬನ್ನೂರಲ್ಲಿ ಆರೋಗ್ಯ ತಪಾಸಣಾ ಶಿಬಿರ



ಬನ್ನೂರು, ಜು.6– ಸಾರ್ವಜನಿಕರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿರುವ ಬನ್ನೂರಿನ ಲಯನ್ಸ್ ಕ್ಲಬ್ ವತಿಯಿಂದ ಬೃಹತ್ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಜು.10 ರಂದು ಹಮ್ಮಿಕೊಂಡಿದೆ ಎಂದು ಮಾಜಿ ಶಾಸಕ ಎಸ್.ಕೃಷ್ಣಪ್ಪ ಹೇಳಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಉಚಿತ ಆರೋಗ್ಯ ತಪಾಸಣೆ ಬಗ್ಗೆ ವಿವರ ನೀಡಿದ ಅವರು, ಇಂದು ಮನುಷ್ಯನಿಗೆ ಆರೋಗ್ಯ ಬಹು ಮುಖ್ಯ ಎಂದರು.

ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಹಾಗೂ ಬನ್ನೂರಿನ ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಬನ್ನೂರಿನ ಲಯನ್ಸ್ ವಿದ್ಯಾಸಂಸ್ಥೆ ಆವರಣದಲ್ಲಿ ನಡೆಯಲಿದೆ. ಶಿಬಿರದಲ್ಲಿ ಹೃದಯ ರೋಗ, ನರರೋಗ, ಮೂತ್ರಪಿಂಡ, ಮಧುಮೇಹ, ಪಿತ್ತ ಜನಕಾಂಗ, ಕ್ಯಾನ್ಸರ್, ಕೀಲು ಮೂಳೆ, ಗರ್ಭಿಣಿ ಮತ್ತು ಸ್ತ್ರೀ ರೋಗ, ಶಸ್ತ್ರಚಿಕಿತ್ಸೆ, ದಂತ, ಕಿವಿ, ಮೂಗು, ಗಂಟಲು, ಚರ್ಮರೋಗ, ಮಾನಸಿಕ ಆರೋಗ್ಯ ತಜ್ಞರು ಸೇರಿದಂತೆ ಹೆಚ್ಚಿನ ತಜ್ಞ ವೈದ್ಯರು ಭಾಗವಹಿಸಲಿದ್ದು, ಶಿಬಿರದಲ್ಲಿ ಉಚಿತ ವೈದ್ಯ ತಪಾಸಣೆಗಳನ್ನು ನಡೆಸಿ, ಅಗತ್ಯಬಿದ್ದಲ್ಲಿ ಆಸ್ಪತ್ರೆಗೆ ಬರಲು ಹಾಗೂ ಆಸ್ಪತ್ರೆ ವಾಹನದಲ್ಲಿ ಕರೆತಂದು ಹೆಚ್ಚಿನ ಚಿಕಿತ್ಸೆ ನೀಡಿ ಕಳುಹಿಸಿಕೊಡಲಾಗುತ್ತದೆ.

ಇಸಿಜಿ, ರಕ್ತ ಪರೀಕ್ಷೆ ಮಾಡಿ ಉಚಿತ ಔಷಧ ನೀಡಲಾಗುತ್ತದೆ. ಅಲ್ಲದೇ ವೈದ್ಯಕೀಯ ಸೌಲಭ್ಯ, ಜನರಲ್ ವಾರ್ಡ್, ಶಸ್ತ್ರಚಿಕಿತ್ಸೆ, ರೋಗಿಗೆ ಊಟದ ವ್ಯವಸ್ಥೆ ಕಣ್ಣಿನ ಶಸ್ತ್ರಚಿಕಿತ್ಸೆ, ಮಸೂರ ಅಳವಡಿಕೆ ಹಾಗೂ ಉಚಿತ ಕನ್ನಡಕಗಳನ್ನು ನೀಡಲಾಗುತ್ತದೆ.

## ತಿ.ನರಸೀಪುರದಲ್ಲಿ ಡಾ.ಬಾಬು ಜಗಜೀವನ ರಾಂ ಪುಣ್ಯಸ್ಮರಣೆ





ತಿ.ನರಸೀಪುರ, ಜು.6– ತಾಲೂಕಿನ ವಿವಿಧೆಡೆ ಹಸಿರುಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ ರಾಂ ಅವರ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

**ಆದರ್ಶ ಪಾಲಿಸಿ:** ಅನೇಕ ಜನಪರ ಯೋಜನೆಗಳನ್ನು ನೀಡಿದ ಹಸಿರುಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಂ ಅವರ ತತ್ವ ಹಾಗೂ ಆದರ್ಶಗಳನ್ನು ನಾವೆಲ್ಲರೂ ರೂಢಿಸಿಕೊಳ್ಳಬೇಕಿದೆ ಎಂದು ತಾಲೂಕು ಬಾಬು ಜಗಜೀವನ ರಾಂ ಜನ ಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಶಂಕರ್ ಹೇಳಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಹಮ್ಮಿಕೊಳ್ಳಲಾಗಿದ್ದ ಡಾ.ಬಾಬು ಜಗಜೀವನರಾಂ ಅವರ 37ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಬಾಬೂಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿ ಮಾತನಾಡಿದರು. ಬಾಬೂಜಿ ಅವರು ಸೃಷ್ಟಿಸಿದ ಹಸಿರು ಕ್ರಾಂತಿಯಿಂದ ದೇಶದಲ್ಲಿ ಆಹಾರದ ಕೊರತೆ ದೂರವಾಯಿತು ಎಂದರು. ಸಂಘದ ಉಪಾಧ್ಯಕ್ಷ ಸಿದ್ದನಹುಂಡಿ ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ವಾಟಾಳ್ ಜಿ.ಎನ್.ಪುಟ್ಟಸ್ವಾಮಿ, ಬಿ.ಮಾದೇಶ್, ಬನ್ನೂರು ಪುರಸಭಾ ಸದಸ್ಯ ಶಿವಣ್ಣ, ಬಿ. ಮಹದೇವ, ಎನ್.ಡಿ.ರಾಚಪ್ಪ ಎಂ.ಮೂರ್ತಿ, ರಾಜಣ್ಣ, ಎಂ. ಮಹದೇವಸ್ವಾಮಿ, ಶಿವು, ಕಾಂತರಾಜು, ನಿಂಗರಾಜು, ವಿ.ಎಸ್.ಶಿವಕುಮಾರ್, ಹುಣಸೂರು ಸಿದ್ದರಾಜು, ಲಿಂಗರಾಜು, ಶಿವರಾಜು, ವಡ್ಡಲಯ್ಯ, ಬಸವ ರಾಜು, ಸುರೇಶ, ಲಿಂಗರಾಜು. ಕೆ.ಸಿ, ಡಿ.ಎನ್. ರಮೇಶ್, ಮೂಗೂರು ಸಿದ್ದರಾಜು, ತಲಕಾಡು ಮಹದೇವ ಇತರರು ಹಾಜರಿದ್ದರು.

**ಬೈರಾಪುರ :** ಹಸಿರುಕ್ರಾಂತಿಯ ಹರಿಕಾರ ಮತ್ತು ಮಾಜಿ ಪ್ರಧಾನಿ ಬಾಬು ಜಗಜೀವನ್ ರಾಂ ಅವರ 37ನೇ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಬೈರಾಪುರ ಗ್ರಾಮದಲ್ಲಿ ಆಚರಿಸಲಾಯಿತು.

ಪಟ್ಟಣದ ಬೈರಾಪುರದಲ್ಲಿ ಹಮ್ಮಿಕೊಂಡಿದ್ದ, ಬಾಬೂಜಿ ಭಾವಚಿತ್ರಕ್ಕೆ ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು. ಒಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದ ಬಾಬೂಜಿ ಉಪಪ್ರಧಾನಿ ಹುದ್ದೆ, ಕಾರ್ಮಿಕ ಮತ್ತು ಕೃಷಿ ಸಚಿವರಾಗಿ ಆಯ್ಕೆಯಾಗಿದ್ದು, ದೈವಾಂಶಸಂಭೂತರು. ಹಾಗಾಗಿ ಇಷ್ಟೊಂದು ಸಾಧನೆ ಮಾಡಲು ಸಾಧ್ಯವಾಯಿತು ಎಂದರು.

70ರ ದಶಕದಲ್ಲಿ ಭಾರತದಲ್ಲಿದ್ದ ಬಡ ತನ ನೀಗಲು ಅಂದಿನ ಕೃಷಿ ಸಚಿವರಾಗಿದ್ದ ಅವರು ಆಧುನಿಕ ಕೃಷಿಯಲ್ಲಿ ಪಾಶ್ಚಿಮಾತ್ಯ ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಆಧುನಿಕ ಬೇಸಾಯವನ್ನು ಭಾರತದಲ್ಲಿ ಅಳವಡಿಸಿಕೊಂಡು ಆಹಾರ ಹೆಚ್ಚಿಸಿ ಆಹಾರದ ಬರ ನೀಗಿಸಿದರು. ಹಾಗಾಗಿ ಅವರನ್ನು ಹಸಿರು ಕ್ರಾಂತಿ ಹರಿಕಾರರು ಎಂದು ಕರೆಯಲಾಗುತ್ತಿದೆ ಎಂದರು.



## ಮೈಸೂರು ಬೇಸಿಗೆ ರೇಸುಗಳು

7ನೇ ದಿನ, ಶುಕ್ರವಾರ 7–7–2023

**ಇಂದಿನ ರೇಸಿಗೆ ನಮ್ಮ ಆಯ್ಕೆ**

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಇರ್ಟಾಸಿ ಪ್ಲೇಟ್ ಡಿ2–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ನಾಟ್ ಸೋನಾಟಿ 2. ಹುರೇಮ್ 3. ಎನ್‌ರಿಚ್‌ಮೆಂಟ್

II. ಇರ್ಟಾಸಿ ಪ್ಲೇಟ್ ಡಿ1–1200 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಸ್ಟಾರ್ ಸ್ಟೆಕ್ 2. ಬ್ರಿಲಿಯಂಟ್ ಲೈಟ್ 3. ಕಂಟ್ರೀಸ್ ಪೇಮ್

III. ಸುಂಟಿಕೊಪ್ಪ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಪವರ್ ಆಫ್ ಥಿಯ 2. NRI ಟಚ್ 3 ವಾಲ್ ಕೇರಿ

IV. ಆನೆಕಲ್ ಪ್ಲೇಟ್ – 1400 ಮೀ. ರೇಟೆಡ್ 20 ರಿಂದ 45. (NO WHIP) ಮ.3.30ಕ್ಕೆ
1. ತಾರೇಕ್ 2. ಡ್ರೀಮ್ ಮೆಷಿನ್ 3. ಮೈಲೋಸ್

V. ಎಸ್.ವಿ.ಸುಬ್ರಮಣ್ಯಂ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಬ್ರೈಟೆಸ್ಟ್ ಸ್ಟಾರ್ 2. ಅಂಕುಶ 3. ಹಿಡನ್ ಪ್ಲೆಷರ್

VI. ಮೂಡಿಗೆರೆ ಪ್ಲೇಟ್–1400 ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಫನ್ ಅಂಡ್ ಲಾಫ್ಟರ್ 2 ಮೊಘಲ್ 3. ಸೆಗೇರಾ

VII. ಕೆಮ್ಮಣ್ಣು ಗುಂಡಿ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಹೀರೋಯಿಸಮ್ 2. ಲಕ್ಕಿ ಪಾಯಿಂಟ್ 3. ಔರ್ಲಿ

| | |
|---|---|
| ದಿನದ ಅತ್ಯುತ್ತಮ | : ಬ್ರೈಟೆಸ್ಟ್ ಸ್ಟಾರ್ |
| ಡಬ್ಬಲ್ | : ತಾರೇಕ್, ಫನ್ ಅಂಡ್ ಲಾಫ್ಟರ್ |
| ಜಾಕ್‌ಪಾಟ್ | : 3, 4, 5, 6 ಮತ್ತು 7 |
| ಮಿನಿ ಜಾಕ್‌ಪಾಟ್ | : 4, 5, 6 ಮತ್ತು 7 |
| I ಟ್ರಿಬಲ್ | : 2, 3 ಮತ್ತು 4 |
| II ಟ್ರಿಬಲ್ | : 5, 6 ಮತ್ತು 7 |
| ಎಕ್ಸ್‌ಆಕ್ಟ್ | : 1 ರಿಂದ 7 |

ಟಿಪ್‌ಸ್ಟರ್ ಪಿಜಿಸಿ

## ಸರಗೂರಲ್ಲಿ ಬಾಬೂಜಿ ಪುಣ್ಯಸ್ಮರಣೆ



ಸರಗೂರು, ಜು.6– ಡಾ.ಬಾಬು ಜಗಜೀವನ ರಾಮ್ ಅವರು ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಿದ್ದರಲ್ಲದೆ ಅತ್ಯುತ್ತಮ ಸಂಸದೀಯ ಪಟುವಾಗಿದ್ದರು ಎಂದು ಪಪಂ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ತಿಳಿಸಿದರು.

ಸರಗೂರು ತಾಲೂಕು ಕಚೇರಿಯಲ್ಲಿ ಗುರುವಾರ ನಡೆದ ಬಾಬು ಜಗಜೀವನ ರಾಮ್ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ತಹಶೀಲ್ದಾರ್ ಶಂಶಲಾಂ, ಡಾ.ಬಾಬು ಜಗಜೀವನರಾಮ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಉಪ ತಹಶೀಲ್ದಾರ್ ಸುನೀಲ್, ಪಪಂ ಮುಖ್ಯಾಧಿಕಾರಿ ಮಂಜುನಾಥ್, ಪಿಎಸ್‌ಐ. ಸಿ.ನಂದೀಶ್‌ಕುಮಾರ್ ಹಾಗೂ ತಾಲೂಕು ಆಡಳಿತವರ್ಗ ಹಾಜರಿದ್ದರು.

## ಮಾರಾಟಾಧಿಕಾರಿ (ಸರ್ಕಾರ)

ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮೈಸೂರು ಉಪವಿಭಾಗ, ಮೈಸೂರು ಹಾಗೂ ಮಾರಾಟಾಧಿಕಾರಿಗಳು

### ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ಮುಡಾ ಕಛೇರಿ ಆವರಣ, ಜೆ.ಎಲ್.ಬಿ ರಸ್ತೆ, ಮೈಸೂರು.

ದೂರವಾಣಿ: 2424246

ಮೊಬೈಲ್ ಸಂಖ್ಯೆ: 9880875242, 9663859200

### ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಮಹಾಜನಗಳಿಗೂ ತಿಳಿಯಪಡಿಸುವುದೇನೆಂದರೆ, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು ಈ ಸಂಘದ ಕೆಳಕಂಡ ಸದಸ್ಯರು ಸದರಿ ಸಂಘದಿಂದ ಸಾಲ ಪಡೆದು, ಸಾಲ ಮರುಪಾವತಿ ಮಾಡದೇ ಸಾಲವು ಸುಸ್ತಿಯಾದ ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ಕಾಯಿದೆಯನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರ ನ್ಯಾಯಾಲಯದಲ್ಲಿ ದಾವಾ ಡಿಕ್ರಿ ಪಡೆಯಲಾಗಿದ್ದು, ಹಾಗೂ ಅಮಲ್ದಾರಿ ಅರ್ಜಿಯನ್ನು ನ್ಯಾಯಾಲಯದಿಂದ ಪಡೆಯಲಾಗಿದೆ.

ಅದರಂತೆ ಬಾಕಿ ಇರುವ ಸಾಲದ ಮೊಬಲಗಿನ ವಸೂಲಾತಿಗಾಗಿ ಈ ಕೆಳಕಂಡ ಸುಸ್ತಿದಾರರ ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಬಾಧ್ಯತೆಗಳು ಬಹಿರಂಗ ಹರಾಜು ಮಾಡಲಾಗುವುದು. ಸದರಿಯವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಹಾಗೂ ಅವರ ವಿರುದ್ಧ ಪಡೆಯಲಾದ ಅಮಲ್ಜಾರಿ ಸಂಖ್ಯೆ ಮತ್ತು ಅವರಿಂದ ವಸೂಲಾಗಬೇಕಾದ ಮೊಬಲಗಿನ ವಿವರಗಳನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

| ಕ್ರಸಂ | ಬಾಕಿದಾರರ ಹೆಸರು ಮತ್ತು ಜಾಮೀನುದಾರರ ಹೆಸರು | ಸುಸ್ತಿದಾರರ ಸದಸ್ಯರ ವಿಳಾಸ | ಅಮಲ್ಜಾರಿ ಸಂಖ್ಯೆ | ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ವಿಳಾಸ ಮತ್ತು ಚೆಕ್ಕುಬಂದಿ | ಸಂಘಕ್ಕೆ ಬರಬೇಕಾದ ಮೊಬಲಗು | ಹರಾಜು ದಿನಾಂಕ ಮತ್ತು ಸಮಯ | ಹರಾಜು ನಡೆಯುವ ಸ್ಥಳ |
|---|---|---|---|---|---|---|---|
| 1. | ಶ್ರೀ ಎಂ.ಪ್ರತಾಪ್ ಬಿನ್ ಲೇಟ್.ಪಿ.ವಿ.ಮಹದೇವಯ್ಯ ಜಾಮೀನುದಾರರು 1. ಶ್ರೀಮತಿ.ಪಿ.ಹೇಮಲತಾ ಕೋಂ. ಎಂ.ಪ್ರತಾಪ್ 2. ಶ್ರೀ.ವೈ.ಟಿ. ಮಂಜುನಾಥ್ ಬಿನ್. ಲೇಟ್.ವೈ.ಎನ್. ತಮ್ಮಯ್ಯ | ನಂ.402, ಹೈಟೆನ್ಷನ್ ಡಬಲ್ ರಸ್ತೆ, 3ನೇ ಫೇಸ್, 4ನೇ ಹಂತ ವಿಜಯನಗರ ಮೈಸೂರು | ಡಿಆರ್‌ಎಂ / ದಾವಾ /ಸಿ7 /70/07/ 2021–2022 | ಮೈಸೂರು ನಗರ, ದೇವರಾಜ ಮೊಹಲ್ಲಾ, ವಿನಾಯಕ ನಗರ, 7ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆಯಲ್ಲಿರುವ 5/1 ರ ಮನೆ ಇದರ ಚೌತರ್ಫು. ಪೂರ್ವಕ್ಕೆ –ನೆಲ ಅಂತಸ್ತಿನಲ್ಲಿರುವ ಪೂರ್ವದ ಕಡೆಯ ನನ್ನ ಬಾಬ್ತು ಸ್ವತ್ತು. ಪಶ್ಚಿಮಕ್ಕೆ–ಗೋವಿಂದಪ್ಪನವರ ಸ್ವತ್ತು. ಉತ್ತರಕ್ಕೆ –ರಸ್ತೆ ದಕ್ಷಿಣಕ್ಕೆ ಶ್ರೀಕಂಠಶಾಸ್ತ್ರಿರವರ ಸ್ವತ್ತು. ಈ ಮಧ್ಯೆ ಇರುವ ಪೂ.ಪ.26 ಅಡಿಗಳು. ದಕ್ಷಿಣೋತ್ತರ 39 1/4 ಅಡಿ ಪ್ಲಿಂತ್ ಏರಿಯಾ 672.65 ಚ.ಅ. ಮತ್ತು ನಿವೇಶನದ ವಿಸ್ತೀರ್ಣ 1091.81ಅಡಿ | ರೂ 34,75,175/– +ಬಡ್ಡಿ+ಇತರೆ ಖರ್ಚು ಪ್ರತ್ಯೇಕ | ದಿನಾಂಕ 18.07.2023 ರ ಮಂಗಳವಾರ ಮಧ್ಯಾಹ್ನ 12.00 ಗಂಟೆಗೆ | ಮೈಸೂರು ನಗರ ದೇವಾರಾಜ ಮೊಹಲ್ಲಾ ವಿನಾಯಕ ನಗರ 7ನೇ ಅಡ್ಡರಸ್ತೆ 6ನೇ ಮುಖ್ಯರಸ್ತೆ, ಮನೆ ನಂ 5/1 ರಲ್ಲಿ |

### ಷರತ್ತುಗಳು

1. ಮೇಲೆ ತಿಳಿಸಲ್ಪಟ್ಟಿರುವ ಕಟ್ಟಡ (ಸ್ಥಿರಾಸ್ತಿಯನ್ನು) ಸಾರ್ವಜನಿಕ ಹರಾಜು ಮಾಡಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಯುವುದಕ್ಕೆ 1 ಗಂಟೆ ಮುಂಚಿತವಾಗಿ ಠೇವಣಿ ರೂ.20,000/–ಗಳನ್ನು ಸಂಘಕ್ಕೆ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು.
3. ಹರಾಜಿನಲ್ಲಿ ಭಾಗವಹಿಸಿ, ಹರಾಜಿನ ಅಖೈರು ಮೊಬಲಗಿನ ಪೈಕಿ ಕೂಡಲೇ ಆ ಹಣದ ಶೇಕಡ 25% ರಷ್ಟು ಮೊಬಲಗನ್ನು ಹರಾಜಿನ ಸಮಯದಲ್ಲಿ ಸ್ಥಳದಲ್ಲೇ ಪಾವತಿ ಮಾಡಿ ರಶೀದಿ ಪಡೆಯುವುದು. ಉಳಿಕೆ ಹಣವನ್ನು ಹರಾಜು ದಿನಾಂಕದಿಂದ 30 ದಿನಗಳೊಳಗಾಗಿ ಸಂಘಕ್ಕೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಬಿಡ್‌ದಾರರು ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4) ಆಸಕ್ತಿ ಹೊಂದಿದ ಬಿಡ್‌ದಾರರು ಕಟ್ಟಡದ (ಸ್ಥಿರಾಸ್ತಿಯನ್ನು) ಆದಷ್ಟು ಮುಂಚಿತವಾಗಿ ಪರಿಶೀಲನೆ ಮಾಡಿಕೊಳ್ಳಬಹುದು.
5) ಮೇಲೆ ಹೇಳಿದ ಪ್ರಕಾರ ನಿರ್ಣಯಿಸಿದ ಸಮಯದೊಳಗೆ ಹಣವನ್ನು ಠೇವಣಾತಿ ಕಟ್ಟದಿದ್ದರೆ ಅಥವಾ ದರಖಾಸ್ತು ಹಣದ ಪೈಕಿ ಉಳಿದ ಮೊಬಲಗನ್ನು ಕಟ್ಟದಿದ್ದರೆ ಪ್ರಥಮ ದರಖಾಸ್ತುದಾರನ ಖರ್ಚು ಅಥವಾ ನಷ್ಟ ಬಾಧ್ಯತೆ ಮೇಲೆ ಮಾರಾಟದ ಹೊಸ ಇಸ್ತಿಹಾರವನ್ನು ಪ್ರಕಟಿಸಿದ ನಂತರ ಕಟ್ಟಡವು ಮಾರಾಟವಾದಿತು.
6) ಹರಾಜು ಆದ 30 ದಿವಸಗಳ ನಂತರ ಹರಾಜನ್ನು ಮಾರಾಟಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರು ಸ್ಥಿರೀಕರಿಸುವವರು ಸ್ಥಿರೀಕರಿಸಿದ ನಂತರವೇ ವಿಲೇವಾರಿ ಕ್ರಮವಿಡಲಾಗುವುದು.
7) ಸಾರ್ವಜನಿಕರು ಬಿಡ್ ಮಾಡದಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ 101 (ಸಿ) ಪ್ರಕಾರ ಸಂಘಕ್ಕೆ ಸ್ಥಿರಾಸ್ತಿಯನ್ನು ಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತದೆ.
8) ಬಾಕಿದಾರರೇ ಆಗಲಿ ಅಥವಾ ಅವರ ಅನುಮತಿ ಪಡೆದ ಅಧಿಕೃತ ವ್ಯಕ್ತಿಯಾಗಲಿ ಹರಾಜು ವೇಳೆಗಿಂತ ಮುಂಚೆ ಅಮಲ್ಜಾರಿ ಮೊಬಲಗನ್ನು ಕಟ್ಟಿದಲ್ಲಿ ಹರಾಜನ್ನು ರದ್ದುಗೊಳಿಸಲಾಗುತ್ತದೆ.
9) ಹರಾಜಿನ ಅಖೈರು ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳಿಗೆ ಸೇರಿರುತ್ತದೆ.
10) ಹರಾಜಿನ ದಿನಾಂಕದಂದು ಆಡಳಿತಾತ್ಮಕ ಕಾರಣಗಳಿಂದ ಹರಾಜು ನಡೆಯದೇ ಇದ್ದ ಪಕ್ಷದಲ್ಲಿ ಯಾವುದೇ ಪ್ರಕಟಣೆ ನೀಡದೇ ಮುಂದಿನ 7 ದಿನಕ್ಕೆ ಕ್ರಮವಾಗಿ ಮಧ್ಯಾಹ್ನ 12.00 ಗಂಟೆಗೆ ಸದರಿ ಸ್ಥಳದಲ್ಲೇ ಮತ್ತೆ ಹರಾಜನ್ನು ನಡೆಸಲಾಗುವುದು.
11) ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಗಳ ವಿವರಗಳ ಬಗ್ಗೆ ಅಥವಾ ಇತರೆ ಸಂಬಂಧಪಟ್ಟ ಮಾಹಿತಿ ಬಗ್ಗೆ ಸೊಸೈಟಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
12) ಹರಾಜಿನ ಸಂಬಂಧ ಯಾವುದೇ ತಕರಾರು ಉಂಟಾಗಿದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉಪ ವಿಭಾಗ, ಮೈಸೂರು ಇವರ ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು
ಈ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶ್ರೀ ಹೆಚ್.ಕೆ. ಸತೀಶ್, ಮಾರಾಟಾಧಿಕಾರಿ (ಸರ್ಕಾರ),
ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಮಾರಾಟಾಧಿಕಾರಿಗಳು, ಮೈಸೂರು

ಸ್ಥಳ: ಮೈಸೂರು
ದಿನಾಂಕ: 07.07.2023



| | Land | Building | Power |
|---|---|---|---|
| Building No. | Sq.feet | Apprx Sq.feet | HP |
| 1 | 10,000 | 5,500 | 95 |
| 2 | 10,000 | 5,000 | 65 |
| 3 | 10,000 | 4,500 | 60 |
| 4 | 10,000 | 2,000 | 5 |



